# “ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ”

**ಪ್ರೊ. ವಿ. ಜಗನ್ನಾಥ** ಮತ್ತು ತರಬೇತಿ ಸಂಯೋಜಕರು ರಾ.ನ.ಸಂ. ಮತ್ತು ಬೋಧಕರು

**ಪೀಠಿಕೆ :**

ನಗರೀಕರಣ ತೀವ್ರವಾಗಿ ಮೂಲಭೂತ ಸೌಕರ್ಯ ಮತ್ತು ಸೇವೆಗಳ ಪೂರೈಕೆ/ ಬೇಡಿಕೆ ಹೆಚ್ಚುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಸಾಖಾಸ) ಮಾದರಿಗಳ ವಿವಿಧ ಬಗೆಯ ಮಾದರಿಗಳು ಈಗಾಗಲೇ ಅಪಾರವಾದ ಅನುಭವವನ್ನು ಕೂಡ ಮಾಡಿವೆ. ಜನರ ಜೀವನ ಮಟ್ಟವನ್ನು ಮತ್ತು ಪರಿಸರ ಸಂರಕ್ಷಣೆಗೆ ಪೂರಕವಾದ ರೀತಿಯಲ್ಲಿ ಸಾಖಾಸ ಬಳಕೆ ಸ್ಥಳೀಯ ಸಂಸ್ಥೆಗಳ ನಿರ್ವಹಣೆಯಲ್ಲಿ ತೊಡಗಿರುವವರಿಗೆ ಸವಾಲಾಗಿದೆ. ಸಾಖಾಸದ ಬಗ್ಗೆ ಅಪಾರವಾದ ಸಾಮರ್ಥ್ಯವನ್ನು ಗಮನಿಸಿದರೂ ಅನೇಕ ತಪ್ಪುಗ್ರಹಿಕೆಗಳು ಗೊಂದಲ ಮತ್ತು ಪ್ರತಿರೋಧಗಳು ಪ್ರತಿಕ್ರಿಯಾತ್ಮಕವಾಗಿ ಕಂಡುಬರುತ್ತಿವೆ.

- ಸಾಖಾಸ ಮಾರ್ಗವು ಮುಂದುವರೆಯುತ್ತಿರುವ ರಾಷ್ಟ್ರಗಳ ಸ್ಥಳೀಯ ಸರ್ಕಾರಗಳಿಗೆ ಅಗತ್ಯವಿರುವ ಸೇವೆಗಳನ್ನು ಪೂರೈಸಲು ಆರ್ಥಿಕ ತೊಡಕುಗಳ ಪರಿಸ್ಥಿತಿಯಲ್ಲಿ ಒಂದು ಕಾರ್ಯಸಾದು ವಿಧಾನ.
- ಶುದ್ಧ ನೀರಿನ ಸರಬರಾಜು, ನಿರಂತರ ವಿದ್ಯುಚ್ಛಕ್ತಿ ಪೂರೈಕೆ, ಉತ್ತಮ ಸೇವೆ ಮೂಲಭೂತ ಸೌಕರ್ಯಗಳಾದ ರಸ್ತೆ ಸೇತುವೆಗಳು, ಕ್ರೀಡೆ ಮತ್ತು ಮನೋರಂಜನ ವ್ಯವಸ್ಥೆಗಳಿಗೆ ಅಪಾರವಾದ ಹಣದ ಅವಶ್ಯಕತೆ ಇರುತ್ತದೆ.
- ಸೂಕ್ತ ಅನುಭವ, ಸಾಂಸ್ಥಿಕ ನಿರ್ವಹಣೆ ಸಾಮರ್ಥ್ಯ ಮತ್ತು ಆರ್ಥಿಕ ಸ್ಥಿರತೆಯನ್ನು ಹೊಂದಲು ಖಾಸಗಿ ಸಾರ್ವಜನಿಕ ಸಹಭಾಗಿತ್ವ ಪ್ರಯೋಜನಕಾರಿ.
- ಜಾಗತಿಕವಾಗಿ ಈಗಾಗಲೇ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಸ್ಥೆಗಳು ‘ಸಾಖಾಸ’ ವ್ಯವಸ್ಥೆಗಳಿಗೆ ಉತ್ತೇಜನ ನೀಡುತ್ತಿದ್ದು, ಅಪಾರವಾದ ಅನುಭವ, ನೀತಿ, ಅನುಷ್ಠಾನ ತೊಡಕುಗಳ ಬಗ್ಗೆ ತಿಳುವಳಿಕೆ ಇದೆ.
- ಸ್ಥಳೀಯ ಸಂಸ್ಥೆಗಳಲ್ಲಿ ಸಾಖಾಸದ ಅನುಭವದ ಕಲಿತ ಪಾಠಗಳನ್ನು ಮನೋಭಾವ, ಜ್ಞಾನ ಮತ್ತು ನೈಪುಣ್ಯದ ಕ್ಷೇತ್ರಗಳಲ್ಲಿ ನೈಜವಾಗಿ ಪರಿಗಣಿಸಿ ಕರ್ನಾಟಕದ ನಗರ ಸ್ಥಳೀಯ ಸಂಸ್ಥೆಯ ಸಿಬ್ಬಂದಿ ಮತ್ತು ಪ್ರತಿನಿದಿಗಳಿಗೆ ನೈತಿಕ ಬಲವನ್ನು ದೊರಕಿಸುವುದು ಈ ತರಬೇತಿಯ ಉದ್ದೇಶ.
- ಸಾಖಾಸ ಮಾದರಿಗಳ ಅನುಷ್ಠಾನದಲ್ಲಿನ ತೊಡಕುಗಳನ್ನು ಗುರುತಿಸಿ ಅವುಗಳ ಪರಿಹಾರದಲ್ಲಿ ತಮ್ಮ ಕ್ಷೇತ್ರಮಟ್ಟದ ಅನುಭವವನ್ನು ದಾಖಲಿಸಿ ಗುಂಪು ಚಟುವಟಿಕೆಗಳಲ್ಲಿ ದೃಢೀಕರಿಸುವ ಉದ್ದೇಶವನ್ನು ಈ ತರಬೇತಿ ಹೊಂದಿದೆ.

ಜನವರಿ ೨೦೧೦ ರಲ್ಲಿ ಭಾರತ ಮತ್ತು ಮೊರಾಕ್ಕೊ ದೇಶದಲ್ಲಿ ನಗರಾಭಿವೃದ್ಧಿಯಲ್ಲಿ ಕ್ರೀಯಾಶೀಲವಾಗಿರುವ ಖಾ.ಸಾ.ಸ ಮಾದರಿಗಳನ್ನು ಅಂತರಾಷ್ಟ್ರೀಯ ತರಬೇತಿಯಲ್ಲಿ ಕರ್ನಾಟಕದ ೧೩ ವೃತ್ತಿಪರರು ತರಬೇತಿದಾರರ ವಿಶ್ಲೇಷಿಸಿ ನಂತರ ಮಾರ್ಚ್ ೨೦೧೦ ರಲ್ಲಿ ಪೂನಾದ ಯಶದಾದಲ್ಲಿರುವ ನಗರಾಭಿವೃದ್ಧಿ ಸಂಸ್ಥೆಯಲ್ಲಿ ತರಬೇತಿದಾರರ ತರಬೇತಿ ನಡೆಸಿದ ನಂತರ ಹೊರಬಂದ ಅನೇಕ ಸಾಖಾಸ ಪ್ರಕ್ರಿಯೆಗಳನ್ನು ಈ ತರಬೇತಿಯ ಕೈಪಿಡಿಯಲ್ಲಿ ಸೇರಿಹಿಡಿಯುವ ಪ್ರಯತ್ನ ಇಲ್ಲಿದೆ.

**– ಪ್ರೊ. ವಿ. ಜಗನ್ನಾಥ**

**ರಾಜ್ಯ ನಗರಾಭಿವೃದ್ಧಿ ಸಂಸ್ಥೆ,**
ಆಡಳಿತ ತರಬೇತಿ ಸಂಸ್ಥೆಯ ಆವರಣ, ಲಲಿತ ಮಹಲ್ ರಸ್ತೆ, ಮೈಸೂರು – 11
ದೂರವಾಣಿ: 0821–2520116 ಫ್ಯಾಕ್ಸ್: 0821–2520164
e-mail: directorsiud@yahoo.co.in web:www.siudmysore.gov.in

# ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ

## 4. ಪಠ್ಯಕ್ರಮ

ದಿನಾಂಕ:...............................

**ಸ್ಥಳ:...............................**

**–: ಪ್ರಶಿಕ್ಷಣಾರ್ಥಿಗಳು :–**

ಅಧ್ಯಕ್ಷರು, ಉಪಾಧ್ಯಕ್ಷರು, ಯೋಜನಾ ನಿರ್ದೇಶಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಪರಿಸರ ಅಭಿಯಂತರರು

ಕಾರ್ಯಾಗಾರ ಸಮನ್ವಯಾಧಿಕಾರಿ

**ಪ್ರೊ. ವಿ. ಜಗನ್ನಾಥ**

ಪ್ರಾಧ್ಯಾಪಕರು, ಹುಡ್ಕೋ ಪೀಠ, ರಾ.ನ.ಸಂ. ಮೈಸೂರು.

(94480 50595)

ಕಾರ್ಯಾಗಾರ ಸಹ ಸಮನ್ವಯಾಧಿಕಾರಿ

**ಕು॥ ದೀಪಾ**

ಬೋಧಕರು, ರಾ.ನ.ಸಂ. ಮೈಸೂರು.

(98807 94584)

ತರಬೇತಿ ಸಹಾಯಕರು

**ಶ್ರೀ ಕಲೀಮುಲ್ಲಾ ಎ**

ಸಂಶೋಧನಾ ಸಹಾಯಕರು, ರಾ.ನ.ಸಂ, ಮೈಸೂರು.

(98800 22386)

**ಅಧಿವೇಶನಗಳು:**

| | |
|---|---|
| 1. ಬೆಳಿಗ್ಗೆ 09–30 ರಿಂದ 10–30 | |
| 2. ಬೆಳಿಗ್ಗೆ 10–30 ರಿಂದ 11–30 | 11–30 ರಿಂದ 11–45 ಕಾಫಿ/ಟೀ ವಿರಾಮ |
| 3. ಬೆಳಿಗ್ಗೆ 11–45 ರಿಂದ 12–45 | |
| 4. ಮಧ್ಯಾಹ್ನ 12–45 ರಿಂದ 02–00 | 02–00 ರಿಂದ 02–30 ಭೋಜನ ವಿರಾಮ |
| 5. ಮಧ್ಯಾಹ್ನ 02–30 ರಿಂದ 03–30 | 03–30 ರಿಂದ 03–45 ಕಾಫಿ/ಟೀ ವಿರಾಮ |
| 6. ಮಧ್ಯಾಹ್ನ 03–45 ರಿಂದ 04–45 | |
| 7. 04–45 ನಂತರ | |

**ಕಾರ್ಯಾಗಾರದ ಉದ್ದೇಶಗಳು**

ಕಾರ್ಯಾಗಾರದ ನಂತರ ಪ್ರಶಿಕ್ಷಣಾರ್ಥಿಗಳು ಈ ಕೆಳಕಾಣಿಸಿದ ಕ್ಷೇತ್ರದಲ್ಲಿ ಜ್ಞಾನ ಮತ್ತು ನೈಪುಣ್ಯ ಪಡೆಯಲು ಶಕ್ತರಾಗುತ್ತಾರೆ.

**ಮನೋಭಾವ:**

- ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ ಮಾದರಿಗಳನ್ನು ಸ್ಥಳೀಯ ಸಂಸ್ಥೆಗಳಲ್ಲಿ ಬೆಳೆಸಲು ಪೂರಕ ಮನೋಭಾವ ಗಳಿಸುವುದು.
- ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ ಮಾದರಿಗಳನ್ನು ಬಳಸುವಲ್ಲಿ ಸಾಮಾಜಿಕ ಬದ್ಧತೆಯನ್ನು ವ್ಯಕ್ತಪಡಿಸುವುದು.

**ಜ್ಞಾನ:**

- ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ ಮಾದರಿಗಳನ್ನು ಮೂಲಭೂತ ಸೌಕರ್ಯ ಮತ್ತು ಸೇವಾ ವಲಯಗಳಲ್ಲಿ ಪಟ್ಟಿ ಮಾಡುವುದು.
- ಆರ್ಥಿಕ ಮಜಲುಗಳನ್ನು ಕರಾರು ಒಪ್ಪಂದಗಳನ್ನು ವಿವರಿಸುವುದು ಹಾಗೂ ಹರಾಜು ಮತ್ತು ಹಾನಿಗಳನ್ನು ವಿವರಿಸುವುದು.

**ನೈಪುಣ್ಯ:**

- ಉದಾಹರಣೆಗಳನ್ನು ಬಳಸಿ ವಿಶ್ಲೇಷಣೆಗಳ ಮೂಲಕ ಸಮಸ್ಯೆಗಳನ್ನು ಗುರುತಿಸುವುದು.
- ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನದ ತೊಡಕುಗಳ ನಿವಾರಣೆ ಗುರುತಿಸುವುದು.
- ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನದ ಮಾದರಿಗಳನ್ನು ಸಹ್ಯ ಅಭಿವೃದ್ಧಿಗೆ ಪಟಿ ಮಾಡುವುದು.

-: ದೈನಂದಿನ ಕಾರ್ಯಕ್ರಮ ಪಟ್ಟಿ :-

ದಿನ/ ಅಧಿವೇಶನಗಳು

ದಿನಾಂಕ ವಿಷಯ ಸಂಪನ್ಮೂಲ ವ್ಯಕ್ತಿಗಳು

| | | |
|---|---|---|
| **ದಿನ 1** | 1 | ನೊಂದಣಿತರಬೇತಿಯ ಪರಿಚಯ ಪ್ರಶಿಕ್ಷಣಾರ್ಥಿಗಳ ಪರಿಚಯ |
| | 2 | ಉದ್ಘಾಟನೆ ಮತ್ತು ಆಶಯ ಭಾಷಣ: ನಗರಾಭಿವೃದ್ಧಿಯಲ್ಲಿ ಸಾಖಾಸ-ಹೊ.ಅ. ಮುಖ್ಯ ವಿಷಯಗಳು |
| | 3 | ಸಹ್ಯ ನಗರಾಭಿವೃದ್ಧಿ |
| | 4 | ಮೂಲಭೂತ ಸೌಕರ್ಯ ಅಭಿವೃದ್ಧಿ |
| | 5 | ಸಾ.ಖಾ.ಸ.-ಹೊ.ಅ.- ಪರಿಕಲ್ಪನೆ |
| | 6 | ಅಭ್ಯಾಸಗಳು-ಯಶೋಗಾಥೆಗಳ ವಿಶ್ಲೇಷಣೆ |
| **ದಿನ 2** | 1 & 2 | ಯೋಜನಾ ಆರ್ಥಿಕ ನಿರ್ವಹಣೆ |
| | 3 & 4 | ಹರಾಜು ಮತ್ತು ಒಪ್ಪಂದ ಪ್ರಕ್ರಿಯೆ ಬೆದರಿಕೆ ನಿವಾರಣೆ |
| | 5 & 6 | ಉದಾಹರಣೆಗಳ ವಿಶ್ಲೇಷಣೆ |
| **ದಿನ 3** | 1 | ಸಾ.ಖಾ.ಸ.-ಹೊ.ಅ.- ಯೋಜನೆ ಅಭಿವೃದ್ಧಿ |
| | 2 & 3 | ವ್ಯಕ್ತಿ ಮತ್ತು ಗುಂಪುಗಳ ವಿಶ್ಲೇಷಣೆ ಮತ್ತು ವಿಷಯ ಮಂಡನೆ |
| | 4 | ಮೌಲ್ಯಮಾಪನ ಡೆಲ್ಫಿ ಪರೀಕ್ಷೆ ಮತ್ತು ಸ್ವಾಟ್ ವಿಶ್ಲೇಷಣೆ |
| | 5 | ಸಮಾರೋಪ ಪ್ರಮಾಣ ಪತ್ರ ವಿತರಣೆ |

# ಸಾ.ಖಾ.ಸ. – ಅ.ಹೊ.

# ತರಬೇತಿ ಪಠ್ಯ

**5. ಅಧಿವೇಶನಗಳ ಹಿನ್ನೆಲೆ ಸಾಹಿತ್ಯ**

**ಅಧಿವೇಶನ 1.2 ಮತ್ತು 1.3.**

**ಸಹ್ಯ ನಗರಾಭಿವೃದ್ಧಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಹೊರಗುತ್ತಿಗೆ &ಅನುಷ್ಠಾನ**

ಕರ್ನಾಟಕ ರಾಜ್ಯವು ಮೊದಲ ಮೂಲಭೂತ ಸೌಕರ್ಯ ನೀತಿಯನ್ನು 1997 ರಲ್ಲಿ ಪ್ರಕಟಿಸಿತು. ಹೊಸ ಮೂಲಭೂತ ಸೌಕರ್ಯ ನೀತಿಯನ್ನು 2007 ಜುಲೈ ತಿಂಗಳಲ್ಲಿ ಪರಿಷ್ಕರಿಸಿತು. ಸಾಖಾಸ ಘಟಕವನ್ನು ಜೂನ್ 2007 ರಲ್ಲಿ ಸ್ಥಾಪಿಸಿತು. ಜಿಲ್ಲಾ ಸಮಿತಿಗಳನ್ನು ಸಂಘಟಿಸಲಾಗಿದ್ದು ರಾಜ್ಯವು ಕೇಂದ್ರ ಸರ್ಕಾರದೊಂದಿಗೆ ಸಹಾಯಕ ಒಪ್ಪಂದವನ್ನು ಮಾಡಿಕೊಂಡಿದೆ. ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯ ನೀತಿ ಪಾರದರ್ಶಕ ಮತ್ತು ನ್ಯಾಯಬದ್ಧವಾದ ಚೌಕಟ್ಟಿನಲ್ಲಿ ಸಾಖಾಸ ಸಹಯೋಗಗಳನ್ನು ಬಳಸಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸಿ ಅಭಿವೃದ್ಧಿಗೊಳಿಸಲು ಬಯಸುತ್ತದೆ. ಇದರ ಮುಖ್ಯ ಅಂಶಗಳು ಕೊಳ್ಳುವಿಕೆಯ ಪ್ರಕ್ರಿಯೆ, ಕರಾರು, ಒಪ್ಪಂದ, ಕಾನೂನು ಚೌಕಟ್ಟು, ಸಹಾಯ ಮತ್ತು ಪೂರಕ ನಿಬಂಧನೆಗಳ ಸಡಿಲಿಕೆ, ತೊಡಕುಗಳು ಹಾಗೂ ಹಾನಿಕಾರಕ ಅಂಶಗಳನ್ನು ಪರಿಗಣಿಸಿ, ಏಕಗವಾಕ್ಷಿ ಪ್ರಕ್ರಿಯೆ ಮೂಲಕ ರಾಜ್ಯಮಟ್ಟದ ಉನ್ನತ ಸಮಿತಿಯು ಯೋಜನೆಗಳನ್ನು ಅನುಮೋದಿಸುವುದು. ಇದರಲ್ಲಿ ಮುಖ್ಯ ಸವಾಲುಗಳನ್ನು ಪೂರೈಸಿ ಪ್ರಾರಂಭ ಮಾಡುವ ಪ್ರಯತ್ನಗಳಿಗೆ ಹಾಗೂ ಸೃಜನಶೀಲತೆಯ ಮೂಲಕ ಯೋಜನೆ ನಿರ್ವಹಿಸುವವರಿಗೆ ಉತ್ತೇಜನ ನೀಡುವುದಾಗಿದೆ. ಕಾನೂನುಬದ್ಧವಾಗಿ ಸಾಖಾಸ ನಿರ್ವಹಣಾ ಘಟಕಕ್ಕೆ ಸ್ಪಷ್ಟ ಧ್ಯೇಯವನ್ನು ಹಾಕಿಕೊಂಡಿದೆ. ವಿವಿಧ ಇಲಾಖೆಗಳಿಗೆ ಅಭಿವೃದ್ಧಿಯ ಎಲ್ಲಾ ಹಂತಗಳಲ್ಲೂ ಸಹಾಯ ನೀಡುವುದಾಗಿದೆ. ಕ್ಷೇತ್ರದ ಅಧ್ಯಯನ, ಯೋಜನೆ ಗುರುತಿಸುವುದು, ಯೋಜನೆ ಅಭಿವೃದ್ಧಿ ಪಡಿಸುವುದು, ನಿರ್ವಹಣೆಯ ಹಾಗೂ ಅನುಷ್ಠಾನದ ಜೊತೆಗೆ ನಿರಂತರ ಮಾಪನವನ್ನು ನೀಡಿ ತರಬೇತಿಯನ್ನು ಅನುಷ್ಟಾಗೊಳಿಸುವುದಾಗಿದೆ.

**ಸಾಖಾಸ ಪ್ರಕ್ರಿಯೆ :**

24×7 ನೀರಿನ ಸರಬರಾಜು ಕರ್ನಾಟಕದ ನಗರಗಳಲ್ಲಿ 2005 ರಲ್ಲಿ ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಮತ್ತು ಬೆಳಗಾವಿಯಲ್ಲಿ ಪ್ರಾಯೋಗಿಕವಾಗಿ ಆರಂಭ. ಖಾಸಗಿಯವರು ನೀರಿನ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಿ, ಚಲನೆ ಮತ್ತು ದುರಸ್ತಿಯನ್ನು ನಿಗದಿತ ಶುಲ್ಕ ಪಡೆದು ನಿರ್ವಹಿಸುವುದು. ಗುಣಾತ್ಮಕ ಸೇವೆ ನೀಡಿದ ನಂತರ ಶುಲ್ಕ ಪರಿಷ್ಕರಣೆ, ವ್ಯವಸ್ಥೆ ಮತ್ತು ಸಿಬ್ಬಂದಿ ಸ್ಥಳೀಯ ಸಂಸ್ಥೆಯಲ್ಲಿರುತ್ತದೆ. ಈಗಾಗಲೇ ಪ್ರಾಯೋಗಿಕ ಹಂತದಲ್ಲಿ 20 ಸಾವಿರ ಮನೆಗಳು ಪ್ರಯೋಜನ ಪಡೆಯುತ್ತಿವೆ.

ಆಧಾರ : ಕರಾಮಾಸಾ : ನವೆಂಬರ್ 2008

ಖಾಸಾಸ ಘಟಕ ವಿವಿಧ ಚಟುವಟಿಕೆಗಳ ಮೂಲಕ ವಿವಿಧ ಅಂತಿಮ ಪ್ರಯೋಜನಗಳನ್ನು ಹೊರನೀಡುವುದಾಗಿದೆ. ಸಾಮರ್ಥ್ಯ ಅಭಿವೃದ್ಧಿಗಾಗಿ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದೆ.

ವಿಮಾನ ನಿಲ್ದಾಣಗಳು, ವಿಶೇಷ ಆರ್ಥಿಕ ವಲಯಗಳು, ಕೈಗಾರಿಕಾ ನೀತಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಕ್ರಿಯಾಶೀಲತೆ. ಜೀವ ಪರಿಸ್ಥಿತಿ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸಲು 5 ಜನ ಸದಸ್ಯರು ರೂ. 50 ಕೋಟಿಗಳವರೆಗೆ, 4 ಜನ ಸದಸ್ಯರುಗಳ ಸಮಿತಿಯು 250 ಕೋಟಿವರೆಗೆ ಅನುಮೋದಿಸಲು ರೂಪಿಸಿದೆ. ಇದರಲ್ಲಿ ಸ್ವತಂತ್ರವಾದ ಅಭಿಯಂತರರು ಹಾಗೂ ಮೌಲ್ಯಮಾಪಕರನ್ನು ಗುರುತಿಸುವುದು ಸೇರಿದೆ. ಒಂದು ಮಾಹಿತಿ ವ್ಯವಸ್ಥೆಯನ್ನು ಮತ್ತು 1000 ಕಿ.ಮೀ. ಗ್ರಾಮೀಣ ರಸ್ತೆ ಅಭಿವೃದ್ಧಿಗೊಳಿಸುವುದಾಗಿದೆ. ಬೇರೆ ರಾಜ್ಯಗಳಿಗೂ ಈ ಸೇವೆಯನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಇದುವರೆಗಿನ ಸಾಖಾಸ ಘಟಕದ ಕೆಲಸದ ವೈಖರಿಯನ್ನು ಈಗಾಗಲೇ ಅಧ್ಯಯನ ಮಾಡಲಾಗಿದೆ. ಮೂರು ತರಬೇತಿಗಳನ್ನು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಿ 80 ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಆರೋಗ್ಯ ಇಲಾಖೆ, ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿ ಹಾಗೂ ಸಾರಿಗೆ ವ್ಯವಸ್ಥೆಗಾಗಿ ಕ್ರಮವಾಗಿ ಮೈಸೂರು, ಬೆಳಗಾಂ ಮತ್ತು ಮೈಸೂರಿನಲ್ಲಿ ಕಾರ್ಯಗಾರಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಾಹಿತಿಗಳ ಸಂವಹನಕ್ಕಾಗಿ ಕೈಗಾರಿಕಾ ವಲಯದಲ್ಲಿ ನಾಲ್ಕು ವೇದಿಕೆಗಳನ್ನು ಮೂರು ಬಾರಿ ಅಂತರಾಷ್ಟ್ರೀಯ ನಿಯೋಗದ ಭೇಟಿಯನ್ನು ಏರ್ಪಡಿಸಲಾಯಿತು.

ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ಒಂದು ಏಕಗವಾಕ್ಷಿ ಸಮಿತಿಯನ್ನು ಸಂಘಟಿಸಲಾಗಿದೆ. ಯೋಜನೆ ಅಭಿವೃದ್ಧಿ, ಖಾಸಾಸಗಳನ್ನುಅನುಮೋದಿಸಲು ಕಾರ್ಯಚಟುವಟಿಕೆಗಳ ಪ್ರಕ್ರಿಯೆ ಹಾಗೂ ಮುಖ್ಯ ಸವಾಲುಗಳ ನಿರ್ವಹಣೆ ಮಾರ್ಗೋಪಾಯ ಕರಡು ರೂಪದಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಹತ್ತು ವರ್ಷಗಳಿಗೆ ಕಾರ್ಯಸೂಚಿಗಳನ್ನು ಸಿದ್ದಪಡಿಸಲಾಗಿದೆ. ವಿವಿಧ ಘಟಕಗಳ ಯೋಜನೆಗಳು ಹಾಗೂ ಅವುಗಳ ಒಟ್ಟಾರೆ ಬಂಡವಾಳ ಹೂಡಿಕೆಯನ್ನು ಈ ಕೆಳಗೆ ಕಾಣಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

**ಯೋಜನೆಗಳ ಸಂಖ್ಯೆ ಮತ್ತು ಬಂಡವಾಳ**

| **ಘಟಕ/ಕ್ಷೇತ್ರ** | **ಸಂಖ್ಯೆ** | **ಮೌಲ್ಯ ರೂ. ಕೋಟಿಗಳಲ್ಲಿ** |
|---|---|---|
| ಸಾರಿಗೆ | 183 | 84,333 |
| ನಗರ ಮತ್ತು ಪೌರ ಮೂಲಭೂತ | 17 | 42,489 |
| ಸೌಕರ್ಯ | 18 | 1621 |
| ಶಕ್ತಿ | 04 | 14,504 |
| ಮೂಲಭೂತ ಸೌಕರ್ಯ | 02 | 9,522 |
| ಇತರೆ | 02 | 50 |
| **ಒಟ್ಟು** | **226** | **152519** |

ಮೂಲಭೂತ ಸೌಕರ್ಯಗಳ ಒಟ್ಟಾರೆ ಬಂಡವಾಳ ಹೂಡಿಕೆಯಲ್ಲಿ ಸಾರಿಗೆ ನಂತರ ಪೌರಾಡಳಿತ ಎರಡೆಯ ಸ್ಥಾನದಲ್ಲಿದೆ. 30 ಯೋಜನಾ ಅನುಷ್ಠಾನಕರು 23 ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ. 1 ರಿಂದ 63 ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಕೆಲವು ಕೋಟಿಗಳಿಂದ 40,000 ಕೋಟಿವರೆಗೆ ಯೋಜನೆಗಳ ಗಾತ್ರವಿದೆ.

**ಸಾಖಾಸ ಪ್ರಕ್ರಿಯೆ :**

**ಪುರಸಭಾ ಘನ ತ್ಯಾಜ್ಯ ನಿರ್ವಹಣೆ – ಸಾಖಾಸ ಆರ್ಥಿಕ ಲಾಭ**

ಗುಜರಾತ್‌ನ ರಾಜಕೀಯ ಕೇಂದ್ರವಾದ ಸೂರತ್‌ನಲ್ಲಿ ಪುರಸಭಾ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಖಾಸಗಿಯವರನ್ನು ಕಸದ ಸಂಗ್ರಹಣೆ, ಸಾಗಾಣಿಕೆ ಮತ್ತು ವಿಲೇವಾರಿಗೆ ತೊಡಗಿಸಲಾಗಿತ್ತು. ನಂತರ ಪ್ರತಿಟನ್ ಕಸಕ್ಕೆ ನಿರ್ಧರಿಸಿದ ಶುಲ್ಕ ಪ್ರತಿ ಸಾಗಾಣಿಕೆ ತದನಂತರ ಪ್ರತಿ ಸಂಗ್ರಹ ಸ್ಥಳಕ್ಕಾಗಿ ನಿಷ್ಕರ್ಷವಾಗಿದೆ. ಅಪಾರವಾದ ಪೈಪೋಟಿಯಲ್ಲಿ ನಿರಂತರ ಗುಣಮಟ್ಟದ ಕಸ ನಿರ್ವಹಣೆಯ ಪರಿಸ್ಥಿತಿ ಅನೇಕ ಪಟ್ಟಣಗಳಲ್ಲಿ ಈಗ ಚಾಲ್ತಿ ಇದೆ.

ಆಧಾರ : Fire D, NIUA, 2008

ಮಾರ್ಚ್ 2009ರ ಹೊತ್ತಿಗೆ ಶೇಕಡ 38 ಯೋಜನೆಗಳನ್ನು ಗುರುತಿಸುವುದು ಹಾಗೂ ಶೇಕಡ 45 ರಷ್ಟು ಯೋಜನೆಗಳನ್ನು ಪಡೆಯಲು ಸಾರ್ವಜನಿಕ ಹರಾಜು ಪ್ರಕ್ರಿಯೆ ನಡೆದಿತ್ತು. ಯೋಜನೆಗಳ ಸಾಧ್ಯಸಾಧ್ಯತೆಗಳನ್ನು 40 ಯೋಜನೆಗಳಿಗೆ ವಿಮರ್ಶಿಸಲಾಗಿತ್ತು. ನಿರ್ವಹಣಾ ವ್ಯವಸ್ಥೆಯಲ್ಲಿ ಮೂಲಮಾಹಿತಿ ಸೃಷ್ಟಿಸಿದ್ದು, ಅದಕ್ಕಾಗಿ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಅಂತರ್ಜಾಲದಲ್ಲಿ ಸಾಖಾಸದ ಮಾಹಿತಿ ಬಿಂದುವನ್ನು ಸೃಷ್ಟಿಸಲಾಗಿದೆ. ಸಾಖಾಸ ಘಟಕದಲ್ಲಿ ಸಾಮರ್ಥ್ಯ ಅಭಿವೃದ್ಧಿಯನ್ನು ಮಾಡಿದ್ದು 14 ಯೋಜನೆಗಳ ಅಂದಾಜು ವೆಚ್ಚವನ್ನು ಮಾಡಲಾಗಿತ್ತು.

ಮುಖ್ಯ ಯೋಜನೆಗಳಲ್ಲಿ 66 ಸಾವಿರ ಕಿ.ಮೀ. ರಸ್ತೆಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಕರ್ನಾಟಕದಲ್ಲಿ ಸಮಗ್ರ ಸಾರಿಗೆ ನೀತಿಯನ್ನು ಕರಡು ರೂಪದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಯೋಜನೆಗಳನ್ನು ಅಭಿವೃದ್ಧಿಪಡಿಸಲು ದೂರ ಸಂವೇದಿ ಉಪಗ್ರಹದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

3300 ಕೋಟಿಗಳ ವಿಮಾನ ನಿಲ್ದಾಣ ಅಭಿವೃದ್ಧಿ ಸಾಖಾಸ ಯೋಜನೆಗಳ ಮತ್ತೊಂದು ಹೆಮ್ಮೆಯ ಕ್ಷೇತ್ರ. ಈಗಾಗಲೇ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯ ನಿರ್ವಹಿಸುತ್ತಿದೆ. 4 ಸಣ್ಣ ವಿಮಾನ ನಿಲ್ದಾಣಗಳನ್ನು ಪರಿಗಣಿಸಲಾಗಿದ್ದು, ಅವುಗಳು ಶಿವಮೊಗ್ಗ, ಗುಲ್ಬರ್ಗ, ಹಾಸನ ಮತ್ತು ಬಿಜಾಪುರದಲ್ಲಿ ಬರಲಿವೆ. ಬಳ್ಳಾರಿಯ ವಿಮಾನ ನಿಲ್ದಾಣ ಪ್ರಸ್ತಾವನೆಗೆ ಸಾಖಾಸ ಯೋಜನೆಯಲ್ಲಿ ತಾಂತ್ರಿಕ ಒಪ್ಪಿಗೆ ದೊರಕಿದೆ. ಇದರೊಂದಿಗೆ ಹುಬ್ಬಳ್ಳಿ, ಮಂಗಳೂರು, ಬೆಳಗಾಂ ಹಾಗೂ ಮೈಸೂರು ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆ ನಡೆದಿದೆ. ಬೀದರ್‌ನಲ್ಲಿರುವ ವಾಯು ರಕ್ಷಣಾ ನಿಲ್ದಾಣವನ್ನು ಸಾರ್ವಜನಿಕರ ಬಳಕೆಗೆ ಪ್ರಸ್ತಾವನೆ ಚಾಲ್ತಿಯಲ್ಲಿದೆ. ಜೊತೆಗೆ 11 ವಿಮಾನ ಇಳಿಯಲು ರನ್ ವೇಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆ ಇದೆ. 22 ಹೆಲಿಕಾಪ್ಟರ್ ಇಳಿಯುವ ತಾಣಗಳನ್ನು ಅಭಿವೃದ್ಧಿಪಡಿಸಲು ಮಂಜೂರಾತಿ ದೊರಕಿದೆ. ಇತರೆ ಯೋಜನೆಗಳಲ್ಲಿ ಪ್ರವಾಸೋದ್ಯಮದ 16 ಯೋಜನೆಗಳು 2126 ಕೋಟಿ ರೂಪಾಯಿಗಳಲ್ಲೂ 39 ಯೋಜನೆಗಳು ಪಾರಂಪರಿಕ ಯೋಜನೆಗಳಾಗಿವೆ. ಏಳು ಸಾಂದರ್ಭಿಕ ಕ್ರಿಯಾ ಯೋಜನೆಗಳ ದೃಷ್ಟಿಕೋನಗಳನ್ನು ನಿಗದಿಪಡಿಸಲಾಗಿದೆ.

1) ಸಾಖಾಸ ಘಟಕವನ್ನು ಒಂದು ಸಹಕಾರ ಸಂಸ್ಥೆ ಅಭಿವೃದ್ಧಿಗೊಳಿಸಿ ಸಂಪನ್ಮೂಲ ಮತ್ತು ಹಣಕಾಸಿನ ವಹಿವಾಟುಗಳಿಗೆ ತೊಡಗಿಸುವುದು.
2) ಸಾಖಾಸ ವಿಷಯದಲ್ಲಿ ತರಬೇತಿ ನೀಡಲು ಆಡಳಿತ ತರಬೇತಿ ಸಂಸ್ಥೆ, ಮೈಸೂರನ್ನು ತರಬೇತಿ ವಿಷಯದಲ್ಲಿ ಪ್ರಾದೇಶಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು.

3) ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿ ಯೋಜನೆಗಳ ಮಾಪನ ಮತ್ತು ನಿಯಂತ್ರಣಕ್ಕೆ ಅನುವು ಮಾಡುವುದು.
4) ಸಾಖಾಸ ಅಭಿವೃದ್ಧಿಗೆ ಸೃಷ್ಟಿ ನಿರ್ವಹಣಾ ಮಾರ್ಗವನ್ನು ಅಳವಡಿಸುವುದು.
5) ಜೀವಪರಿಸ್ಥಿತಿ ವ್ಯವಸ್ಥೆಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವುದು.
6) ಜ್ಞಾನದ ನಿರ್ವಹಣೆ.
7) ಉದಾಹರಣೆ ಮತ್ತು ಯಶೋಗಾಥೆಗಳ 'ಟೆಂಪ್ಲೆಟ್' ತಯಾರಿಸುವುದು.

**ಸಾಖಾಸಾ ಪ್ರಕ್ರಿಯೆ :**

**ಬೀದಿ ದೀಪಗಳ ಸಾಮರ್ಥ್ಯ ಹೆಚ್ಚಿಸುವಿಕೆ: ಬೆಂಗಳೂರು**

2005–06 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾಖಾಸ ಯೋಜನೆಯೊಂದರಲ್ಲೀ ಬೀದಿ ದೀಪಗಳ ಬಳಕೆಯ ಸಾಮರ್ಥ್ಯ ಹೆಚ್ಚಳಕ್ಕೆ ಚಾಲ್ತಿ. ದಿನದಲ್ಲಿ ಅಗತ್ಯಕ್ಕೆ ಬೆಳಕು ಹಾಗೂ ವಾಹನಗಳ ಸಾಂದ್ರತೆಗೆ ಅನುಗುಣವಾಗಿ ವ್ಯವಸ್ಥೆಯ ನಿರ್ವಹಣೆ ಇದರಿಂದ ಶೇಕಡ 50 ರಷ್ಟು ವಿದ್ಯುಚ್ಛಕ್ತಿ ಉಳಿಸಿತು. ಕೆಲವೇ ವರ್ಷಗಳಲ್ಲಿ ಹಾಕಿದ ಬಂಡವಾಳ ವಾಪಸ್ಸಾಯಿತು. ವಡೋದರ ಮತ್ತು ನಾಸಿಕ ನಗರಗಳಲ್ಲಿ ಇದೇ ತರಹದ ಅನುಭವ ಪಡೆಯಲಾಗಿದೆ.

ಆಧಾರ : ಯಶೋಗಾಥೆಗಳ ದಾಖಲೀಕರಣ, ಸಂಚಿಕೆ 10 ಸಂಖ್ಯೆ 1 ಜನವರಿ–ಮಾರ್ಚ್– 2007 NIUA

ಕರ್ನಾಟಕ ರಾಜ್ಯ ಖಾಸಾಸ ಯೋಜನೆಗಳಿಗೆ ಪೂರಕ ಸ್ನೇಹಮಯ ನಿಲುವು, ಅಪಾರವಾದ ಅನುಭವ ಹಾಗೂ ನೈಪುಣ್ಯ ಹಾಗೂ ಉತ್ತಮ ಮೂಲಭೂತ ಸೌಕರ್ಯಗಳಿಂದ ರಾಜ್ಯ ಸರ್ಕಾರವು ಸಹ್ಯ ಅಭಿವೃದ್ಧಿಗೆ ಒತ್ತು ನೀಡಿದೆ. ಇದರಿಂದ ನಗರಾಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉತ್ತೇಜನ ಸಿಕ್ಕ ನಗರ ಪಟ್ಟಣಗಳ ಮೂಲಭೂತ ಸೌಕರ್ಯ ಹೆಚ್ಚಿನ ಮಟ್ಟದಲ್ಲಿ ಉತ್ತಮ ಪರಿಣಾಮಗಳನ್ನು ಪಡೆಯಲಿದೆ. ಇದಕ್ಕಾಗಿ ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ ಈಗ ನಡೆದಿದೆ. ಕರ್ನಾಟಕ ಪೌರಾಡಳಿತ ಸುಧಾರಣೆ 2010ರ ಯೋಜನೆಯಡಿ ಪ್ರಸ್ತುತ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

(ಮೂ.ಆಧಾರ : ಶ್ರೀ ಅರವಿಂದ ಜಾದವ್, ಮುಖ್ಯ ಕಾರ್ಯದರ್ಶಿಗಳು, ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, 2009, ಸಂಪನ್ಮೂಲ ವ್ಯಕ್ತಿ : ಶ್ರಿ. ಟಿ. ಬಿ. ರೇಣುಕಾ ಪ್ರಸಾದ್, ಯೋಜನಾ ಸಂಯೋಜನಾಧಿಕಾರಿ, ಬಿ.ಇ.ಸಿ.ಪಿ. ಬೆಂಗಳೂರು)

# 5.2 ಅಧಿವೇಶನ : 1.4, 1.5 ಮತ್ತು 1.6
# ಸಾಖಾಸ ಪರಿಕಲ್ಪನೆ ಮತ್ತು ಮಾದರಿಗಳ ಅಭಿವೃದ್ಧಿಗೆ ಆಧಾರಗಳು

* **ಸಂವಿಧಾನ :** ಪರಿಚ್ಛೇದ 7 ರಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ವಿಕೇಂದ್ರಿಕರಿಸಿದ್ದು, ರಾಜ್ಯ ತನ್ನ ಆಡಳಿತಕ್ಕೆ ಅಗತ್ಯವಿರುವ ಕಾನೂನನ್ನು ರಚಿಸುವ ಅಧಿಕಾರ ಹೊಂದಿದೆ.

* **ಕಾನೂನು :** ಸಾರ್ವಜನಿಕ ನೀತಿ–ನಿಯಮಗಳಿಗೆ–ಅಧಿಕಾರವನ್ನು ಕಾಯ್ದೆಗಳನ್ನು ರಚಿಸುವ ಮೂಲಕ ಕಾನೂನು ಒದಗಿಸುತ್ತದೆ.

**ಸಾ.ಖಾ.ಸ. ಕಾನೂನುಗಳು :**

* **ಸರ್ಕಾರದ ಜವಾಬ್ದಾರಿಗಳು :** ಅಭಿವೃದ್ಧಿ ಚಟುವಟಿಕೆ ಮೂಲಭೂತವಾಗಿ
  - ಸರ್ಕಾರದ ಜವಾಬ್ದಾರಿಯಾಗಿದ್ದು, ಹೊಸ ಕಾನೂನಿನ್ವಯ–ಖಾಸಗೀಯವರಿಗೂ ಅವಕಾಶ ಕಲ್ಪಿಸಿದೆ.
  - ಕಾನೂನಾತ್ಮಕವಾಗಿ ಕೆಲವು ಕ್ಷೇತ್ರಗಳ ಜವಾಬ್ದಾರಿಯನ್ನು ಖಾಸಗೀಯವರಿಗೆ ನಿರ್ವಹಣೆಗಾಗಿ ಒಪ್ಪಂದದ ಮೂಲಕ ವರ್ಗಾಯಿಸುವುದು.

**3. ನೀತಿಗಳು – ಸಾ.ಖಾ.ಸ.**

- ಸರ್ಕಾರದ ಪ್ರವೃತ್ತಿಯನ್ನು ನೀತಿಗಳು ಪ್ರತಿನಿಧಿಸುತ್ತವೆ.
- ನೀತಿಗಳಿಗೆ ಕಾನೂನಿಗಿರುವ ಶಕ್ತಿಯಿಲ್ಲವಾದರು, ಸಂವಿಧಾನ ಮತ್ತು ಕಾನೂನಿನಿಂದ ಸುತ್ತುವರಿದಿದ್ದು ಬದಲಾವಣೆ ಕಷ್ಟಕರವಾಗಿದೆ.

**ನೀತಿಗಳಿಗೆ ಅಧಿಕಾರ ಒದಗಿಸುವುದು**

- ಸಾ.ಖಾ.ಸ. ಮಾದರಿಯನ್ನು ಒಪ್ಪದ ನೀತಿಗಳಿಗೆ ತಿದ್ದುಪಡಿ ತರುವುದರೊಂದಿಗೆ ಅಧಿಕಾರ ನೀಡುವುದು.
- ಅಸ್ತಿತ್ವದಲ್ಲಿರುವ ಕಾನೂನುಗಳನ್ನು ತಿದ್ದುಪಡಿ ಮಾಡುವುದರೊಂದಿಗೆ ಹೊಸ ಕಾಯ್ದೆಯೊಂದನ್ನು ಜಾರಿ ಮಾಡುವುದು.



This is a 'Public-Private-Partnership' seminar on education. Who the hell invited Pakistan Peoples Party?

**ಕರಾರು (Contract)**

**4. ಏತಕ್ಕಾಗಿ ಕರಾರು**

- ಸಾರ್ವಜನಿಕ ಮತ್ತು ಖಾಸಗಿ ವಲಯಗಳ ನಡುವೆ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕ ಪರಿದಿಯನ್ನು ನಿರ್ಮಿಸಲು ಕರಾರು ಅಗತ್ಯವಾಗಿದೆ.
- ಕಾನೂನಿನ ಹೊರತಾಗಿ ಪ್ರಗತಿಯ ಬೆಳವಣಿಗೆ ಮತ್ತು ಮನಸ್ತಾಪ ಹಾಗೂ ಗುಣಮಟ್ಟದ ಸೇವೆಯನ್ನು ಗುರುತಿಸುವುದು ಕಷ್ಟವಾಗಿದೆ.
- ಕರಾರು–ಸವಿಸ್ತಾರವಾಗಿದ್ದರೆ–ಅಗತ್ಯ ಎಲ್ಲಾ ವಿಭಾಗಗಳನ್ನು ಕ್ರೋಢೀಕರಿಸಿ ಅಂತಿಮವಾಗಿ ಉತ್ತಮ ಪ್ರತಿಫಲ ಪಡೆಯಬಹುದು.
- ಕರಾರು ಪ್ರಕ್ರಿಯೆ :

  ಸ್ಪಷ್ಟೀಕರಣಕ್ಕೆ ಆದ್ಯತೆ : ಒಪ್ಪಂದವು ಉದ್ದೇಶಗಳು, ನಿರೀಕ್ಷೆಗಳು, ತೊಡಕುಗಳು, ಅವಕಾಶಗಳು, ಅವಲಂಬನೆ, ಸಹಭಾಗಿದಾರರು ಮತ್ತು ದಂಡ ಪ್ರಕ್ರಿಯೆಯ ಬಗ್ಗೆ ಸ್ಪಷ್ಟೀಕರಣವಿರಬೇಕು.

**5. ವಿವರಿಸುವಿಕೆ :**

- ಸ್ವರೂಪ, ಸಂಭಾವನೆ ಮತ್ತು ಅಭಿನಂದನೆಗಳು ಮತ್ತು ತೆಗೆದು ಹಾಕುವಿಕೆಯನ್ನು ವಿವರಿಸಬೇಕು.

**ಒಪ್ಪಂದದ ನಿಬಂಧನೆಗಳು :**

→ ನೇಮಕಾತಿ :

* ಸಾರ್ವಜನಿಕ ವಲಯವನ್ನು ಖಾಸಗಿಯವರಿಗೆ ಕೆಲವೊಂದು ನಿಬಂಧನೆಗಳಮೂಲಕ ಅಧಿಕೃತವಾಗಿ ನಿರ್ದಿಷ್ಟ ಕಾಲಾವಧಿಗೆ ವರ್ಗಾಯಿಸುವುದಾಗಿದೆ.
* ಪ್ರಕ್ರಿಯೆಯು ಹರಾಜುದಾರನ ಭಾಗವಹಿಸುವಿಕೆಯಿಂದ ಪ್ರಾರಂಭವಾಗುತ್ತದೆ ಮತ್ತು ಯೋಜನೆ ಆರಂಭವಾಗುವ ದಿನವನ್ನು ನಿರ್ಧರಿಸುತ್ತದೆ.
* ಸಾ.ಖಾ.ಸ. ಮಾದರಿಯನ್ನು ಅಳವಡಿಸಿಕೊಳ್ಳಲು ತಿದ್ದುಪಡಿಯ ಮೂಲಕ ಕಾನೂನಿನಲ್ಲಿ ಅವಕಾಶ.

**6. ಕರ್ತವ್ಯಗಳು ಮತ್ತು ಹಕ್ಕುಗಳು :**

| | ಖಾಸಗಿ | ಸಾರ್ವಜನಿಕ |
|---|---|---|
| ಕರ್ತವ್ಯ : | • ಗುಣಮಟ್ಟದ ಸೇವೆಯನ್ನು ಜವಾಬ್ದಾರಿ ಯುತವಾಗಿ ಗ್ರಾಹಕರಿಗೆ ತಲುಪಿಸುವುದು.<br>• ಪ್ರಸ್ತುತ ಸ್ಥಿತಿಯಿಂದ–ಉನ್ನತೀಕರಣದ ಮೈಲುಗಲ್ಲನ್ನು ತಲುಪುವುದು. | • ಉತ್ತಮ ಸೇವೆ ಪೂರೈಸಲು ಅಗತ್ಯ ಸಹಕಾರ ಒದಗಿಸುವುದು. |

## 5.3 ಅಧಿವೇಶನ 2.1 ಮತ್ತು 2.2

### ಆರ್ಥಿಕತೆ ನಿರ್ವಹಣೆಯ ಮುಖ್ಯ ಅಂಶಗಳು

### ಪಾತ್ರಗಳು ಮತ್ತು ಜವಾಬ್ದಾರಿಗಳು

ಸಾಖಾಸ – ಹೂಅನು ಮಾದರಿಗಳ ಅನುಷ್ಠಾನದಲ್ಲಿ ವಿವಿಧ ಪಾತ್ರದಾರಿಗಳ ಸೃಷ್ಟಿ ಜವಾಬ್ದಾರಿಗಳನ್ನು ಗುರುತಿಸಲಾಗಿದೆ.

**1) ಸರ್ಕಾರಿ ಸಂಸ್ಥೆಗಳು :**

1. ಯೋಜನೆಯ ಸ್ಥಳಾವಕಾಶ/ಆಸ್ತಿಪಾಸ್ತಿಗಳು
2. ಪರಿಸರಾತ್ಮಕ ಒಪ್ಪಿಗೆಗಳು
3. ಸಹಾಯಕಕಾರಿ ಮೂಲಭೂತ ಸೌಕರ್ಯ ಹಾಗೂ ಅವಕಾಶಗಳು
4. ನಿರ್ದಿಷ್ಟ ಅಗತ್ಯತೆಗಳು
5. ಕಾನೂನಿನ ಬದ್ಧತೆಗಳು.

**2) ಖಾಸಗಿ ಭಾಗೀದಾರರು**

1. ವಿನ್ಯಾಸ, ತಾಂತ್ರಿಕತೆ, ಆರ್ಥಿಕತೆ
2. ನಿರ್ಮಾಣ / ಅಭಿವೃದ್ಧಿ / ಮೇಲ್ದರ್ಜೆ
3. ಕಾರ್ಯಕ್ರಮ ಹಾಗೂ ದುರಸ್ತಿ
4. ಹಣಕಾಸಿನ ನೀಡುವಿಕೆ ಮತ್ತಿತರ ಜವಾಬ್ದಾರಿಗಳ ನಿಭಾವಣೆ
5. ಅವಧಿಯ ನಂತರ ಆಸ್ತಿಪಾಸ್ತಿಗಳ ವರ್ಗಾವಣೆ.

ಖಾಸಗಿ ಭಾಗೀದಾರರು ಲಾಭವನ್ನು ಪಡೆಯಲು ವಾರ್ಷಿಕ ಇಲ್ಲವೆ ನಗದಿತ ಸಮಯದಲ್ಲಿ ಸ್ವೀಕರಿಸಲು ಅರ್ಹ.

**ಕರಾರು ಒಪ್ಪಂದದ ಚೌಕಟ್ಟುಗಳು :**

- ಎಲ್ಲಾ ಬಗೆಯ ಆಶಯಗಳನ್ನು ಕರಾರು ಪತ್ರದಲ್ಲಿ ಸ್ಪಷ್ಟತೆ.
- ಕರಾರು ಒಪ್ಪಂದದಲ್ಲಿ ಹಕ್ಕು ಮತ್ತು ಜವಾಬ್ದಾರಿಗಳ ನಗದಿತ ಪರಿಸ್ಥಿತಿ ಒಪ್ಪಂದದ ಉಲ್ಲಂಘನೆಗೆ ಪರಿಹಾರ.
- ಸಾಮಾನ್ಯವಾಗಿ ನಿಖರವಾದ ಭದ್ರತೆ ನೀಡಲಾಗುತ್ತದೆ.
- ಕರಾರು ಒಪ್ಪಂದದ ಭಾಗೀದಾರರು – ಸರ್ಕಾರಿ ಸಂಸ್ಥೆ ರಿಯಾಯಿತಿ ಪ್ರಾಧಿಕಾರ ಮತ್ತು ಖಾಸಗಿ ಪ್ರಯೋಜನ ಸಂಸ್ಥೆ.
- ಇನ್ನಿತರ ಭಾಗೀದಾರರು – ರಾಜ್ಯ ಸರ್ಕಾರ, ಸರಬರಾಜು ಸಂಸ್ಥೆಗಳು ಮತ್ತು ಸೇವಾ ಸೌಲಭ್ಯ ನೀಡುವ ಸಂಸ್ಥೆಗಳು.

**ಇನ್ನಿತರ ಪ್ರಮುಖ ಅಂಶಗಳು**

- **ಬ್ಯಾಂಕ್ ಮಾಡುವ ಅಂಶಗಳು**
  - ಪ್ರಯೋಜನ ಪಡೆಯುವ ಸಂಸ್ಥೆ ಹಕ್ಕುಗಳನ್ನು ನೀಡುವ ಬಗ್ಗೆ ಸಾಮರ್ಥ್ಯ
  - ಸರಬರಾಜುದಾರರ ಹಕ್ಕುಗಳು
  - ಯೋಜನೆಯ ಆಸ್ತಿಪಾಸ್ತಿಗಳನ್ನು ಬಳಸುವ ಸಾಮರ್ಥ್ಯ
  - ಪ್ರಮುಖ ಘಟ್ಟಗಳು ಮತ್ತು ಪರಿಣಾಮಗಳು
    - ಅನರೀಕ್ಷಿತ ಆಘಾತಗಳು
    - ನರ್ದಿಷ್ಟ ಪರಿಸ್ಥಿತಿಗಳು
  - ಅಕಾಲಿಕ ಯೋಜನಾ ವಿಫಲತೆಯ ಸ್ಥಿತಿಯಲ್ಲಿ ಪರಿಹಾರ.
  - ಸಾಲದ ಸಂರಕ್ಷಣೆ ಹಾಗೂ ಮರುಪಾವತಿ.
- **ಸಹಾಯಕಾರಿ ಸ್ಥಿತಿಗಳು**
  - ಒಪ್ಪಿಗೆ ಇಲ್ಲದ ಪರಿಸ್ಥಿತಿಯ ನಭಾವಣೆ.
  - ಒಳ್ಳೆಯ ನಂಬಿಕೆಗಳ ಬಗ್ಗೆ ಪುನರ್ ಸಮಾಲೋಚನೆ
  - ಯೋಜನೆಯನ್ನು ಸಮಾಪ್ತಿ ಕಟ್ಟ ಕಡೆಯ ಮಾರ್ಗವಾಗಿ
  - ಪುನರ್ ನರ್ಮಾಣಕ್ಕೆ ಪ್ರಾಮುಖ್ಯತೆ.
- **ಹಣದ ಬೆಲೆ**
  - ಬೆದರಿಕೆ / ಜವಾಬ್ದಾರಿ–ಸಾಖಾಸ ಪರಿಸ್ಥಿತಿಯಲ್ಲಿ ಹಣದ ಮೌಲ್ಯ ವೃದ್ಧಿಸುವಂತಿರಬೇಕು.

    ಉದಾ : ಸಂಚಾರ ಪರಿಸರದಲ್ಲಿ ಫೋನ್ ದರ ಪ್ರತಿನಿಮಿಷಕ್ಕೆ 16 ರೂ.ಗಳಿಂದ 1 ರೂ. ಅಥವಾ 0.50 ಪೈಸೆ.

    ಕರ ನೀಡುವಿಕೆ ಪ್ರತ್ಯಕ್ಷ ಹಾಗೂ ಪರೋಕ್ಷ ವೆಚ್ಚ ಹಾಗೂ ಸಮಯದ ಮೌಲ್ಯದಲ್ಲಿ ಸರಿದೂಗುವಂತೆ.
  - ಸಾಮರ್ಥ್ಯದ ಪ್ರಯೋಜನ

1. ಯೋಜನೆಯ ವೆಚ್ಚದಲ್ಲಿ – ಖರ್ಚಿಗಿಂತ ಉಳಿತಾಯ
2. ಕಾರ್ಯಚಾಲ್ತಿ ವೆಚ್ಚದಲ್ಲಿ ಉಳಿತಾಯ
3. ಆದಾಯದ ಗರಿಷ್ಠ ಮಟ್ಟ – ಸೂರಿವಿಕೆ ತಡೆಯುವುದು.

- **ಭಾಗಿದಾರರ ನಿರೀಕ್ಷೆ**
  - ಪ್ರಾಯೋಜಕರು / ಕಾರ್ಯ ತಂತ್ರ ಹೂಡಿಕೆದಾರರು
    1. ಯೋಜನ / ವೆಚ್ಚ – ಸಾಕಷ್ಟು ಹೆಚ್ಚು ಸಮಯ
    2. ದೃಢವಾದ ನೀತಿ / ಕಾನೂನು ಚೌಕಟ್ಟು
    3. ಬೆದರಿಕೆಗೆ ತಕ್ಕಂತೆ ಲಾಭ

– ಹೂಡಿಕೆದಾರರು / ಮತ್ತಿತರ ಆರ್ಥಿಕ ಬಂಡವಾಳಗಾರರು

1. ಸಾಕಷ್ಟು ಭದ್ರತೆಯ ಹಣದ ಹರಿಯುವಿಕೆ ಸಾಲವನ್ನು ಸಂರಕ್ಷಿಸಲು.
2. ಸಾಲದ ಮರುಪಾವಿಗೆ ಸಾಕಷ್ಟು ಭದ್ರತೆ ಹಣದ ಪಾವತಿ
3. ಯೋಜನೆಯನ್ನು ನಲ್ಲಿಸಿದಲ್ಲಿ ಆರ್ಥಿಕ ಸಮಾದಾನ ಕರ ಪರಿಹಾರ.

**– ಸರ್ಕಾರಿ / ಸಾರ್ವಜನಕ ಪ್ರಾಧಿಕಾರ**

- ಆಸ್ತಿಪಾಸ್ತಿ ನರ್ಮಾಣ – ಚಾಲ್ತಿ / ದುರಸ್ತಿ ನಗದಿಸಿದಂತೆ
- ಸಾರ್ವಜನಕ ಹಿತಾಸಕ್ತಿಗೆ ನಗದಿಸಿದ ಗುಣಮಟ್ಟದ ಸೇವಾ ಸೌಲಭ್ಯ
- ಪಾರದರ್ಶಕತೆಯ ಯೋಜನಾ ಒಪ್ಪಿಗೆ ಅರ್ಹ ಭಾಗೀದಾರರಿಗೆ.

**ಸಾಖಾಸ – ಹೂ ಅನು**

- ಖಾಸಗಿಕರಣವಲ್ಲ – ಬಡೆತನ ಮಾರಾಟವಲ್ಲ.
- ಖಾಸಗಿಯವರಿಂದ ಹಣದ ಸಾಲ ಪಡೆಯುವುದಿಲ್ಲ.
- ಸಾಖಾಸ – ಒಚಿದು ಆಧಾರವನ್ನು ನಿರ್ಮಾಣ ಮಾಡುವುದು.

– ಹೂಡಿದ ಹಣಕ್ಕೆ ಹೆಚ್ಚು ಮೌಲ್ಯವನ್ನು ಸೇವೆಗಳಲ್ಲಿ ದೊರಕಿಸುವುದು.

– ಖಾಸಗಿಯವರ ಸೃಜನಶೀಲತೆ ಮತ್ತು ನಿರ್ಮಾಣವೈಫಲ್ಯದಿಂದ

– ಸೇವಾ ಸಾಮರ್ಥ್ಯವನ್ನು ಹೆಚ್ಚಿಸಿ ಉತಮಪಡಿಸುವುದು.

**ಸಾರ್ವಜನಿಕ ಕ್ಷೇತ್ರ**

- ರಸ್ತೆಗಳನ್ನು ನಿರ್ಮಾಣ ಮಾಡುವುದಿಲ್ಲ, ದುರಸ್ಥಿಯ ಕಾಮಗಾರಿ ರಸ್ತೆಗಳನ್ನು ಕೊಳ್ಳುತ್ತದೆ.
- ಸೆರೆಮನೆಗಳನ್ನು ಕಟ್ಟುವುದಿಲ್ಲ. ಕಾರಾಗೃಹದ ಸೇವೆಯನ್ನು ಪಡೆಯುವುದು.
- ಬಂದರುಗಳಲ್ಲಿ ನರ್ವಹಿಸುವುದಿಲ್ಲ. ಆದರೆ ಬಳಕಿಗೆ ಸಾಮರ್ಥ್ಯದ ಸೇವೆಯನ್ನು ನೀಡುವುದು.
- ಉಷ್ಣ ಸ್ಥಾವರಗಳನ್ನು ನರ್ಮಿಸುವುದಿಲ್ಲ ; ಕೇವಲ ವಿದ್ಯುಚ್ಛಕ್ತಿಯನ್ನು ಕೊಳ್ಳುವುದು.

**ಹೂಡಿಕೆದಾರರಿಗೆ ಸವಲತ್ತುಗಳು :**

- ಆರ್ಥಿಕ ಪ್ರಯೋಜನಗಳು : ಶೇಕಡಾ 100 ರಷ್ಟು ತೆರಿಗೆ ವಿನಾಯಿತಿ 10 ವರ್ಷಗಳವರೆಗೆ 15 ವರ್ಷಗಳ ಸಮಯಾವಧಿಯಲ್ಲಿ
- UGP ಯೋಜನಾ ವೆಚ್ಚದಲ್ಲಿ ಗರಿಷ್ಠ ಶೇಕಡ 40 ರಷ್ಟು ಸಹಾಯಧನ.
- ವಿದೇಶ ನೇರ ಹೂಡಿಕೆ : ಶೇಕಡ 74 ರಿಂದ 100 ರಷ್ಟು ಬಂಡವಾಳದ ಸಾಮರ್ಥ್ಯ.

**ಸಾಖಾಸ–ಉದಾಹರಣೆಗಳು**

- ವಿಮಾನ ನಿಲ್ದಾಣಗಳು–ಶಿವಮೊಗ್ಗ, ಗುಲ್ಬರ್ಗ, ಬಿಜಾಪುರ.

- ಘನ ಕಸ ನಿರ್ವಹಣೆ–ಸ್ಥಳೀಯ ಸಂಸ್ಥೆಗಳಲ್ಲಿ.
- ಶಿವಮೊಗ್ಗದ ಬಸ್ ನಿಲ್ದಾಣ.
- ಸುಭಾಷ್‌ನಗರದ ಬಸ್ ನಲ್ದಾಣ, ಬೆಂಗಳೂರು.
- ಸಾಗಾಣಿಕೆ ವಾಹನ ನಿಲುಗಡೆ.
- ನಗರಗಳಲ್ಲಿ ವಾಹನ ನಿಲುಗಡೆ.
- ಸಮ್ಮೇಳನ ಮತ್ತು ವಸ್ತು ಪ್ರದರ್ಶನ ಕೇಂದ್ರ
- ಪ್ರವಾಸಿ ತಾಣಗಳ ಅಭಿವೃದ್ಧಿ.
- ಪ್ರವಾಸಿ ಸ್ಥಳಗಳ ಐತಿಹಾಸಿಕ ಕೋಟೆಗಳ ಅಭಿವೃದ್ಧಿ
- ಸುಸಜ್ಜಿತ ಪ್ರವಾಸಿ ರೈಲು
- ಸಾರ್ವಜನಕ ಸೇವಾ ಸೌಲಭ್ಯಗಳು ಉದಾ. ಸೌಚಾಲಯ
- ಸಂಚಾರ ಸುಗುಮ ವ್ಯವಸ್ಥೆಗಳು ಕಾಲ್ನಡಿಗೆಯ ಸೇತುವೆಗಳು, ಬಸ್ ತಂಗುದಾಣಗಳು.
- ಬಸ್ ವ್ಯವಸ್ಥೆಗಳ ಪುನರ್ ಅಭಿವೃದ್ಧಿ.

**ಸಾಖಾಸ – ಮೂಲಭೂತ ಸೌಕರ್ಯಗಳ ಯೋಜನೆಗಳು**

- ಯೋಜನಾ ಆಯ್ಕೆಗೆ ನಿಯಮಗಳು

1. ಖಾಸಗಿಯವರು ಭಾಗವಹಿಸಲು ಅನುಮತಿಯಿರುವ ಕ್ಷೇತ್ರವಾಗಿರಬೇಕು.
2. ಸಾರ್ವಜನಿಕ ಯೋಜನೆಗಳಾಗಿ ಖಾಸಗಿಯವರ ಬಂಡವಾಳ ಹೂಡಿಕೆ ಇರಬೇಕು. ಅವು ಖಾಸಗಿ ಯೋಜನೆಗಳಾಗಿ ಸಾರ್ವಜನಕವಾಗಿ ಪೂರಕವಾಗಿರಬಾರದು.
   - ಬೆಂಗಳೂರಿನಲ್ಲಿ ಒಂದು ಹೋಟೆಲ್ ಉದ್ಯಮ ಹಾಗು ಪಾರಂಪರಿಕ ಸ್ಥಳದಲ್ಲಿ ಹೋಟೆಲ್ ವ್ಯವಸ್ಥೆ ಇಲ್ಲದಿರುವುದು.
   - ಖಾಸಗಿ ಮಾರಾಟ ಮಳಿಗೆಗಳು ಹಾಗೂ ಸಮಗ್ರವಾದ ವಾಹನ ಸಂಚಾರ ಕೇಂದ್ರ.
3. ಸಾಮಾನ್ಯ ಬಳಕೆಯದ್ದಾಗಿರಬೇಕು.
   - ಖಾಸಗಿ ಬಳಕೆಯ ರೈಲ್ವೆ ಹಳಿ ವ್ಯವಸ್ಥೆ ಹಾಗೂ ಸಾರ್ವಜನಿಕ ಬಳಕೆಯ ಸಂಚಾರ ಕೇಂದ್ರ.
   - ವಾಣಿಜ್ಯ ದೃಷ್ಟಿಯಿಂದ ಸಹ್ಯವಾಗಿರಬೇಕು. ಹಾಗೂ ಆರ್ಥಿಕ ಅಥವಾ ವ್ಯವಸ್ಥಿತ ಸಹಕಾರವಿರಬೇಕು.

**ಯೋಜನೆಯನ್ನು ಗುರುತಿಸುವಿಕೆ**

ಯೋಜನಾ ಅಭಿವೃದ್ಧಿ ಹಂತಗಳು

↓

ತಾಂತ್ರಿಕ ಸೂಕ್ತತೆಯ ವಿಶ್ಲೇಷಣೆ ಮತ್ತು ಮೌಲ್ಯಮಾಪನ

↓

ಆರ್ಥಿಕ ಸಹ್ಯ ವಿಶ್ಲೇಷಣೆ

↓

ಯೋಜನಾ ನಿರ್ಮಾಣಕ್ಕೆ ವಿವಿಧ ಮಾರ್ಗೋಪಾಯಗಳು

↓

ಯೋಜನಾ ಅನುಷ್ಠಾನಕ್ಕೆ ನಿಧಾರಗಳು

↓

ಹರಾಜು ಪ್ರಕ್ರಿಯೆ

↓

ಹರಾಜು

**ಯೋಜನೆಯ ಆರ್ಥಿಕ ಸೂಕ್ತತೆ :**

- **ಮುಖ್ಯ ಅಂಶಗಳು :**

  * ಆರ್ಥಿಕವಾಗಿ ಸೂಕ್ತವಾಗಿರಲು ಯೋಜನೆಗಳಿಗೆ

  – ಯೋಜನಾ ವೆಚ್ಚ

  – ಚಾಲನೆ ಮತ್ತು ದುರಸ್ತಿ ವೆಚ್ಚಗಳು

  – ಅಂದಾಜು ಆದಾಯ

  – ತೆರಿಗೆ, ಮೌಲ್ಯ ಕ್ಷೀಣಿಸುವುದು.

  * ಆರ್ಥಿಕ ಸೂಕ್ತತೆ ಅಂದಾಜು ಮಾಡಲು

  – ಆರ್ಥಿಕ ಮಾದರಿ

  * ಆರ್ಥಿಕ ಸೂಕ್ತತೆಯ ಮುಖ್ಯ ಮಾಪನಗಳು

  – ಯೋಜನೆಯ ವಾಪಸ್ಸು ಬಂಡವಾಳ ಪಡೆಯುವಿಕೆ

  – NPV

  – DSCR

  * ಮೂಲಭೂತ ಪದಗಳು ಮತ್ತು ವಾಖ್ಯೆಗಳು

**ಹಣದ ಸಮಯ ಬೆಲೆ : ಪ್ರಸ್ತುತ – ಭವಿಷ್ಯ**

- ಒಂದು ರೂಪಾಯಿಯನ್ನು ಕೊಡುವಿಕೆ ಇಲ್ಲವೆ ಪಡೆದುಕೊಳ್ಳುವಿಕೆ ಸದ್ಯದ ಹಾಗು ಭವಿಷ್ಯದ ಬೆಲೆಯನ್ನು ಅವಲಂಬಿಸಿದೆ.

**ಭವಿಷ್ಯದ ಬೆಲೆ**

- ರೂ. 100 ಇವತ್ತು ರೂ. 100 ಬೆಲೆ ಬಾಳುತ್ತದೆ.
- ಇದರ ಮುಂದಿನ ವರ್ಷದ ಬೆಲೆ ಏನು?
- ಎಷ್ಟು ಬಡ್ಡಿಯನ್ನು ಪಡೆಯುತ್ತವೆ ಎಂಬುದನ್ನು ಅವಲಂಬಿಸಿರುತ್ತವೆ.
- ಶೇಕಡ 10ರಷ್ಟು ಬಡ್ಡಿ ಪಡೆದರೆ ಅದು ರೂ. 110 ಗಳಾಗಿರುತ್ತವೆ.
- ರೂ. 110 ಭವಿಷ್ಯದ ಬೆಲೆ ಇಂದಿನ ಬೆಲೆ ರೂ. 100
- ಎರಡು ವರ್ಷಗಳ ನಂತರ ಇದೇ ಹಣ 100 $\times$(1.1)$\times$(1.1) = ರೂ. 121
- 1.1 ಚಕ್ರಬಡ್ಡಿ ಮೊದಲ ವರ್ಷದಲ್ಲಿ 1:2.21

**ಪ್ರಸ್ತುತ ಬೆಲೆ**

- ರೂ. 100ಗೆ ಪ್ರಸ್ತುತ ರೂ. 100 ಬೆಲೆ
- ಮುಂದಿನ ವರ್ಷ ರೂ. 100 ಗಳಿಸಿದರೆ ಅದರ ಬೆಲೆ ಪ್ರಸ್ತುತ ಎಷ್ಟು?
- ಅದೇ ಬಡ್ಡಿ ದರವನ್ನು ಪರಿಗಣಿಸಿದರೆ
- ಅದು ರೂ. 100 ÷ (1.1)= ರೂ. 90.91 ಈ ದಿನ
- ರೂ. 90.91 ಸದ್ಯದ ಬೆಲೆ ರೂ. 100 ಮುಂದಿನ ವರ್ಷ
- ರೂ. 100 ರನ್ನು ಎರಡು ವರ್ಷಗಳ ನಂತರ ಪಡೆದರೆ ಈಗಿನ ಬೆಲೆ 100% [(1.1)(1.1)] = ರೂ. 82.64
- ಶೇಕಡ 10 ರಷ್ಟು ರಿಯಾಯಿತಿ.
- 9.9090 (1/1.1) ಮುಂದಿನ ವರ್ಷದ ರಿಯಾಯಿತಿ ಅಂಶ .0.8264 (1/1.21) ಎರಡು ವರ್ಷಕ್ಕೆ ರಿಯಾಯಿತಿ ಅಂಶ.

**ಹಣದ ಹರಿಯುವಿಕೆ ವಿಶ್ಲೇಷಣೆ**

| ವರ್ಷ | 0 | 1 | 2 | 3 | 4 | 5 | 6 |
|---|---|---|---|---|---|---|---|
| ಒಟ್ಟು ಯೋಜನಾ ವೆಚ್ಚ | 100 | | | | | | |
| ಒಟ್ಟು ಆದಾಯ | | 25.00 | 287.50 | 330.63 | 38.22 | 437.25 | 502.84 |
| ನಿರ್ವಹಣಾ ವೆಚ್ಚ ಒಟ್ಟು ಹಣದ | | 37.50 | 43.13 | 49.50 | 57.03 | 65.50 | 75.43 |

| | | | | | | | |
|---|---|---|---|---|---|---|---|
| ಹರಿಯುವಿಕೆ | 1000.00 | 212.50 | 244.38 | 281.03 | 323.19 | 371.68 | 427.41 |
| ಕ್ರೂಢೀಕೃತ ಹಣದ ಹರಿಯುವಿಕೆ | 1000.00 | 787.50 | 543.13 | 262.00 | 61.09 | 432.75 | 860.17 |
| ರಿಯಾಯಿತಿದರ | 10.00% | | | | | | |
| ರಿಯಾಯಿತಿ ಅಂಶ | 1.00 | 0.9091 | 0.8264 | 0.7513 | 0.6830 | 0.6209 | 0.5645 |
| ಪ್ರಸ್ತುತ ಮೌಲ್ಯ | 1000.00 | 193.18 | 207.96 | 211.14 | 220.74 | 236.77 | 241.24 |
| ಕ್ರೂಢೀಕೃತ ರಿಯಾಯಿತಿ ಹರಿಯುವಿಕೆ | 1000.00 | 806.82 | 604.86 | 393.71 | 172.87 | 57.80 | 299.07 |
| ಒಟ್ಟಾರೆ ಪ್ರಸ್ತುತ ಮೌಲ್ಯ | 299.07 | | | | | | |
| ವಾಪಸ್ಸಾಗಿರುವ ಹಣದ ದರ (ಐಆರ್‌ಆರ್) | 18.49% | | | | | | |

**ರಿಯಾಯಿತಿ ಹಣದ ಹರಿಯುವಿಕೆ**

- ರಿಯಾಯಿತಿ ಹಣದ ಹರಿಯುವಿಕೆ (DCF) ವಿಧಾನದಲ್ಲಿ ಯೋಜನೆಯ ಎಲ್ಲಾ ಭವಿಷ್ಯ ಹಣದ ಹರಿಯುವಿಕೆಯನ್ನು ಒಂದೇ ಸಮಯದಲ್ಲಿ ಉಂಟಾಗುವುದೆಂದು ಭಾವಿಸಲಾಗುವುದು.
- DCF ಹಣದ ಸಮಯ ಬದ್ಧತೆ (ಬಡ್ಡಿ)ಗೆ ಬಹುಮುಖ್ಯ. ಇವತ್ತಿನ ದಿನ 1 ರೂಪಾಯಿ ಪಡೆಯುವುದು ಮುಂದೆ ಒಂದು ರೂಪಾಯಿ ಪಡೆಯುವುದಕ್ಕಿಂತ ಲಾಭದಾಯಕ.
- DCF ವಿಧಾನದಲ್ಲಿ ಅಗತ್ಯ ಹಣದ ವಾಪಸಾತಿ (RRR) ಯಾವುದೇ ಹೂಡಿಕೆಗೆ ಕನಿಷ್ಠ ವಾರ್ಷಿಕ ವಾಪಸಾತಿಯನ್ನು ಬಳಸುತ್ತದೆ.
- RRR ಯಾವುದೇ ಸಂಸ್ಥೆ ಹೂಡಿಕೆಯಲ್ಲಿ ಹೋಲಿಕೆಯ ಬೆದರಿಕೆ ಪರಿಸ್ಥಿತಿಗೆ ವಾಪಸ್ಸಾತಿಯನ್ನು ನಿರೀಕ್ಷಿಸುವುದಾಗಿದೆ.
- ಆರ್.ಆರ್.ಆರ್. ಅನ್ನು ರಿಯಾಯಿತಿ ದರ, ತೊಡಕಿನ ದರ, ಬಂಡವಾಳದ ವೆಚ್ಚ, ಅವಕಾಶ ಬಂಡವಾಳದ ವೆಚ್ಚವೆಂದೂ ಕರೆಯಲಾಗುವುದು.

**ನಿಲ್ಲಿ ... ಚಿಂತಿಸಿ !!**

- ಮೊದಲ ವರ್ಷದ ಕೊನೆಗೆ ಬದಲಾಗಿ ಪಾವತಿ ತತ್‌ಕ್ಷಣ ಬಂದರೆ,
- ಪ್ರಸ್ತುತ ಬೆಲೆ
  - ಹೆಚ್ಚು, ಅಥವಾ ಕಡಿಮೆ

?

- **ಪ್ರಮುಖ ಪ್ರಶ್ನೆ**
  - ಈ ಯೋಜನೆಯ ಹೂಡಿಕೆಗೆ ಅರ್ಹವೆ?

ಯೋಜನಾ ಆರ್ಥಿಕತೆ, ಉತ್ತರಿಸಬೇಕಾದ

1. ಮರುಪಾವತಿ ಅವಧಿ
2. ಪ್ರಸ್ತುತ ಜನ್ಯ ಬೆಲೆ (ಎನ್.ಪಿ.ವಿ.)
3. ಆಂತರಿಕ ವಾಪಸಾತಿ ದರ (ಐ.ಆರ್.ಆರ್.)
4. ಸಾಲು ಮರುಪಾವತಿ ವ್ಯಾಪ್ತಿ Ratio (DSCR)

**ವಾಪಸ್ಸಾತಿ ಕಾಲಾವಧಿ**

- ವಾಪಸ್ಸಾತಿಯ ಸಮಯಬದ್ಧತೆಯಲ್ಲಿ ಭವಿಷ್ಯದ ಹಣದ ಹರಿಯುವಿಕೆ, ಪ್ರಾಥಮಿಕ ಬಂಡವಾಳ ಹೂಡಿಕೆ ಯೋಜನಾ ವೆಚ್ಚವನ್ನು ಪರಿಗಣಿಸುತ್ತದೆ.
- ಕಡಿಮೆ ಅವಧಿಯ ವಾಪಸ್ಸಾತಿ ಸೂಕ್ತ.
- ಸಂಸ್ಥೆಗಳು ವಾಪಸ್ಸಾತಿ ಕಾಲಾವಧಿಯನ್ನು ನಿರ್ಧರಿಸುತ್ತವೆ. ಕಡಿಮೆ ವಾಪಸ್ಸಾತಿಯನ್ನು ಹೆಚ್ಚಿನ ಬೆದರಿಕೆ ಪರಿಸ್ಥಿತಿಯಲ್ಲಿ ಭಯಸುತ್ತವೆ.
- ಅರ್ಥಮಾಡಿಕೊಳ್ಳಲು ಸುಲಭ.
- ಸಮ ಹಣದ ಹರಿಯುವಿಕೆ.
- ವಾಪಸ್ಸಾತಿ ಕಾಲಾವಧಿ = $\frac{\text{ಪ್ರಾರಂಭ ಒಟ್ಟು ಹೂಡಿಕೆ}}{\text{ಭವಿಷ್ಯದಲ್ಲಿ ಗೊತ್ತಿಲ್ಲದ ವಾರ್ಷಿಕ ಹಣದ ಹರಿಯುವಿಕೆ}}$
- ಸಮವಾಗಿ ಹರಿಯದ ಹಣದ ಪರಿಸ್ಥಿತಿಗೆ, ಮೊದಲ ಹೂಡಿಕೆ ವಾಪಸ್ಸಾಗುವವರಿಗೆ ಹಣವನ್ನು ಹೂಡುವುದು ಮತ್ತು ಆಗ ಸಮಯವನ್ನು ವಾಪಸ್ಸಾತಿ ಕಾಲಾವಧಿಗೆ ಎಣಿಸಬೇಕು.

**ಪ್ರಸ್ತುತ ಒಟ್ಟು ಹಣದ ಮೌಲ್ಯ** (NPV)

- ಎನ್.ಪಿ.ವಿ. ಎಲ್ಲಾ ರಿಯಾಯಿತಿಗಳನ್ನು ಬಂಡವಾಳದ ವೆಚ್ಚದಲ್ಲಿ ಪರಿಗಣಿಸಲಾಗುವುದು.
- ಪ್ರಸ್ತುತ ಒಟ್ಟು ಹಣದ ಮೌಲ್ಯ (NPV) ವಿಧಾನ ಆರ್ಥಿಕ ಲಾಭ ಮತ್ತು ನಷ್ಟಗಳನ್ನು ಪ್ರತಿಯೊಂದು ಹೂಡಿಕೆಯಲ್ಲಿ ಪರಿಗಣಿಸಿ ನಿರೀಕ್ಷಿತ ವಾಪಸ್ಸಾತಿ ದರವನ್ನು (RRR) ಬಳಸುತ್ತದೆ.

- ಕೇವಲ ಆರ್ಥಿಕ ಪರಿಗಣನೆಯಲ್ಲಿ ಶೂನ್ಯ ಅಥವಾ ಶೂನ್ಯಕ್ಕಿಂತ ಹೆಚ್ಚಿನ ಎನ್.ಪಿ.ವಿ. ಮಾತ್ರ ಪರಿಗಣಗೆ ಯೋಗ್ಯ.
  - NPV ಅನ್ನು ಕೆಲವೊಮ್ಮೆ ಕ್ರೋಢೀಕೃತ ರಿಯಾಯಿತಿ ಹಣದ ಹರಿಯುವಿಕೆ ಎಂದೂ ಕರೆಯಲಾಗುವುದು. ಅದು ಸಾಂದ್ರಿತವಾದ ವಾರ್ಷಿಕ ರಿಯಯಿತಿ ಹಣದ ಹರಿಯುವಿಕೆಯನ್ನು ಯೋಜನೆಯಲ್ಲಿ ತಿಳಿಸುತ್ತದೆ.

**ಒಳವಾಪಸ್ಸಾತಿಯ ದರ (IRR)**

- ಎಲ್ಲಾ ರಿಯಾಯಿತಿಗಳನ್ನು ಸೂನ್ನೆ NPV ಪರಿಗಣಿಸುತ್ತದೆ.
- ಐ.ಆರ್.ಆರ್. ವಿಧಾನದಲ್ಲಿ ರಿಯಾಯಿತಿ ದರವನ್ನು ಪತ್ತೆ ಮಾಡಿ, ಪ್ರಸ್ತುತ ಹಣದ ಹರಿಯುವಿಕೆಯ ಮೌಲ್ಯವನ್ನು ನರೀಕ್ಷಿತ ಹಣದ ಹರಿಯುವಿಕೆಯನ್ನು ಸಮವೆಂದು ಪರಿಗಣಿಸುವುದು.
- ಯಾವುದೇ ಯೋಜನೆಯನ್ನು IRR ಸಮ ಅಥವಾ RRR ಗಿಂತ ಹೆಚ್ಚಿದ್ದಾಗ ಮಾತ್ರ ಒಪ್ಪಲಾಗುವುದು.

**ಯೋಜನಾ ವೆಚ್ಚ :**

- ಕಾಮಗಾರಿ ಕೆಲಸಗಳು
- ಸಾಮಗ್ರಿಗಳು
- ಸ್ಥಿರ ಆಸ್ತಿಗಳು
- ಪ್ರಾಥಮಿಕ ವೆಚ್ಚಗಳು
- ಕಾರ್‍ಯಾರಂಭ ಸಂಬಂಧಿಸಿದ ವೆಚ್ಚಗಳು
- ಇತ್ಯಾದಿ.

**ಆರ್ಥಿಕ ವೆಚ್ಚಗಳು :**

- ಮೂಲ ಶುಲ್ಕ 0.25–1.5%
- ಬದ್ಧತೆಯ ಶುಲ್ಕ 0.25.0.5% ಪ್ರತಿ ವರ್ಷ
- ಜಮಾ
- ಸ್ವತಂತ್ರ ಅಭಿಯಂತ/ಲೆಕ್ಕಪರಿಶೋಧಕರು/ಕಾನೂನು ಸಲಹೆಗಾರರು–2–3%
- ಮುಂಗಡ ಪಾವತಿ ಶುಲ್ಕ 1–3%

**ನಿದರ್ಶನ**

**ಎಸ್.ಎನ್. ಮಾರುಕಟ್ಟೆ, ಶಿವಮೊಗ್ಗ**

3 ಎಕರೆ 11 ಗುಂಟೆ ಜಮೀನು ಶಿವಮೊಗ್ಗ ನಗರಸಭೆಯ ಹಿಡಿತದಲ್ಲಿದೆ. 30 ವರ್ಷಗಳ ಕಾಲ ಖಾಸಗಿಯವರೊಟ್ಟಿಗೆ ಸೇವಾ ಸೌಲಭ್ಯವನ್ನು ಅಭಿವೃದ್ಧಿ ಪಡಿಸುವುದು ಯೋಜನೆಯ ಉದ್ದೇಶ. ಕೈಗಾರಿಕೆ ಇಲಾಖೆ, ಕಛೇರಿ, ಪಶು ವೈದ್ಯ ಇಲಾಖೆ, ಸಭಾಂಗಣ ಮತ್ತು ತರಬೇತಿ ಸ್ಥಳಾವಕಾಶ, ಶಿವಮೊಗ್ಗ ನಗರಸಭೆಗೆ ಅಗತ್ಯ ಕಛೇರಿಗಳು, ಗ್ರಾಹಕ ಸೇವಾ ಕೇಂದ್ರ ಹಾಗೂ ಸಾರಿಗೆ ವಾಹನಗಳ ನಿಲ್ದಾಣ ಜೊತೆಗೆ ಸಾರ್ವಜನಕ ಸೇವೆಯ ಹೋಟೆಲ್, ಕಛೇರಿ ಇತರೆ ಸ್ಥಳಾವಕಾಶ 35,000 ಚದರ ಅಡಿಗಳ ಸ್ಥಳಾವಕಾಶ ಸೃಷ್ಟಿ 52 ಕೋಟಿ ರೂ.ಗಳ ವೆಚ್ಚದಲ್ಲಿ ರೂ. 40 ಪ್ರತಿ ಚದರ ಅಡಿಗೆ ಮಾಸಿಕ ಬಾಡಿಗೆ ನಿರ್ದಿಷ್ಟಪಡಿಸಲಾಗಿದೆ.

**ಯೋಜನಾ ಆರ್ಥಿಕ ಸೂಕ್ತತೆಯ :**

| ವರ್ಷಗಳು | NPV (ಕೋಟಿ ರೂ.ಗಳಲ್ಲಿ) | IRR 30 ವರ್ಷಗಳಿಗೆ |
|---|---|---|
| 30 | 8.6 | 15.07% |

# 5.4 ಅಧಿವೇಶನ : 2.3 ಮತ್ತು 2.4
# ಯೋಜನಾ ಕರಾರು ಒಪ್ಪಂದ ಮತ್ತು ಬೆದರಿಕೆ ನಿರ್ವಹಣೆ

**1.0 ಯೋಜನಾ ಕರಾರು ಒಪ್ಪಂದ ನಿರ್ವಹಣೆ**

ವಾಣಿಜ್ಯ ಚಟುವಟಿಕೆಯಲ್ಲಿ ಕರಾರು ಒಪ್ಪಂದಗಳು ಬೆನ್ನೆಲುಬು. ಜೀವಕೋಶಗಳಂತೆ ಕರಾರು ಒಪ್ಪಂದಗಳು ಹೆಚ್ಚುತ್ತವೆ, ಮರು ಅಸ್ತಿತ್ವ ಪಡೆಯುತ್ತವೆ. ಹಾಗೆಯೇ ಸಂಬಂಧಿಸಿದ ಕಾನೂನುಗಳೂ ಕೂಡ ವಿಫುಲವಾಗಿವೆ. ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣ ಹೊಸ ಬಗೆಯ ವಾಣಿಜ್ಯ ಒಪ್ಪಂದಗಳು ಹೊರಹೊಮ್ಮಿದ್ದು, ವಿವಿಧ ಸಾಂಸ್ಕೃತಿಕ, ಪರಂಪರೆ, ಕಾನೂನುಚೌಕಟ್ಟು ಮತ್ತು ನಿಯಂತ್ರಣ ಮಾರ್ಗಸೂಚಿ ಅನುಗುಣವಾಗಿ ವಿವಿಧ ಸಮಾಜಗಳಲ್ಲಿ ಸಂಕೀರ್ಣ ಪರಿಸ್ಥಿತಿ ಬಂದೊದಗಿದೆ.

ಜಾಗತೀಕರಣವಾಗಿ ವಿವಿಧ ಸಂಸ್ಥೆಗಳು ಹಾಗೂ ಸಮ್ಮೇಳನಗಳು ವಿಶ್ವಸಂಸ್ಥೆ, ವಿಶ್ವಬ್ಯಾಂಕ್ ಮತ್ತಿತರ ಸಂಸ್ಥೆಗಳ ಅಭಿವೃದ್ಧಿ ಚಟುವಟಿಕೆಯ ಆಶ್ರಯದಲ್ಲಿ ಅಪಾರವಾದ ಕರಾರು ನಿರ್ವಹಣಾ ಕರಾರು ಮಾದರಿ ಒಪ್ಪಂದಗಳು ಮೂಡಿವೆ. ಮಾಹಿತಿ ತಂತ್ರಜ್ಞಾನವೂ ಕೂಡಾ ಅಪಾರವಾದ ವಿವರಗಳನ್ನು ನೀಡುತ್ತಿವೆ. ಉದಾಹರಣೆಗೆ ಜಾಗತಿಕವಾಗಿ UNCITRAL ವಿಶ್ವಸಂಸ್ಥೆ ಅಂತರರಾಷ್ಟ್ರೀಯ ವ್ಯಾಪಾರ ಕಾನೂನು ಪ್ರಾಧಿಕಾರದ ಕಾನೂನು ಭಾರತದಲ್ಲಿ 1996 ರಿಂದಲೇ ಜಾರಿಗೆ ಬಂದಿದೆ.

ವ್ಯಾಪಾರ ಕರಾರಿನ ಮುಖ್ಯ ಅಂಶಗಳು. ಸಾಮರ್ಥ್ಯ, ಕಾರ್ಯಕ್ಷಮತೆ, ನಿರೀಕ್ಷಿಸಲಾಗದ ನೈಸರ್ಗಿಕ ವಿಪತ್ತುಗಳು, ಹೆಚ್ಚಳ, ದುಬಾರಿಯಾದ ಬೆಲೆ, ದಂಡ, ಕಾನೂನಿನ ವ್ಯಾಪ್ತಿ, ಸ್ವಂತ ನಿರ್ಧಾರ, ಪ್ರಾಮುಖ್ಯ, ಮಿತಿ, ವೈವಿದ್ಯತೆ, ಯೋಜನೆ ನಿಲ್ಲಿಸುವಿಕೆ, ಜಾರಿಗೆ, ಕಾನೂನಿನ, ಗೌಪ್ಯತೆ, ಅನುಷ್ಠಾನ, ಹಣಸಂದಾಯ, ದಿವಾಳಿತನದ ಹಾನಿ, ಕರಾರಿನ ಉಲ್ಲಂಘನೆ, ಗ್ಯಾರಂಟಿ, ನಿರ್ದಿಷ್ಟ ಮತ್ತು ನಿಗದಿತ ಪ್ರಮಾಣ, ಇತ್ಯಾದಿ.

ತೆರಿಗೆ ಸಂಬಂಧಿಸಿದಂತೆ ಕರಾರಿಗೆ ಎಕ್ಸೆಸ್ ಕಾನೂನು 2002ರ ನಂತರ ವ್ಯಾಪಾರ ತೆರಿಗೆ– ಮಾರಾಟ ತೆರಿಗೆ ಸಹಿತ, ಆಮದು ತೆರಿಗೆ, ಸೇವಾ ಶುಲ್ಕ, ಆದಾಯ ತೆರಿಗೆ, ಮೂಲದಲ್ಲೆ ತೆರಿಗೆ ಕಡಿತ, ದ್ವಿ ತೆರಿಗೆ ಒಪ್ಪಂದಗಳು ಇತ್ಯಾದಿ. ಕರಾರು ಒಪ್ಪಂದಗಳ ವಿವಿಧ ಬಗೆ, ಒಟ್ಟಾರೆ, ಪೂರೈಕೆ, ಸೇವಾ, ಸಂಸ್ಥೆಗಳ ಬಗ್ಗೆ, ಬಾಡಿಗೆ, ಸಾಗಾಣಿಕೆ, ದುರಸ್ಥಿ, ಸಗಟು ಮಾರಾಟ, ದಿವಾಳಿತನ, ಗ್ಯಾರಂಟಿ, ಕೆಲಸದ ಕರಾರು, ಮತ್ತು ಸಮಾಲೋಚನೆ. ಇವುಗಳನ್ನು ಸಾಖಾಸ ಮಾದರಿಗಳಾದ BOO, BOLT, BOOT, LSTK ಮತ್ತಿತರ ಸ್ಥಿತಿಗಳಲ್ಲಿ ಪರಿಗಣಿಸಲಾಗುತ್ತದೆ.

ವಾಣಿಜ್ಯ ಕರಾರು ಒಪ್ಪಂದಗಳಲ್ಲಿ ವಿದೇಶಿ ವಿನಿಮಯ, ಸಾಗರ ವಿಮಾ, ಗೌರವಧನ, ಸಾಗರೋತ್ತರ ವ್ಯಾಪಾರ, ಸಾಲ ಪತ್ರ, ವಸ್ತುಗಳ ವಿಮಾ, ಹಕ್ಕು ಹಸ್ತಾಂತರ, ಹರಾಜು ಬಾಂಡ್‌ಗಳು, ಬೆಂಕಿ ಮತ್ತು ಸಾಮಾನ್ಯ ವಿಮಾ, ತಂತ್ರಜ್ಞಾನ ಪಡೆಯುವ ಒಪ್ಪಂದಗಳು, ಬೌದ್ಧಿಕ ಹಕ್ಕು ಕಾಯ್ದೆ, ರಫ್ತು ಸಾಲದ ಗ್ಯಾರಂಟಿ ಇತ್ಯಾದಿ.

**2.0 ಉತ್ತಮ ವಾಣಿಜ್ಯ ಕರಾರಿನ ಅಂಶಗಳು :**

ಕರಾರು ಒಪ್ಪಂದಗಳಲ್ಲಿ ನ್ಯೂನತೆ ಇದ್ದಲ್ಲಿ ಸಮಯದ ನಷ್ಠ, ಹಣದ ನಷ್ಠ ಮತ್ತು ಉತ್ತಮ

ಸಂಬಂಧಗಳಲ್ಲಿ ಕಡಿತ ಉಂಟಾಗುತ್ತದೆ. ಮೂಲಭೂತ ಅಂಶಗಳನ್ನು ಪರಿಗಣಿಸಿದರೆ ಸಮಸ್ಯೆಯನ್ನು ಮೂಲದಲ್ಲೆ ನಿವಾರಿಸಿಕೊಳ್ಳಬಹುದು.

ಒಂದು ಒಳ್ಳೆಯ ಕರಾರು ಒಪ್ಪಂದದಲ್ಲಿ – ಸ್ಪಷ್ಟತೆ, ಸರಳ, ನಿಖರತೆ ಹಾಗೂ ಕಾರ್ಯಸಾದು ವಿಷಯಗಳು ಬಹುಮುಖ್ಯ. ಕರಾರು ಒಪ್ಪಂದಗಳಲ್ಲಿ 'ಪದಗಳ' ಬಳಕೆ ಅತ್ಯಮೂಲ್ಯ.

ವ್ಯಾಪಾರಿ ಒಪ್ಪಂದದಲ್ಲಿ ಬೆದರಿಕೆ ಅಂಶಗಳು, ತಪ್ಪುಗ್ರಹಿಸುವ ಬೆದರಿಕೆ, ಹಣದ ನೀಡುವಿಕೆಯ ಬೆದರಿಕೆ, ಗುಣಮಟ್ಟದ ಬೆದರಿಕೆ, ಸಾಮರ್ಥ್ಯದಂತೆ ಕೆಲಸ ಮಾಡದ ಬೆದರಿಕೆ, ಸಾಗಾಣಿಕೆಯಲ್ಲಿ ನಷ್ಟ ಬೆದರಿಕೆ, ಕಾನೂನು ಚೌಕಟ್ಟಿನ ಬೆದರಿಕೆ, ವಾರಸುದಾರತೆಯ ಬೆದರಿಕೆ, ಗೌಪ್ಯದ ಬೆದರಿಕೆ, ಅಂತರಾಷ್ಟ್ರೀಯ ಮೌಲ್ಯದ ಬೆದರಿಕೆ. ಪ್ರತಿಯೊಂದು ಕರಾರು ಒಪ್ಪಂದ ಅನೇಕ ಸಂಬಂಧಿಸಿದ ಒಪ್ಪಂದಗಳನ್ನು ಹೊಂದಿರುತ್ತದೆ. ಉದಾಹರಣೆಗೆ ಮಾರಾಟಗಾರ ಹಾಗೂ ಕೊಳ್ಳುವವರ ನಡುವೆ – ಸಾಗಾಣಿಕೆ ಒಪ್ಪಂದ, ವಿಮಾ ಒಪ್ಪಂದ, ಕಾರ್ಮಿಕ ಒಪ್ಪಂದ, ಸಾಲ ಪತ್ರ ಒಪ್ಪಂದ ಮತ್ತು ಪೂರೈಕೆ ಒಪ್ಪಂದ.

## ಮಾನವ ಕಾನೂನು ಪರಿಸರ

**ವ್ಯಾಪಾರ ಕಾನೂನುಗಳು**

ಒಪ್ಪಂದ, ಪರಸ್ಪರ ಒಪ್ಪಂದ,
ಮಾರಾಟ ಮತ್ತು ಸಾಗಾಣಿಕೆ



**ಸಾಮಾಜಿಕ ಕಾನೂನುಗಳು**

ಮಾನವ ನಡವಳಿಕೆಯ ಭಾರತೀಯ
ನೀತಿ ಸಂಹಿತೆ ಸಂಬಂಧಿಸಿದ ಸಿ.ಪಿ.ಸಿ.

**ಅಧಿಕ ಕಾನೂನುಗಳು**

ತೆರಿಗೆ ಕಾನೂನು, ಭೂಕಾಯ್ದೆ,
ಕಾರ್ಮಿಕ ಕಾನೂನು

ದೇಶದ ರಾಜ್ಯಾಂಗದಲ್ಲಿ ಪರಿಚ್ಛೇದ 299 ಎಲ್ಲಾ ಕರಾರು ಒಪ್ಪಂದಗಳು ಲಿಖಿತ ರೂಪದಲ್ಲಿರುವಂತೆ ಆದೇಶಿಸುತ್ತದೆ.

ಪರಿಸ್ಥಿತಿ ಮತ್ತು ನಿರೀಕ್ಷೆ – ಕರಾರು ಒಪ್ಪಂದಗಳಲ್ಲಿ ಅತಿ ಮುಖ್ಯ. ಈ ಎರಡು ಬಗೆಯ ವಿಷಯಗಳಲ್ಲಿ ಪರಿಸ್ಥಿತಿ ಕರಾರು ಒಪ್ಪಂದಕ್ಕೆ ಪ್ರಮುಖ ಅಂಶ. ಪರಿಸ್ಥಿತಿಯ ಉಲ್ಲಂಘನೆಯಲ್ಲಿ ಭಾದಿತರಾದವರು ಕರಾರು ಒಪ್ಪಂದವನ್ನು ಮಂಜೂರು ಮಾಡದಿರಬಹುದು. ಆದರೆ ನಿರೀಕ್ಷೆಯಲ್ಲಿನ ವ್ಯತಯವನ್ನು ಹಾನಿಗಳನ್ನು ಮರು ಪಡೆಯಲು ಹಕ್ಕೋತ್ತಾಯ ಮಾಡಬಹುದು.

ಒಂದು ಉತ್ತಮ ವಾಣಿಜ್ಯ ಒಪ್ಪಂದದಲ್ಲಿ ಬೆದರಿಕೆಗಳನ್ನು ನಿವಾರಿಸಿಕೊಳ್ಳಲು ವಿಸ್ಕೃತವಾದ

ಕರಾರನ್ನು ರೂಪಿಸಿ ಅದರಲ್ಲಿ ಪ್ರಮುಖ ಪದಗಳನ್ನು ಅಳವಡಿಸಿಕೊಳ್ಳಲಾಗುತ್ತದೆ.

– ತಾಂತ್ರಿಕ ಪದಗಳು
  - ಅ) ನಿರ್ದಿಷ್ಠ ವಸ್ತುವಿನ ವಿವರಣೆ.
  - ಆ) ಗುಣ
  - ಇ) ಮಾರ್ಗೋಪಾಯ
  - ಈ) ವಿನ್ಯಾಸ ವಿವರಗಳು
  - ಉ) ಉಪವೀಕ್ಷಣೆ
  - ಊ) ನಿರೀಕ್ಷಣಾ

– ವಾಣಿಜ್ಯ ಪದಗಳು
  - ಅ) ಪೂರೈಕೆ
  - ಆ) ಮೌಲ್ಯ
  - ಇ) ಹಾನಿ
  - ಈ) ಅನಿರೀಕ್ಷಿತ ಆಘಾತಗಳು
  - ಉ) ಕಾನೂನು ವ್ಯಾಪ್ತಿ
  - ಊ) ಕರಾರು ಉಲ್ಲಂಘನೆ ಪರಿಹಾರ
  - ಋ) ಬೆದರಿಕೆಗೆ ಯೋಜನೆ
  - ೠ) ಮಾಲೀಕತ್ವ ಹಸ್ತಾಂತರ
  - ಎ) ಹೆಚ್ಚು ಕಡಿಮೆ
  - ಏ) ಬೆಲೆ ಹೆಚ್ಚಳ
  - ಐ) ತೆರಿಗೆ ಇತ್ಯಾದಿ

ಉದಾ : ಕರಾರು ಒಪ್ಪಂದ : ನಾಲ್ಕು ಲೀಟರ್ ಹಾಲನ್ನು ಬಾಟಲ್‌ಗಳಲ್ಲಿ ನಾಳೆ ಬೆಳಿಗ್ಗೆ ಪೂರೈಸುವುದು. ಇಲ್ಲಿ ನಾಲ್ಕು ಲೀಟರು, ಹಾಲು ನಾಳೆ ಬೆಳಿಗ್ಗೆ ಅತ್ಯಂತ ಪ್ರಮುಖ ಅಂಶಗಳು. ಬಾಟಲ್ ನಿರೀಕ್ಷಿತ – ಪ್ಲಾಸ್ಟಿಕ್ ಕವರ್‌ಗಳಲ್ಲಿ ಕೂಡಾ ಪೂರೈಸಬಹುದು.

ವ್ಯಾಪಾರದಲ್ಲಿ **'ತಿಳುವಳಿಕೆಯ ಒಕ್ಕಣೆ'** (MOU) ಆಸಕ್ತ ಪತ್ರ (Letter of Intent), ಸಮಾಧಾನಕರ ಪತ್ರ (Letter of Comfort), ಬದ್ಧತೆಯ ಪತ್ರ (Letter of Committment) ಇತ್ಯಾದಿ ಕರಾರು ಒಪ್ಪಂದಗಳಲ್ಲಿ ಎಂಬ ಭಾವನೆ ಇದೆ. ಇಲ್ಲಿ ಸಂಬಂಧಿಸಿದ ಒಕ್ಕಣೆಯಲ್ಲಿ ಸಂಬಂಧಿಸಿದವರು ಹೇಗೆ ಒಪ್ಪಂದಗಳನ್ನು ನಿರ್ವಹಿಸುತ್ತಾರೆ ಎಂಬುದು ಅಗತ್ಯ.

ಆಮದು ರಫ್ತು ಒಪ್ಪಂದಗಳಲ್ಲಿ ಪರಿಗಣಿಸಬೇಕಾದ ಅಂಶಗಳು.

- ಆಮದು ತೆರಿಗೆ
- ಮೂಲದ ಪ್ರಮಾಣ ಪತ್ರ
- ಅಂತರಾಷ್ಟ್ರೀಯ ವಾಣಿಜ್ಯ ಪದಗಳು
- ಅಂತರಾಷ್ಟ್ರೀಯ ಮೌಲ್ಯ ವ್ಯತ್ಯಾಸ ಬೆದರಿಕೆ

- ಅಂತರಾಷ್ಟ್ರೀಯ ಮೌಲ್ಯ ಪಡೆಯುವ ಬೆದರಿಕೆ
- ಎರಡು ತೆರಿಗೆ ಬೆದರಿಕೆ
- ಕಾರ್ಯವ್ಯಾಪ್ತಿ
- ಕಾನೂನುಗಳ ಅನುಷ್ಠಾನ
- ವ್ಯತ್ಯಾಸಗಳ ನ್ಯಾಯಬದ್ಧ ಪರಿಹಾರ
- ಔಪಚಾರಿಕ ಭಾಷೆ
- ದೊರಕಿಸುವ ವಿಧಾನ
- ಮಾಲೀಕತ್ವ / ಬೆದರಿಕೆ ವರ್ಗಾವಣೆ
- ಹಣ ಸಂದಾಯ ವಿಧಾನ
- ಪ್ರಮಾಣ / ಗುಣಮಟ್ಟದ ನಿರೀಕ್ಷಣೆ
- ಪ್ರಾಮುಖ್ಯತೆಯ ದೇಶ
- ಬೆಲೆಯ ವ್ಯತ್ಯಾಸ
- ಸಾಮರ್ಥ್ಯಗನುಗುಣವಾಗಿ ಕೆಲಸದ ನಿರೀಕ್ಷಣೆ
- ಹಕ್ಕುಗಳ ಸ್ಪಷ್ಟತೆ
- ವಿಮೆ
- ಕಾಗದ ಪತ್ರಗಳ ವರ್ಗಾವಣೆ
- ಭಾಗದ ಸಾಗಾಣಿಕೆ
- ಬಂದರು ಮತ್ತು ತಲುಪಬೇಕಾದ ಸ್ಥಳ
- ಬೌದ್ಧಿಕ ಆಸ್ತಿ ಹಕ್ಕುಗಳು.

ಕರಾರು ಒಪ್ಪಂದಗಳಲ್ಲಿ ಪದಗಳ ಬಳಕೆ ಅತ್ಯುತ್ತಮ ಕಾನೂನು ಪರಿಣಿತರೇ ಮಾಡಬೇಕೆಂದಿಲ್ಲ. ನಿಖರತೆ, ಸರಳತೆ, ಸ್ಪಷ್ಟತೆ ಮತ್ತು ನ್ಯಾಯೋಜಿತವಾದ ಅಂಶಗಳು ಒಂದು ಉತ್ತಮ ಕರಾರು ಒಪ್ಪಂದಕ್ಕೆ ಮೂಲಾಧಾರ.

ಭಾರತೀಯ ಕರಾರು ಒಪ್ಪಂದ ಕಾಯ್ದೆ 1872 ಅಪಾರವಾದ ಸಮಯದ ಪರೀಕ್ಷೆಯಲ್ಲಿ ಕೆಲಸ ಮಾಡುತ್ತಿದೆ. ಪರಿಸ್ಥಿತಿಯ 1997 ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ಸರ್ಕಾರದ ಸಂಸ್ಥೆಗಳಿಗೆ 30 ವರ್ಷಗಳು ಹಾಗೂ ಇತರರಿಗೆ 3 ವರ್ಷಗಳೊಳಗೆ ಸಾಲದ ಮರುಪಾವತಿಯನ್ನು ಪ್ರಾರಂಭಿಸಲು ಸಮಯವನ್ನು ನಿಗದಿಪಡಿಸಲಾಗಿದೆ.

ಸಾಮಾನ್ಯವಾಗಿ ಒಂದೇ ರೀತಿಯ ಹಾಗೂ ಸ್ಪಷ್ಟತೆಗಾಗಿ ಮಾದರಿ ನಮೂನೆಗಳನ್ನು ಬಳಸುವುದರಿಂದ ಕರಾರು ಒಪ್ಪಂದಗಳಲ್ಲಿ ಅನೇಕ ಗೊಂದಲಗಳು ಉಂಟಾಗುತ್ತವೆ. ಅಪರೂಪವಾಗಿ ಪ್ರತಿಯೊಂದು ಪದಗಳನ್ನು ಸಂಬಂಧಿಸಿದ ಭಾಗೀದಾರರು ಅವಲೋಕಿಸಿರುತ್ತಾರೆ. ಈ ಬಗೆಯ ತೊಡಕಿನಿಂದ ಅನೇಕ ವ್ಯಾಜ್ಯಗಳು ಹೊರಬರುತ್ತಿವೆ. ದುರುದೃಷ್ಟವಶಾತ್, ವಿಶ್ವಸಂಸ್ಥೆ ಆಧಾರಿತ ಅಂತರರಾಷ್ಟ್ರೀಯ ವ್ಯವಹಾರಕ್ಕೆ ಸಂಬಂಧಿಸಿದ ಕರಾರು ಒಪ್ಪಂದದ ನಮೂನೆಯನ್ನು ಆಧಾರವಾಗಿದ್ದು ಕೊಂಡು 1991 ರಿಂದಲೂ ಭಾರತೀಯ ಅಂತರಾಷ್ಟ್ರೀಯ ವಾಣಿಜ್ಯ ಸಂಸ್ಥೆ ಅನುವು ಮಾಡಿಕೊಟ್ಟಿದೆ.

## 2.0 ಕರಾರು ಒಪ್ಪಂದದ ಬೆದರಿಕೆ ನಿರ್ವಹಣೆ

**ಪರಸ್ಪರ ಸಂಬಂಧಿತ ವಿವರಗಳು**

| ಸಂ. | ಬೆದರಿಕೆ | ವಿವರಗಳು | ಸಾಧ್ಯತೆ ಪರಿಹಾರಗಳು |
|---|---|---|---|
| 1 | ತಪ್ಪುಗ್ರಹಿಕೆ | • ವಸ್ತುಗಳ ಗುರುತಿಸುವಿಕೆ<br>• ಸರಬರಾಜು<br>• ವೆಚ್ಚ ಭರಿಸುವಿಕೆ<br>• ತೆರಿಗೆ | ಸಂಬಂಧಿಸಿದ ಕಾನೂನುಗಳನ್ನು ಅಳವಡಿಸಿಕೊಳ್ಳುವುದು. |
| 2 | ಪಾವತಿ | • ಯಾವಾಗ ?<br>• ಹೇಗೆ ? | • ಗ್ಯಾರಂಟಿ ವಿವರಗಳು |
| 3 | ಗುಣ | • ನಿಗದಿತ ವಿವರಗಳು<br>• ಶೇಕಡಾವಾರು ಹೆಚ್ಚು ಕಡಿಮೆ ಒಪ್ಪಿಗೆಯ ಮಿತಿ | • ನಮೂನೆಗಳು<br>• ಪರಿವೀಕ್ಷಣೆ |
| 4 | ಉತ್ತಮ ಕಾರ್ಯ ಕ್ಷಮತೆಯ ಕೊರತೆ | • ನಿರೀಕ್ಷೆ<br>• ಪರಿಣಾಮ | • ದಂಡ<br>• ಬೆದರಿಕೆಕೊಳ್ಳುವಿಕೆ<br>• ಗ್ಯಾರಂಟಿ/ವಾರಂಟಿ |
| 5 | ತಡವಾದ ಸರಬರಾಜು | • ಸಮಯ<br>• ವಿಧಾನ | • ದಂಡ<br>• ಬೆದರಿಕೆ ಕೊಳ್ಳುವಿಕೆ<br>• ಅನಿರೀಕ್ಷಿತ ಹಾನಿ |
| 6 | ಸಾಗಾಣಿಕೆಯಲ್ಲಿ ಹಾನಿ | • ಯಾರ ಹೊಣೆ?<br>• ವಸೂಲಾತಿ | • ವಿಮೆ |
| 7 | ಕಾನೂನಿನ ವ್ಯಾಪ್ತಿ | • ಪ್ರಸ್ತುತ ಕಾನೂನುಗಳ ಹತಾಶೆ<br>• ಕಾನೂನಿನ ಅನುಷ್ಠಾನ | • ಸಾಮರ್ಥ್ಯ |
| 8 | ಹಕ್ಕು ಪತ್ರ | • ತೊಡಕುಗಳು<br>• ಹಸ್ತಾಂತರ ಸಮಯ | • ಆಸಕ್ತಿ<br>• ವ್ಯಾಪಾರ ಕ್ರಿಯೆ |
| 9 | ಗೌಪ್ಯತೆ | • ಗೌಪ್ಯ ಸೋರುವಿಕೆ<br>• ಬಹಿರಂಗಪಡಿಸುವಿಕೆ | • ಹಕ್ಕು<br>• ಲೈಸೆನ್ಸ್<br>• ದಂಡ |
| 10 | ವಿದೇಶಿ ವಿನಿಮಯ ಮೌಲ್ಯ | • ಹೆಚ್ಚು ಕಡಿಮೆ<br>• ವಿನಿಮಯ | • ಒಂದೇ ಹಣದ ವಿನಿಮಯ |

ಒಂದು ಒಳ್ಳೆಯ ಕರಾರು ಒಪ್ಪಂದ ನಿಯಮಗಳು

- ಪ್ರತಿಯೊಂದು ಪದವೂ ಸರಳ, ನಿಖರ, ಸ್ಪಷ್ಟ ಹಾಗೂ ಕಾರ್ಯಸಾದು.
- ಪ್ರತಿಯೊಂದು ವಾಕ್ಯವೂ 26 ಇಂಗ್ಲೀಷ್ ಪದಗಳನ್ನು ಮೀರಬಾರದು.

**ಆರ್ಥಿಕ ಬೆದರಿಕೆಗೆ – ಸ್ಥಿತಿಗಳ ನಿರ್ವಹಣೆ**

**ಅ) ಸ್ಥಿತಿ : ಬಳಕೆದಾರ ಹಣಪಾವತಿ ಮಾಡುತ್ತಿಲ್ಲ**

| ಸಂ. | ಮಾಡಬೇಕದ್ದುದು | ಮಾಡಬಾರದ್ದು |
|---|---|---|
| 1 | ಪಾವತಿಯನ್ನು ಕರಾರು ಒಪ್ಪಂದದಲ್ಲಿ ”ಮುಖ್ಯವಾಗಿಸುವುದು” | • ಖಾತರಿಪಡಿಸಿದ ಪತ್ರಗಳನ್ನು ಬಳಸುವುದು. |
| 2 | ವಸ್ತುಗಳ ಒಡೆತನವನ್ನು ಹಣ ಪಾವತಿಗೂ ಮೊದಲೇ ನೀಡದಿರುವುದು | • ಬಾಕಿ ಪಾವತಿಯನ್ನು ಒಪ್ಪಿಕೊಳ್ಳುವುದು. |
| 3 | ಕರಾರು ಒಪ್ಪಂದವನ್ನು ಸಣ್ಣ ಹಾಗೂ ವಿವಿಧ ಭಾಗಗಳನ್ನಾಗಿಸುವುದು | • ಪಾವತಿ ಹರಿಯುವಿಕೆಯನ್ನು ತಡೆಯುವುದನ್ನು ಒಪ್ಪುವುದು. |
| 4 | ಮುಂಗಡ ಹಣವನ್ನು ನಿರೀಕ್ಷಿಸುವುದು | • “ನೀಡಿದಾಗ” ಸ್ವೀಕರಿಸುವ ಪ್ರವೃತ್ತಿಗೆ ಒಪ್ಪಿಗೆ |
| 5 | ಹಂತವಾಗಿ ಹಾಗೂ ಮುಖ್ಯಘಟ್ಟದಲ್ಲಿ ಪಾವತಿ ನಿರೀಕ್ಷಿಸುವುದು | • ಬಳಕೆದಾರರು ಬೇಕೆಂದಾಗ ಪಾವತಿಯನ್ನು ಒಪ್ಪಿಕೊಳ್ಳುವುದು. |
| 6 | ತಡವಾದ ಪಾವತಿಗೆ ಬಡ್ಡಿಯನ್ನು ಪಡೆಯುವ ಹಕ್ಕನ್ನು ಕಾಯ್ದಿರಿಸಿಕೊಳ್ಳುವುದು. | |
| 7 | ತಡವಾದ ಪಾವತಿಗೆ ಕೆಲಸವನ್ನು ನಿಲ್ಲಿಸುವ ಹಕ್ಕನ್ನು ಕಾಯ್ದರಿಸಿಕೊಳ್ಳುವುದು. | |
| 8 | ಪಾವತಿಗೆ ರಶೀತಿಯನ್ನು ಸಲ್ಲಿಸಲು ಕಾರ್ಯ ವಿಧಾನವನ್ನು ರೂಪಿಸುವುದು | |
| 9 | ಗರಿಷ್ಠ ಅವಧಿಯನ್ನು ಪಾವತಿಗೆ ಸ್ಪಷ್ಟವಾಗಿ ನಮೂದಿಸುವುದು. | |
| | **ಆ) ಸ್ಥಿತಿ : ಬಳಕೆದಾರ ಹಣ ನೀಡಲಾಗುತ್ತಿಲ್ಲ.** | |
| **ಸಂ.** | **ಮಾಡಬೇಕಾದ್ದುದು** | **ಮಾಡಬಾರದ್ದು** |
| 1 | ಬಳಕೆದಾರರ ಆರ್ಥಿಕ ಸ್ಥಿತಿಯನ್ನು ವಿಶ್ಲೇಷಿಸಿ | ಸಾಲ ಸಾರಾಗವಾಗಿ ಒಪ್ಪುವುದು. |
| 2 | ಬ್ಯಾಂಕ್, ಬಳಕೆದಾರರ ಮಾತೃ ಸಂಸ್ಥೆ ಅಥವಾ ಮೂರನೆಯ ವ್ಯಕ್ತಿಯಿಂದ ಗ್ಯಾರಂಟಿ ಬಾಂಡ್‌ಗಳನ್ನು ಪಡೆಯುವುದು. | |
| 3 | ನಿಗದಿತ ಆರ್ಥಿಕ ಸಂಘಟನೆಗಳಿಂದ ಖಾತರಿಯನ್ನು ಪಡೆಯುವುದು. | |

| | |
|---|---|
| 4 ಅಂತರಾಷ್ಟ್ರೀಯ ಮೌಲ್ಯದಲ್ಲಿ ಪಾವತಿ ನಿರೀಕ್ಷೆ | |
| **ಇ) ಸ್ಥಿತಿ : ಸರಬರಾಜು ಮಾಡುವವ ವ್ಯಾಪಾರದಲ್ಲಿ ದೂಳಿಪಟ**<br>**ಮಾಡಬೇಕಾದ್ದುದು** | **ಮಾಡಬಾರದ್ದು** |
| 1 ಸರಬರಾಜು ಸಂಸ್ಥೆಯ ಆರ್ಥಿಕ ಆರೋಗ್ಯದ ಪೂರ್ವಖಾತರಿ<br>2 ಮಾತೃಸಂಸ್ಥೆಯ ಲಿಖಿತ ಆರ್ಥಿಕ ಜವಾಬ್ದಾರಿ ಹೂಡುವ ಕರಾರು ಒಪ್ಪಂದ<br>3 ಬ್ಯಾಂಕ್ ಅಥವಾ ಇನ್ನಿತರ ಮೂರನೇ ವ್ಯಕ್ತಿಯ ಗ್ಯಾರಂಟಿಯನ್ನು ಪಡೆಯುವುದು.<br>4 ವಸ್ತು ಮತ್ತು ಸಾಮಗ್ರಿಗಳ ಒಡೆತನದ ಬಗ್ಗೆ ಸ್ಪಷ್ಟತೆ<br>5 ಆರ್ಥಿಕ ದೂಳಿಪಟವಾದಾಗ ಅಥವಾ ನಷ್ಟ ಉಂಟಾದಾಗ ಒಡೆತನವನ್ನು ಹಸ್ತಾಂತರಗೊಳಿಸುವ ಬಗ್ಗೆ ಸ್ಪಷ್ಟತೆ<br>6 ಗೌಪ್ಯವಾಗಿ ಒಪ್ಪಂದವನ್ನು ಸರಬರಾಜುಗಾರ ಮೊದಲನೇ ವ್ಯಕ್ತಿಯೊಂದಿಗೆ ಮಾಡಿಕೊಳ್ಳಲು ಅವಕಾಶ | ಸಮಸ್ಯೆ ಪರಿಹಾರವಾಗುವ ಆಶ್ವಾಸನೆಗೆ ಮರುಳಾಗುವುದು. |
| **ಈ) ಸ್ಥಿತಿ : ತಾಂತ್ರಿಕ ಮಾಹಿತಿಗಳ ಹಸ್ತಾಂತರ**<br>**ಮಾಡಬೇಕಾದ್ದುದು**<br>1 ಬೌದ್ಧಿಕ ಆಸ್ತಿ ಹಕ್ಕು ಹಸ್ತಾಂತರಕ್ಕೆ ಅವಕಾಶ ನೀಡಬಾರದು<br>2 ಭವಿಷ್ಯದ ದೃಷ್ಟಿಯಿಂದ ಪರಿಸ್ಥಿತಿಯನ್ನು ನಿಭಾಯಿಸಲು ಚಿಂತನೆ.<br>3 ಕಾರ್ಯಸಾದುವಾದ ಕ್ಷೇತ್ರದಲ್ಲಿ ಮಾತ್ರ ಹಕ್ಕುಗಳನ್ನು ನೀಡುವುದು<br>4 ನೀಡಬೇಕಾದ ಮಾಹಿತಿಗೆ ಮಿತಿ<br>5 ಕಾರ್ಯಕ್ಷೇತ್ರಕ್ಕೆ ಮಾತ್ರ ಮಾಹಿತಿ ಮಿತಿ<br>6 ತಾತ್ವಿಕವಾಗಿ ಒಪ್ಪಿಗೆ, ವಿವರಗಳನ್ನು ಸೂಕ್ತ ಪರಿಸ್ಥಿತಿಗೆ ಅನ್ವಯವಾಗುವಂತೆ ನೀಡುವುದು. | **ಮಾಡಬಾರದ್ದು**<br>ಬಳಕೆದಾರರ ಎಲ್ಲಾ ಬೌದ್ಧಿಕ ಆಸ್ತಿಹಕ್ಕಿಗೆ ಪಾವತಿಸಿದ್ದಾನೆಂದು ತಿಳುವಳಿಕೆ ಬೌದ್ಧಿಕ ಆಸ್ತಿಯ ಪ್ರಯೋಜನ ಪಡೆಯುವ ಉತ್ಸುಕತೆ |

| | | |
|---|---|---|
| 7 | ಮಾಹಿತಿ ನೀಡುವ ಪ್ರಕ್ರಿಯೆ ಈ ಕೆಳಕಂಡ ಕ್ರಮದಲ್ಲಿರಲಿ<br>1) ಬಳಕೆ<br>2) ಬಳಕೆ ಮತ್ತು ಪ್ರತಿ<br>3) ಬಳಕೆ, ಪ್ರತಿ ಮತ್ತು ಮಾರ್ಪಾಡು | |
| 8 | ಬಳಕೆದಾರರಿಗೆ ಮಾತ್ರ ಹಕ್ಕಿನ ಮಿತಿ | |
| 9 | ಗೌಪ್ಯತೆಯ ಬಗ್ಗೆ ಸ್ಪಷ್ಟ ಆದೇಶ | |

**(ಮೂಲಆಧಾರ : ಪ್ರೊ ॥ ಎಸ್. ಕೃಷ್ಣಮೂರ್ತಿ, IIM (B))**

## 5.5. ನಿದರ್ಶನಗಳು ಮತ್ತು ಅಭ್ಯಾಸಗಳು

### 5.5.1. ಸಾರ್ವಜನಿಕ ಖಾಸಗಿ ಸಹಭಾಗಿತ್ವ-ನೀರು ಸರಬರಾಜು ಮತ್ತು ಕೊಳಚೆ ನಿರ್ವಹಣೆ "ಸಾಲ್ಟ್‌ಲೇಕ್" ಕೊಲ್ಕತ್ತಾ

ಕೊಲ್ಕತ್ತಾ ಬೃಹತ್ ನಗರ ಪಾಲಿಕೆ ಅಭಿವೃದ್ಧಿ ಮಂಡಳಿ (ಕೆ.ಎಂ.ಡಿ.ಎ.) ಯು 1990 ರಲ್ಲಿ 430 ಎಕರೆ ಭೂಪ್ರದೇಶವುಳ್ಳ ಸಾಲ್ಟಲೇಕ್ ವಲಯ 5ನ್ನು ಕೈಗಾರಿಕಾಭಿವೃದ್ಧಿ ದೃಷ್ಟಿಯಿಂದ ಪ್ರಾರಂಭಿಸಿತು. 60,000 ಕ್ಕೂ ಹೆಚ್ಚು ಕಾರ್ಮಿಕರನ್ನೊಳಗೊಂಡು 650 ಕ್ಕೂ ಹೆಚ್ಚು ಕೈಗಾರಿಕೆಗಳನ್ನೊಳಗೊಂಡ ಈ ಪ್ರದೇಶ ಮಾಹಿತಿ ವಿಜ್ಞಾನದ ದಿಗ್ಗಜರಾದ ಇನ್ಫೋಸಿಸ್ ಹಾಗೂ ವಿಪ್ರೋವನ್ನು ಆಕರ್ಷಿಸಿತು. ನಗರಾಭಿವೃದ್ಧಿ ಇಲಾಖೆಯು 2006 ರಲ್ಲಿ ಈ ವಲಯದ ನಿರ್ವಹಣೆಯನ್ನು ಕೆ.ಎಂ.ಡಿ.ಎ. ಯಿಂದ ನಗರ ಕೈಗಾರಿಕಾಭಿವೃದ್ಧಿ ಮಂಡಳಿಗೆ ವರ್ಗಾಯಿಸಿದ್ದು, ಕೆ.ಎಂ.ಡಿ.ಎ. ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದೆ.



ವಲಯದ ಕೈಗಾರಿಕಾಭಿವೃದ್ಧಿಗೆ ಅಗತ್ಯವಿದ್ದ ಮೂಲ ಸೌಕರ್ಯಗಳಾದ, ಸಾರಿಗೆ, ವಿದ್ಯುತ್ ಒದಗಿಸಿದ್ದಾಗ್ಯೂ ನೀರು ಮತ್ತು ಕೊಳಚೆ ನಿರ್ವಹಣೆ ಅಸಮರ್ಪಕವಾಗಿದ್ದಿತು. ಕೈಗಾರಿಕೆಗಳು ಕೊಳವೆ ಬಾವಿಗಳು ಹಾಗೂ ಸಂಗ್ರಹಣೆ ತೊಟ್ಟಿಗಳ ಮೂಲಕ ನೀರು ಪಡೆಯುತ್ತಿದ್ದುದರಿಂದ ಅಂತರ್ಜಲದ ಶೋಷಣೆಯಾಗಿ, ಸರ್ಕಾರ ಕಾಯ್ದೆ ಜಾರಿ ಮಾಡುವುದು ಅನಿವಾರ್ಯವಾಯಿತು. ಅಂತರ್ಜಲ ಶೋಷಣೆ ನಿಷೇಧ ಕಾಯ್ದೆಯು ವಲಯ-5 ಕ್ಕೆ ವಿಶೇಷ ವಿನಾಯಿತಿ ನೀಡಬೇಕಾಯಿತು.

ಮೇಲ್ಕಂಡ ಸಮಸ್ಯೆಗಳಿಂದ ಹೊರಬರಲು ಕೆ.ಎಂ.ಡಿ.ಎ. ಸಮಗ್ರ ನೀರು ಮತ್ತು ಕೊಳಚೆ ನಿರ್ವಹಣೆ ಮತ್ತು ಪೂರೈಕೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ.) ವಿಶೇಷ ಯೋಜನೆಯ ಮೂಲಕ ನಿರ್ವಹಿಸಲು ತೀರ್ಮಾನಿಸಿತು.

ಕೆ.ಎಂ.ಡಿ.ಎ.ಯು ಬಿ.ಒ.ಟಿ-ರಚನೆ-ನಿರ್ವಹಣೆ-ವರ್ಗಾವಣೆ ಮಾದರಿಯಲ್ಲಿ ನೀರು ಪೂರೈಕೆ ಮತ್ತು ನೈರ್ಮಲ್ಯ ನಿರ್ವಹಣೆಯನ್ನು 30 ವರ್ಷಗಳವರೆಗೆ ಖಾಸಗಿಯವರಿಗೆ ವರ್ಗಾಯಿಸಲು ತೀರ್ಮಾನಿಸಿತು. ಈ ಅವಧಿಯಲ್ಲಿ ಭೌತಿಕ ರಚನಾ ವೆಚ್ಚವನ್ನು ನಲ್ಲಿಗಳ ಸಂಪರ್ಕ ಶುಲ್ಕ ಹಾಗೂ ಬಳಕೆದಾರರ ಶುಲ್ಕದ ಮೂಲಕ ಹಿಂಪಡೆಯಬೇಕಾಗಿದ್ದು, ಅನಿವಾರ್ಯ ಸಂದರ್ಭದಲ್ಲಿ ಸರ್ಕಾರ ಮೂಲಧನ ಹಾಗೂ ಇತರೆ ಸಹಕಾರ ನೀಡಲು ಸಮ್ಮತಿಸಿತು. ಪಿ.ಪಿ.ಪಿ. ಪರಿಕಲ್ಪನೆಯ ರಚನೆಯಾದ ನಂತರ ಜುಸ್ಕೋ ಮತ್ತು ವೋಲ್ಟಾಸ್‌ನ್ನು ಬಿ.ಒ.ಟಿ.ಮಾದರಿಯಲ್ಲಿ 30 ವರ್ಷಗಳ ಅವಧಿಗೆ ಬಿಡ್ಡಿಂಗ್ ಮೂಲಕ ಆಯ್ಕೆ ಮಾಡಲಾಯಿತು.

**2. ಯೋಜನಾ ಸಹಭಾಗಿಗಳು :**

ಒಪ್ಪಂದವು ಪ್ರಾಥಮಿಕವಾಗಿ ಕೆ.ಎಂ.ಡಿ.ಎ., ಎನ್.ಡಿ.ಐ.ಟಿ.ಡಿ.ಎ. ಜುಸ್ಕೋ ಮತ್ತು ವೋಲ್ಟಾಸ್

ನಡುವೆ ಏರ್ಪಟ್ಟಿತು, ಯು.ಡಿ.ಡಿ.ಯು ಪ್ರಮುಖ ಸಹಭಾಗಿಯಾಗಿದ್ದು, ಈ ಪ್ರಕ್ರಿಯೆಗೆ ನಗರಾಭಿವೃದ್ಧಿ ಇಲಾಖೆಯು ಅನುಮೋದನೆ ನೀಡಿತು. ನಿರ್ವಾಹಕರನ್ನು ಬಿಡ್ಡಿಂಗ್ ಮೂಲಕ ಆಯ್ಕೆ ಮಾಡುವ ಜವಾಬ್ದಾರಿಯನ್ನು ಕೆ.ಎಂ.ಡಿ.ಎ. ಯೋಜನೆಯ ಅನುಷ್ಠಾನದಲ್ಲಿ ಕೆ.ಎಂ.ಡಿ.ಎ. ಹಾಗೂ ಎನ್.ಡಿ.ಐ.ಟಿ.ಡಿ.ಎ. ಗಳೆರಡನ್ನು ಹೊಣೆಗಾರರನ್ನಾಗಿಸಿತು. ಜುಸ್ಕೋ ಮತ್ತು ವೋಲ್ಟಾಸ್ ಒಕ್ಕೂಟವು ಯೋಜನೆಯ ನಿರ್ವಹಣೆಗಾಗಿ ನಬ–ದಿಗಂತ ನೀರು ನಿರ್ವಹಣಾ ಮಂಡಳಿಯೆಂಬ ವಿಶೇಷ ಉದ್ದೇಶದ ಘಟಕವನ್ನು ರಚಿಸಿ ಗ್ರಾಹಕರಿಗೆ ನೀರಿನ ಪೂರೈಕೆ ಹಾಗೂ ಕೊಳಚೆ ನಿರ್ವಹಣೆಯ ಜವಾಬ್ದಾರಿಯನ್ನು ವರ್ಗಾಯಿಸಿತು.

**3. ಬಿಡ್ಡಿಂಗ್ ಮತ್ತು ಟೆಂಡರಿಂಗ್ ಪ್ರಕ್ರಿಯೆ :**

ಕೆ.ಎಂ.ಡಿ.ಎ.ಯು ಬಿಡ್ಡಿಂಗ್‌ನ ರೂಪು–ರೇಷೆಗಳ ಸಾಮಾನ್ಯ ಮಾಹಿತಿಯು ಘಟಕ–1 ರಲ್ಲೂ ತಾಂತ್ರಿಕ ಪ್ರಾವಿಣ್ಯತೆಯ ಅಗತ್ಯತೆಯನ್ನು ಘಟಕ–2 ರಲ್ಲಿ ವಿವರಿಸಿತು. ಟೆಂಡರ್ ಪ್ರಕಟಣೆಯು 3 ಜುಲೈ 2006 ರಲ್ಲಿ ಹೊರಬಿದ್ದು, ಬಿಡ್ಡಿಂಗ್ ಪೂರ್ವ ಸಭೆಯು 24 ಜುಲೈ 2006 ರಲ್ಲಿ ನಡೆದು, ಸೆಪ್ಟಂಬರ್ 2006 ರಲ್ಲಿ ಟೆಂಡರ್ ಅಂಗೀಕಾರವಾಯಿತು. ಒಪ್ಪಂದದ ಮಾದರಿಯು ನಿರ್ವಾಹಕರ ಆಯ್ಕೆಯ ನಂತರ ರಚನೆಯಾಯಿತು.

ಬಿಡ್ಡಿಂಗ್ ಮೂರು ಹಂತಗಳಲ್ಲಿ ಏರ್ಪಟ್ಟು ಮೊದಲನೆಯ ಹಂತದಲ್ಲಿ ಅರ್ಹತೆಯಾಗಿ ಕ್ಷೇತ್ರದಲ್ಲಿ 5 ವರ್ಷಗಳ ಅನುಭವವನ್ನು 2ನೇ ಹಂತದಲ್ಲಿ ಸಂಸ್ಥೆಯ ತಾಂತ್ರಿಕ ಪ್ರಾವಿಣ್ಯತೆಯನ್ನು 3ನೇ ಹಂತದಲ್ಲಿ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಠ ರೂ. 10 ಕೋಟಿ ಮೌಲ್ಯದ ರಚನೆಯನ್ನು ಹೊಂದಿರುವ ಹಾಗೂ ಪ್ರಸ್ತುತ ರೂ. 50 ಕೋಟಿ ನಗದು ಹೊಂದಿರುವ ಹಣಕಾಸಿನ ಸ್ಥಿತಿಗತಿಯನ್ನು ಪರಿಶೀಲಿಸಲಾಯಿತು. ಶೇ. 60 ಕ್ಕಿಂತಲೂ ಹೆಚ್ಚು ಅಂಕ ಪಡೆದವರನ್ನು ಎರಡನೇ ಹಂತಕ್ಕೆ ಆಯ್ಕೆ ಮಾಡಲಾಯಿತು. ಭಾಗವಹಿಸಿದ್ದ 4 ಸಂಸ್ಥೆಗಳಲ್ಲಿ ಜುಸ್ಕೋ ಮತ್ತು ಓಲ್ಟಾಸ್‌ನ ವಿಶೇಷ ಉದ್ದೇಶಿತ ಘಟಕ ಎಲ್ಲಾ ಅಗತ್ಯಗಳನ್ನು ಪೂರೈಸಿ, ನವೆಂಬರ್ 2006 ರಲ್ಲಿ ನಿರ್ವಾಹಕರಾಗಿ ಆಯ್ಕೆಯಾಯಿತು. ಹಣಕಾಸಿನ ಪಾಲುದಾರಿಕೆಯಲ್ಲಿನ ಬದಲಾವಣೆ, ಶುಲ್ಕದಲ್ಲಿನ ರಿಯಾಯಿತಿ ಹಾಗೂ ಯೋಜನೆಯ ಕೆಲವೊಂದು ಬದಲಾವಣೆಯಿಂದಾಗಿ ಒಪ್ಪಂದವು ಒಂದು ವರ್ಷ ತಡವಾಗಿ ನವೆಂಬರ್ 2007 ರಲ್ಲಿ ಉಭಯ ಪಕ್ಷಗಳಿಂದಲು ಸಹಿ ಮಾಡಲ್ಪಟ್ಟಿತು.

**4. ಅಭಿವೃದ್ಧಿ ಒಪ್ಪಂದ :**

ಭೂಗರ್ಭದಿಂದ ನೀರಿನ ಸಂಗ್ರಹಣ ಘಟಕದ ರಚನೆಯ ಅಗತ್ಯತೆಯು ಒಪ್ಪಂದವೇರ್ಪಟ್ಟ ನಂತರ ಉದ್ಭವಿಸಿತು, ಜೊತೆಗೆ ಬಳಕೆದಾರರ ಶುಲ್ಕವಾಗಿ ಪ್ರತಿ ಸಾವಿರ ಲೀಟರ್ ನೀರಿಗೆ ರೂ. 48 ಗಳನ್ನು ನಿಗದಿಮಾಡಲು ಖಾಸಗಿಯವರು ನಿರ್ಧರಿಸಿದರು. ಸರ್ಕಾರದ ಸಾಂದರ್ಭಿಕ ಚೌಕಾಸಿ ನೀತಿಯಿಂದಾಗಿ ಭೂಗರ್ಭದಲ್ಲಿ ನೀರಿನ ಸಂಗ್ರಹಣಾ ಘಟಕ ಹಾಗೂ ಪ್ರತಿ ಸಾವಿರ ಲೀಟರ್ ನೀರಿಗೆ ರೂ. 25/– ರಂತೆ ಶುಲ್ಕ ವಿಧಿಸಲು ಖಾಸಗಿಯವರು ಸಮ್ಮತಿಸಿದರು. ಇದಕ್ಕೆ ಪರ್ಯಾಯವಾಗಿ JNNURM ಯೋಜನೆಯಡಿ ಒಟ್ಟು ಯೋಜನೆಯ ಶೇ. 35 ರಷ್ಟು ಹಣವನ್ನು ತುಂಬಿಕೊಡಲು ಒಪ್ಪಿತು.

**5. ಕಾರ್ಯವ್ಯಾಪ್ತಿ :**

ಯೋಜನೆಯ ಚಟುವಟಿಕಗಳು – ನೀರಿನ ನಿರ್ವಹಣೆ ಮತ್ತು ಪೂರೈಕೆ ಹಾಗೂ ಕೊಳಚೆ ನಿರ್ವಹಣೆಯನ್ನೊಳಗೊಂಡಿದೆ.

- ➢ ನೀರಿನ ನಿರ್ವಹಣೆ & ಪೂರೈಕೆ
- ➢ ಭೂಗರ್ಭದಲ್ಲಿ ನೀರಿನ ಸಂಗ್ರಹಣಾಗಾರದ ರಚನೆ.
- ➢ ಪಂಪಿಂಗ್ ಹೌಸ್ ರಚನೆ.
- ➢ ಒತ್ತಡದಿಂದ ಹರಿವ ನೀರಿನ ಕೊಳಾಯಿ – 3.5 ಕಿ.ಮೀ.
- ➢ ಸಂಗ್ರಹಿಸಿದ ನೀರಿನ ನಿರ್ವಹಣೆ.
- ➢ ವಿತರಣಾ ಜಾಲ – 19.5 ಕಿ.ಮೀ.

**ಕೊಳಚೆ ನೀರಿನ ನಿರ್ವಹಣೆ :**

- ಕೊಳಚೆ ನೀರಿನ ಸಂಗ್ರಹಣೆ
- ಕೊಳಚೆ ನೀರಿನ ಕೊಳಾಯಿಗಳ ಸಂಪರ್ಕ ಮತ್ತು ಮ್ಯಾನ್‌ಹೋಲ್‌ಗಳು.
- ಮಾಧ್ಯಮಿಕ ಪಂಪಿಂಗ್ ಕೇಂದ್ರ – ಒಂದು
- ಕೊಳಚೆ ನೀರಿನ ಚಿಕಿತ್ಸಾ ಘಟಕ – ಒಂದು

**6 ಹಣಕಾಸು :**

ಯೋಜನೆಯ ಒಟ್ಟು ವೆಚ್ಚ ರೂ. 60 ಕೋಟಿಗಳಿದ್ದು, ನೀರಿನ ನಿರ್ವಹಣೆಗೆ ರೂ. 26 ಕೋಟಿ ಹಾಗೂ ಕೊಳಚೆ ನೀರಿನ ನಿರ್ವಹಣೆಗೆ ರೂ. 34 ಕೋಟಿಗಳಾಗಿದ್ದು, ಸರ್ಕಾರವು JnNURM ನಡಿ ರೂ. 21 ಕೋಟಿಯನ್ನು ನೀಡಿದ್ದು, ಸಗಟು ನೀರಿಗೆ ರೂ. 15ರ ಬದಲಾಗಿ ರೂ. 5 ರಂತೆ ಪೂರೈಸಲು ಒಪ್ಪಿದೆ. ಜೊತೆಗೆ ಸ್ಥಾಪನೆಗೆ ಅಗತ್ಯವಿರುವಷ್ಟು ಭೂಮಿಯನ್ನು ಉಚಿತವಾಗಿ ಒದಗಿಸಿದೆ. ಖಾಸಗಿಯವರು ಅಗತ್ಯವಿರುವ ಭೌತಿಕ ರಚನೆಯನ್ನು ನಿರ್ಮಿಸಿ, 30 ವರ್ಷಗಳು ನಿರ್ವಹಿಸುವ ಅವಧಿಯಲ್ಲಿ ತಮ್ಮ ಮೂಲ ಬಂಡವಾಳವಾದ ರೂ. 39 ಕೋಟಿಯನ್ನು ಬಳಕೆದಾರರ ಶುಲ್ಕ ಹಾಗೂ ಹೊಸ ಸಂಪರ್ಕ ಶುಲ್ಕದ ಮೂಲಕ ಹಿಂಪಡೆಯಬಹುದು.

**7. ಬಳಕೆದಾರರ ಶುಲ್ಕ :**

ಒಪ್ಪಂದದಂತೆ ಗ್ರಾಹಕರಿಗೆ ಪ್ರತಿ ಸಾವಿರ ಲೀಟರ್ ನೀರಿಗೆ ರೂ. 25 ರಂತೆ ಹೊಸ ಸಂಪರ್ಕಗಳಿಗೆ ಪ್ರತಿ ಚದರಡಿಗೆ ರೂ. 10 ರಂತೆ ಶುಲ್ಕ ನಿಗದಿಯಾಗಿದೆ. ವಿದ್ಯುಚ್ಛಕ್ತಿಯ ದರದಲ್ಲಿನ ಹೆಚ್ಚಳ, ಇತರೇ ಸಂದರ್ಭಗಳಲ್ಲಿ ಮತ್ತು ಪ್ರತೀ ವರ್ಷ ಶೇ. 3ರ ದರದಲ್ಲಿ ಶುಲ್ಕವನ್ನು ಪರಿಷ್ಕರಿಸಬಹುದಾಗಿದೆ.

**8. ಯೋಜನೆಯನ್ನು ಜಾರಿಗೊಳಿಸುವ ವಿಧಾನ :**

ಸರ್ಕಾರವು ತನ್ನ ಪಾಲಿನ ಹಣ ಹಾಗೂ ಭೂಮಿಯನ್ನು ಪೂರೈಸಿದ ನಂತರ 18 ತಿಂಗಳಲ್ಲಿ ಅಂದರೆ ಮೇ 2009 ರೊಳಗೆ ಯೋಜನೆ ಪೂರ್ಣಗೊಳ್ಳುವ ಗುರಿ ಹೊಂದಲಾಗಿತ್ತು.

ಸಕಾಲಿಕ ನೆರವಿನ ಅಭಾವದಿಂದಾಗಿ ಯೋಜನೆಯು 2011ಕ್ಕೆ ಮುಕ್ತಾಯವಾಗುವ ಸಂಭವವಿದ್ದು, ಖಾಸಗಿಯವರ ಶೀಘ್ರಗತಿಯ ಕೆಲಸದಿಂದಾಗಿ ಮಾರ್ಚ್ 2010ಕ್ಕೆ ಯೋಜನೆ ಪೂರ್ಣಗೊಳ್ಳುವ ಸಂಭವವಿದೆ. ನೀರು ಮತ್ತು ಕೊಳಚೆ ನೀರಿನ ನಿರ್ವಹಣೆ ಮತ್ತು ಪೂರೈಕೆಗೆ ಸಂಬಂಧಿಸಿದಂತೆ ಸ್ಥಳೀಯ ಆಡಳಿತ ಕೈಗಾರಿಕೆಗಳೊಂದಿಗೆ ಖಾಸಗಿಯವರು ಗುಂಪು ಒಪ್ಪಂದ ಮಾಡಿಕೊಳ್ಳ ಬಯಸುತ್ತಿದ್ದಾರೆ.

ಕೈಗಾರಿಕೆಗಳಿಗೆ 24/7 ಮಾದರಿಯಲ್ಲಿ ನೀರನ್ನು ಪೂರೈಸಲು ಕೆ.ಎಂ.ಸಿ.ಯಿಂದ ಪಡೆದ ನೀರನ್ನು ಭೂಗರ್ಭದಿಂದ ಪ್ರತಿದಿನ/ಹತ್ತುಲಕ್ಷ ಗ್ಯಾಲನ್ ಸಾಮರ್ಥ್ಯದ ಘಟಕದಲ್ಲಿ ಸಂಗ್ರಹಿಸಿ ಪಂಪಿಂಗ್ ಮೂಲಕ ಪೂರೈಸುತ್ತದೆ. ಕೈಗಾರಿಕೆಗಳ ಕೊಳಚೆ ನೀರನ್ನು ಮ್ಯಾನ್‌ಹೋಲ್ ಮತ್ತು ತಪಾಸಣಾ ರಂಧ್ರಗಳಿರುವ ಕಾಲುವೆಯ ಮೂಲಕ ಮುಖ್ಯ ಕಾಲುವೆಗೆ ತಂದು ಅಲ್ಲಿಂದ ಕೊಳಚೆ ನೀರಿನ ಚಿಕಿತ್ಸಾ ಘಟಕಕ್ಕೆ ವರ್ಗಾಯಿಸಿ ಶುದ್ಧೀಕರಿಸಿದ ನೀರನ್ನು ಪಕ್ಕದ ಕೆರೆಗೆ ಪೂರೈಸುವ ಯೋಜನೆ ಹೊಂದಿದೆ. ಯೋಜನೆಯು ಶೇ.100 ರಷ್ಟು ಕೊಳಚೆ ನೀರಿನ ಶುದ್ಧೀಕರಣಕ್ಕೆ ತೊಡಗಿದ್ದು, ಭೌತಿಕ ರಚನೆಯು ನವೆಂಬರ್ 2009 ವೇಳೆಗೆ ಶೇ. 60 ರಷ್ಟು ನೀರಿನ ಪೂರೈಕೆಯು ಶೇ. 80 ರಷ್ಟು ಮುಗಿದಿದ್ದು 2010 ಮಾರ್ಚ್ ವೇಳೆಗೆ ಯೋಚನೆಯ ರಚನಾಕಾರ್ಯ ಮುಕ್ತಾಯವಾಗುವ ಲಕ್ಷಣಗಳಿದ್ದವು.

**9. ಸಂಕಷ್ಟ ಮತ್ತು ಅಡೆ-ತಡೆಗಳು :**

- ಪ್ರಾರಂಭದಲ್ಲಿ ಸರ್ಕಾರವು ಆರ್ಥಿಕ ಹೊರೆ ಹಾಗೂ ಬಳಕೆದಾರರ ಶುಲ್ಕ ಸಂಗ್ರಹಣೆ ಜವಾಬ್ದಾರಿಯನ್ನು ಖಾಸಗಿಯವರಿಗೆ ವರ್ಗಾಯಿಸಿತು. ನಂತರ ತನ್ನ ಸಹಭಾಗಿತ್ವದ ಅಗತ್ಯ ಮನವರಿಕೆಯಾಗಿ, ನೀರು, ನೆಲ ಮತ್ತು ಹಣಕಾಸಿನ ಪೂರೈಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಿತು.
- ಸರ್ಕಾರವು ಯೋಜನೆಯು ಪ್ರಾರಂಭವಾದ ನಂತರ ಕೈಗಾರಿಕೆಗಳ ವೈಯಕ್ತಿಕ ಮೂಲಗಳನ್ನು ನಿಷ್ಕ್ರಿಯಗೊಳಿಸಲು ಚಿಂತಿಸಿತು. ಆ ಸಂದರ್ಭದಲ್ಲಿ ಎದುರಾಗುವ ಕೈಗಾರಿಕೆಗಳ ಮುಚ್ಚುವಿಕೆ, ರೋಗಗ್ರಸ್ಥ ಸ್ಥಿತಿಗಳಲ್ಲಿ ಹಾಗೂ ಹೊಸ ಕೈಗಾರಿಕೆಗಳ ರಚನೆಗೆ ಸಂಬಂಧಿಸಿದಂತೆ, ಮೂರು ಸಂಸ್ಥೆಗಳ ಒಪ್ಪಂದದಲ್ಲಿ ಸರ್ಕಾರ ಅಗತ್ಯವಿದ್ದಲ್ಲಿ ನೆರವು ನೀಡುವುದು.
- ಸರ್ಕಾರವು ಹಣ ಮತ್ತು ನೆಲ ದೊರಕಿಸಿಕೊಡುವಲ್ಲಿ ವಿಳಂಬವಾಯಿತು.
- ನೀರಿನ ಪೂರೈಕೆಯ ಮಾರ್ಗಗಳನ್ನು ನವೀಕರಿಸಲು ಹೌಸಿಂಗ್ ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಯಿಂದ ಅನುಮತಿ ಪಡೆಯುವಲ್ಲಿ ವಿಳಂಬ.
- ಸರ್ಕಾರವು ಕೇವಲ ಪ್ರತಿನಿತ್ಯ 10 ಲಕ್ಷ ಗ್ಯಾಲನ್ ನೀರನ್ನು ಪೂರೈಸಲು ಒಪ್ಪಿಕೊಂಡಿದ್ದು, ಬೆಳೆಯುತ್ತಿರುವ ಜನಸಂಖ್ಯೆಗೆ ಭವಿಷ್ಯದಲ್ಲಿ ಪ್ರತಿನಿತ್ಯ 30 ಲಕ್ಷ ಗ್ಯಾಲನ್ ನೀರಿನ ಅಗತ್ಯವಿದ್ದು, ಖಾಸಗಿಯವರಿಗೆ ಸಮಸ್ಯೆಯಾಗಿದೆ.
- 24 ಗಂಟೆಗಳು ನೀರನ್ನು ಪೂರೈಸಲು ಕನಿಷ್ಟ 3 ಕಡೆ ನಿರ್ವಹಣಾ ಘಟಕಗಳನ್ನು

ತೆರೆಯಬೇಕಿದ್ದು, ಸರ್ಕಾರ ಕೇವಲ ಒಂದೆಡೆ ಭೂಮಿ ನೀಡಿದೆ.

ಈ ಎಲ್ಲಾ ಸಂಕಷ್ಟಗಳ ಹೊರತಾಗಿಯು ಖಾಸಗಿಯವರು ತಮ್ಮ ಹಿಂದಿನ ಅನುಭವದ ಮೂಲಕ ಯೋಜನೆಯನ್ನು ಮಾರ್ಚ್ 2010 ರೊಳಗೆ ಪೂರ್ಣಗೊಳಿಸಲು ನಿರ್ಧರಿಸಿದರು.

**11. ಮಾದರಿಯ ಅನುಕರಣೆಗಾಗಿ ಕಲಿತ ಪಾಠಗಳು :**

- ಯೋಜನೆಗಳು ಪಿ.ಪಿ.ಪಿ. ಮಾದರಿಯಲ್ಲಿ ಫಲಕಾರಿಯಾಗಬಹುದೆಂಬುದನ್ನು ಅನುಷ್ಠಾನ ಮಾಡಿ ತೋರಿಸಲಾಗಿದೆ.
- JnNURM ಹಣವನ್ನು ಬಳಸಿಕೊಂಡು ಯೋಜನೆಯು ಆರ್ಥಿಕವಾಗಿ ಸಧೃಡವಾಗುವಲ್ಲಿ ಸಹಕಾರಿಯಾಗಿದೆ.
- ಮೂಲ ಬಂಡವಾಳವನ್ನು ಹಿಂಪಡೆಯಲು ಬಳಕೆದಾರರಿಂದ ಯೋಗ್ಯ ಶುಲ್ಕ ಸಂಗ್ರಹಿಸಲು ನಿರ್ದೇಶಿಸಿದೆ.
- ಪ್ರಾರಂಭದಲ್ಲಿಯೇ ಯೋಜನೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಗುರುತಿಸಲು ಯತ್ನಿಸಬೇಕು ಹಾಗೂ ಮಧ್ಯಂತರದಲ್ಲಿ ಕೆಲವೊಂದು ಬದಲಾವಣೆಗೆ ತೆರೆದುಕೊಂಡಿರುವುದು.
- ಮುಖ್ಯವಾಗಿ ಯೋಜನೆಯ ಯಶಸ್ಸು – ಇತರೆ ಇಲಾಖೆಗಳ ಸಹಕಾರ ಹಾಗೂ ಸಾರ್ವಜನಿಕ ಮತ್ತು ಖಾಸಗಿಯವರ ಸಾಮರ್ಥ್ಯ ಮತ್ತು ಬದ್ಧತೆಯನ್ನವಲಂಭಿಸಿದೆ.

**ಪ್ರಶ್ನೆಗಳು :**

1. 'ಸಾಖಾಸ–ಹೊ&ಅ' ವಿಧಾನವನ್ನು ಅನುಸರಿಸಲು ಸ್ಥಳೀಯ ಸಂಸ್ಥೆಯ ಹಿನ್ನಲೆ ಏನಾಗಿತ್ತು?
2. ಯಾವ ಕಾರಣಕ್ಕಾಗಿ 'BOT' ಮಾದರಿಯನ್ನು ಆಯ್ಕೆ ಮಾಡಲಾಯಿತು?
3. ಬಿಡ್ಡಿಂಗ್ ನಡೆದ ಮೂರು ಹಂತಗಳು ಯಾವುವು?
4. ಅಭಿವೃದ್ಧಿಯ ಒಪ್ಪಂದದ ಮುಖ್ಯ ಅಂಶಗಳಾವುವು?
5. ಯಾವ ಕಾರ್ಯವ್ಯಾಪ್ತಿಗಳನ್ನು ಒಳಗೊಂಡಿದ್ದ ಯೋಜನೆ?
6. ಹಣಕಾಸಿನ ನಿರ್ವಹಣೆಯ ಮುಖ್ಯ ಅಂಶಗಳಾವುವು?
7. ಯೋಜನೆಯನ್ನು ಜಾರಿಗೊಳಿಸುವ ವಿಧಾನಗಳಾವುವು?
8. 'ಸಾಖಾಸ–ಹೊಅನು' ಮಾರ್ಗೋಪಾಯದಲ್ಲಿ ಅನುಭವಿಸಿದ ಸಂಕಷ್ಟ ಮತ್ತು ಅಡೆ-ತಡೆಗಳಾವುವು?
9. ಯೋಜನೆಯ ಫಲಶೃತಿ ಮತ್ತು ಪರಿಣಾಮಗಳಾವುವು?
10. ಮಾದರಿಯ ಪುನರ್ಬಳಕೆಗೆ ಕಲಿತ ಪಾಠಗಳಾವುವು?

## 5.5.2 ಸಾರ್ವಜನಿಕ ಖಾಸಗಿ ಸಹಭಾಗಿತ್ವ – ಲಾತೂರ್ ನಗರದ ನೀರಿನ ಸಮಗ್ರ ನಿರ್ವಹಣೆ

**ಪರಿಚಯ :**

ಲಾತೂರ್ ನಾಗರೀಕರ ದೈನಂದಿನ ಜೀವನ ನಿರ್ವಹಣೆಯನ್ನು ದುಸ್ಥರವಾಗಿಸಿದ್ದ ನೀರಿನ ಸಮಸ್ಯೆಯನ್ನು ನಿವಾರಿಸಲು ಜೂನ್ 2006 ರಲ್ಲಿ ಮಹಾರಾಷ್ಟ್ರ ಜೀವನ ಪ್ರಾಧಿಕಾರವು (ಎಂ.ಜೆ.ಪಿ.) ಲಾತೂರ್ ಮುನಿಸಿಪಲ್ ಕಾರ್ಪೋರೇಷನ್ (ಎಲ್.ಎಂ.ಸಿ.) ಜೊತೆಗೂಡಿ ಚಾಲನೆ, ನಿರ್ವಹಣೆ ಮತ್ತು ದುರಸ್ತಿ (ಒ.ಎಂ.ಆರ್.) ಮಾದರಿಯಲ್ಲಿ ನೀರು ಪೂರೈಕೆ ಯೋಜನೆಯನ್ನು ರೂಪಿಸಿತು. ಸುಭಾಷ್ ಪ್ರಾಜೆಕ್ಟ್ ಅಂಡ್ ಮಾರ್ಕೆಟಿಂಗ್ ಲಿಮಿಟೆಡ್, UPL-EEL ಮತ್ತು ಹೈಡ್ರೋ–ಕಾಂಪ್ ಎಂಟ್ರಪ್ರೈಸಸ್‌ನಿಂದ ರಚಿತವಾದ "ಲಾತೂರ್ ವಾಟರ್ ಮ್ಯಾನೇಜ್‌ಮೆಂಟ್ ಅಂಡ್ ಕಂಪೆನಿ ಲಿಮಿಟೆಡ್" ನೀರನ್ನು ಮೂಲಗಳಿಂದ ಸಂಗ್ರಹಿಸಿ, ಪಂಪಿಂಗ್ ಮಾಡಿ, ನೀರನ್ನು ಸಂಗ್ರಹಿಸಿ ಶುದ್ದಿಕರಿಸಿ, ನೀರನ್ನು ಪೂರೈಸುವ, ಶುಲ್ಕ ವಿಧಿಸುವ ಮತ್ತು ಸಂಗ್ರಹಿಸುವ–ಕ್ರಿಯೆಗಳನ್ನು ನಿರ್ವಹಿಸಲು ಆಯ್ಕೆಮಾಡಲಾಯಿತು ಮತ್ತು ಇದು ದೇಶದ ಮೊದಲ ಸಮಗ್ರ ನೀರಿನ ನಿರ್ವಹಣಾ ಯೋಜನೆಯಾಗಿದೆ.



**ಲಾತೂರ್ ನಗರ :**

ಲಾತೂರ್ ನಗರವು ಮಹಾರಾಷ್ಟ್ರದ ಮರಾಠವಾಡ ಪ್ರಾಂತ್ಯದಲ್ಲಿರುವ ಜಿಲ್ಲಾ ಕೇಂದ್ರವಾಗಿದ್ದು, 2001ರ ಜನಗಣತಿಯಂತೆ. 3.5 ಲಕ್ಷ ಜನಸಂಖ್ಯೆಯೊಂದಿಗೆ 32.56 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. 10 ವರ್ಷಕ್ಕೊಮ್ಮೆ ಶೇ. 56 ರ ದರದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಬೆಳವಣಿಗೆಯಾಗುತ್ತಿದೆ.

ಮಹಾರಾಷ್ಟ್ರದ ಇತರೇ ನಗರಗಳಿಗಿಂತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಲಾತೂರ್ ನಿರಂತರವಾಗಿ ಬಂಡವಾಳಷಾಹಿಗಳು ಮತ್ತು ವಲಸೆ ಬರುವವರನ್ನು ಆಕರ್ಷಿಸುತ್ತಿದೆ. ಕಳೆದ ದಶಕದಲ್ಲಿ ನಗರದ ಆರ್ಥಿಕತೆಯು, ಮೂಲ ಸೌಕರ್ಯಾಭಿವೃದ್ಧಿ, ಸರ್ಕಾರಿ ಉದ್ಯೋಗಸೃಷ್ಟಿ. ವ್ಯಾಪಾರ, ವಾಣಿಜ್ಯ ಮತ್ತು ನಿರ್ಮಾಣ ಚಟುವಟಿಕೆಗಳಿಂದ ತುಂಬಿದ್ದು, ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಸೌಲಭ್ಯಗಳಿಂದ ಆಕರ್ಷಣೀಯ ಕೇಂದ್ರವಾಗಿದೆ. ಲಾತೂರ್ ಮುನಿಸಿಪಲ್ ಕಾರ್ಪೋರೇಷನ್ ನಗರದ ನೀರು ಪೂರೈಕೆ ಕಾರ್ಯದಲ್ಲಿ ವಿಫಲವಾಗಿ ತನ್ನ ಜವಾಬ್ದಾರಿಯನ್ನು ಲಾತೂರ್ ಜೀವನ್ ಪ್ರಾಧಿಕಾರಕ್ಕೆ (ಎಂ.ಜೆ.ಪಿ.) ವರ್ಗಾಯಿಸಿತು. ಎಂ.ಜೆ.ಪಿ.ಯು ಸೇವಾ ಶುಲ್ಕವನ್ನು ಸಂಗ್ರಹಿಸಿ ಬಾಕಿಯಿದ್ದ ಕಾಮಗಾರಿಗಳನ್ನು ಸಂಪೂರ್ಣಗೊಳಿಸಿತು. ಮತ್ತು ನೀರಿನ ನಿರ್ವಹಣೆ ಮತ್ತು ವ್ಯವಸ್ಥಾಪನೆಯನ್ನು ಖಾಸಗಿಯವರಿಗೆ ವಹಿಸಿತು. ಇವರು ನಿಗಧಿತ ಮೊತ್ತವನ್ನು ಸ್ಥಳೀಯ ಸಂಸ್ಥೆಗೆ ನೀಡುತ್ತಿದ್ದವು. ಏಪ್ರಿಲ್ 2007ರ ಅಂತ್ಯಕ್ಕೆ ಎಂ.ಜೆ.ಪಿ.ಯು ಅರ್ಹ ಅಭ್ಯರ್ಥಿಗಳಿಂದ ಖಾ.ಸಾ.ಸ. ಮಾದರಿ ಬಿಡ್ಡಿಂಗ್‌ಗೆ ಅರ್ಜಿ ಆಹ್ವಾನಿಸಿ, ತಾಂತ್ರಿಕವಾಗಿ, ಆರ್ಥಿಕವಾಗಿ ಹಾಗೂ ಉತ್ತಮ ಅನುಭವದೊಂದಿಗೆ, ಸ್ವ–

ಸಂಸ್ಥೆಗೆ ಹೆಚ್ಚು ವರಮಾನ ನೀಡಲೊಪ್ಪಿದ "ಲಾತೂರ್ ವಾಟರ್ ಮ್ಯಾನೇಜ್‌ಮೆಂಟ್ ಕಂಪೆನಿ ಲಿಮಿಟೆಡ್" ನ್ನು ಆಯ್ಕೆ ಮಾಡಿತು.

ಯೋಜನೆಯು ನೀರಿನ ಮೂಲಗಳಾದ ಸಾಯಿ, ನಗ್ಜಾರಿ ಮತ್ತು ದನೇಗೋನ್ ಜಲಾಶಯದಿಂದ ಪಡೆದು 109 ಕೋಟಿ ಲೀಟರ್ ಸಾಮರ್ಥ್ಯದ ಘಟಕದಲ್ಲಿ ಶುದ್ಧೀಕರಿಸಿ ನಗರದ ಇತರೆ 11 ಸಂಗ್ರಹಣಾಗಾರಗಳಿಗೆ 250 ಲಕ್ಷ ಲೀಟರ್‌ಗಳನ್ನು ವರ್ಗಾಯಿಸಿ 12 ಗಂಟೆಗಳವರೆಗೆ ಸಂಗ್ರಹಿಸಿ 600 ಕಿ.ಮೀ. ಸಂಪರ್ಕ ಜಾಲದಲ್ಲಿ ವಿತರಿಸುವುದಾಗಿದೆ.

**ನೀರು ಪೂರೈಕೆಯಲ್ಲಿರುವ ಪ್ರಸ್ತುತ ಸಮಸ್ಯೆಗಳು :**

- ನೀರಿಗೆ ಅಪಾರ ಬೇಡಿಕೆ ಅಸಮರ್ಪಕ ಪೂರೈಕೆ (ವಾರದಲ್ಲಿ ಎರಡು ದಿನ ಶೇ. 80 ಜನರಿಗೆ ನೀರನ್ನು ಒದಗಿಸುತ್ತಿದೆ)
- ಆಸ್ತಿ ಸಂಪನ್ಮೂಲ ಹಾಗೂ ನೀರು ಪೂರೈಕೆಯ ಅಸಮರ್ಪಕ ದಾಖಲಾತಿ.
- ಮೀಟರ್‌ಗಳ ಕೊರತೆ ಮತ್ತು ಅಕ್ರಮ ಸಂಪರ್ಕಗಳು.
- ಎಂ.ಎಲ್.ಸಿ.ಯು ದಾಖಲಾತಿ, ನಿರ್ವಹಣೆ ಮತ್ತು ವ್ಯವಸ್ಥಾಪನೆಯಲ್ಲಿನ ದುರ್ಬಲತೆ.
- ಶುಲ್ಕರಹಿತ ನೀರಿನ ಅಪಾರ ಪೂರೈಕೆ.

**ಪ್ರಮುಖಾಂಶಗಳು :**

ಸೆಪ್ಟೆಂಬರ್ 2007 ರಂದು ಎಂ.ಜೆ.ಪಿ.ಯು 10 ವರ್ಷಗಳ ಅವಧಿಗೆ ನೀರಿನ ನಿರ್ವಹಣೆ, ಪೂರೈಕೆ, ವ್ಯವಸ್ಥಾಪನೆ, ದುರಸ್ತಿಯ ಜೊತೆಗೆ ಮೀಟರ್ ಅಳವಡಿಸಿ ಶುಲ್ಕ ವಿಧಿಸುವುದು ಮತ್ತು ಸಂಗ್ರಹಿಸುವ ಜವಾಬ್ದಾರಿಯನ್ನು ಎಸ್.ಪಿ.ವಿ. ನಿರ್ವಾಹಕರಿಗೆ ವರ್ಗಾಯಿಸಿತು. ಟೆಂಡರ್‌ನಲ್ಲಿ ವೃತ್ತಿ ಸಾಮರ್ಥ್ಯವನ್ನಾಧರಿಸಿದ ಒಪ್ಪಂದವಾಗಿದ್ದು ಕೆಳಕಂಡ ಅಂಶಗಳನ್ನೊಳಗೊಂಡಿದೆ.

- ನಿರ್ವಹಣೆ, ವ್ಯವಸ್ಥಾಪನೆ ಮತ್ತು ದುರಸ್ತಿ ನಿರ್ವಾಹಕನ ಜವಾಬ್ದಾರಿ.
- ಖಾಯಂ ಕೆಲಸಗಾರರ ಜೊತೆಗೆ ಪರಿಣತಿಯುಳ್ಳ 70 ಕೆಲಸಗಾರರನ್ನು ಎಲ್.ಎಂ.ಸಿ.ಯಿಂದ ಎಂ.ಜೆ.ಪಿ.ಗೆ ವರ್ಗಾಯಿಸಿತು.
- ಅಗತ್ಯವಿರುವಷ್ಟು ಉತ್ತಮ ಗುಣಮಟ್ಟದ ನೀರನ್ನು ನವೀನ ವಿತರಣಾ ಮಾದರಿ ಮೂಲಕ ಶೇ. 100 ಜನಸಂಖ್ಯೆಗೆ ಒದಗಿಸುವುದು.
- ಸರ್ಕಾರ ವಿಧಿಸಿದ ಶುಲ್ಕದನ್ವಯ ಶೇ. 100 ರಷ್ಟು ಮೀಟರ್ ಅಳವಡಿಸಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವುದು.
- ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವುದು ಹಾಗೂ 24×7 ಮಾದರಿಯ ಉಚಿತ ಸಹಾಯವಾಣಿ ಪ್ರಾರಂಭಿಸುವುದು.
- ಸೋರಿಕೆಗಳನ್ನು ಗುರುತಿಸಿ ದುರಸ್ತಿಗೊಳಿಸುವುದು, ನೀರಿನ ಪ್ರಮಾಣ, ವಿತರಣಾ ವಲಯಗಳ ವಿಸ್ತರಣೆ ಹಾಗೂ ಸಂಸ್ಥೆಯ ಸಬಲೀಕರಣಕ್ಕಾಗಿ ಮೈಲಿಗಲ್ಲು / ಗುರಿಗಳನ್ನು ನಿಗಧಿಪಡಿಸುವುದು.
- ಟೆಂಡರ್ ನಂತರದ 2 (ಎರಡು) ವರ್ಷಗಳಲ್ಲಿ 24×7 ಮಾದರಿ ನೀರಿನ ನಿರ್ವಹಣೆಯನ್ನು ಜಾರಿಗೊಳಿಸುವುದು.

**ಯೋಜನೆಯ ಒಪ್ಪಂದ ಒಳಗೊಂಡಿರುವ ಅಂಶಗಳು :**

ಅ. ಸಮಗ್ರ ನೀರು ಸರಬರಾಜು ಯೋಜನೆಯು, ದನೇಜೊನ್, ನಗ್ಝಾರಿ ಮತ್ತು ಸಾಯಿ– ಜಲಮೂಲಗಳಿಂದ ನೀರನ್ನು ಪಂಪಿಂಗ್, ಕೇಂದ್ರಗಳಿಗೆ, ವರ್ಗಾಯಿಸುವ, ನಿರ್ವಹಣೆ, ವಿತರಣೆ, ದುರಸ್ತಿಯೊಂದಿಗೆ, ವಿದ್ಯುಚ್ಛಕ್ತಿ ಸಂಪರ್ಕ, ನೀರಿನ ಸಂಗ್ರಹಣಾಗಾರಗಳು, ಸಂಪರ್ಕಜಾಲ ಮತ್ತು ವಿತರಣಾ ವ್ಯವಸ್ಥೆಯ ಜವಾಬ್ದಾರಿಯನ್ನು ಹೊಂದಿದೆ.

ಆ. ವ್ಯವಸ್ಥೆಯನ್ನು ಸುಧಾರಿಸುವುದರ ಜೊತೆಗೆ ನಿಯೋಜನೆ ಮೇರೆಗೆ, ಸಿಬ್ಬಂದಿಯನ್ನು ಮುನಿಸಿಪಾಲಿಟಿಯಿಂದ ಪಡೆದು ನಿರ್ವಹಿಸುವುದು.

ಇ. ಎಲ್.ಪಿ.ಸಿ.ಡಿ. ನಿಗಧಿಪಡಿಸಿದ ಗುಣಮಟ್ಟದ ನೀರನ್ನೊದಗಿಸುವುದರ ಜೊತೆಗೆ ಶೇ. 100ರಷ್ಟು ಜನಸಂಖ್ಯೆಗೆ ನೀರನ್ನು ಪೂರೈಸುವುದು.

ಈ. ಇ.ಇ.ಸಿ. ಪ್ರಮಾಣೀಕರಿಸಿದ ಮೀಟರ್‌ಗಳನ್ನು ಎಲ್ಲಾ ಸಂಪರ್ಕಗಳಿಗೂ ಅಳವಡಿಸಿ ಬಳಕೆದಾರರ ಶುಲ್ಕವನ್ನು ಗ್ರಾಹಕರಿಂದ ಸಂಗ್ರಹಿಸುವುದು.

ಉ. ಪ್ರತೀ ವರ್ಷ 1 ಕಿ.ಮೀ. ಹೊಸ ಸಂಪರ್ಕ ಜಾಲ ವೃದ್ಧಿಗೆ ಕಾರ್ಮಿಕರನ್ನು ಪೂರೈಸುವುದು.

ಊ. ಹೊಸ ಸಂಪರ್ಕಗಳ ಅಳವಡಿಕೆಗೆ ಸೇವಾ ಶುಲ್ಕ ಸಂಗ್ರಹಿಸುವುದು.

ಋ. ಎಂ.ಜೆ.ಪಿ. ಮಾನದಂಡದಂತೆ ಅಕ್ರಮ ಸಂಪರ್ಕಗಳಿಗೆ ದಂಡವಿಧಿಸುವುದು ಹಾಗೂ ಸಕ್ರಮಗೊಳಿಸುವುದು.

ಎ. ಅತ್ಯಾಧುನಿಕ ವಿಧಾನದ ಮೂಲಕ ಸಮಗ್ರಾಭಿವೃದ್ಧಿ ಜಾರಿಗೊಳಿಸುವುದು.

ಏ. ನೀರು ಪೂರೈಕೆ ಶುಲ್ಕವನ್ನು ಗ್ರಾಹಕರಿಂದ ಸಂಗ್ರಹಿಸುವುದು.

ಐ. 24×7 ಮಾದರಿಯಲ್ಲಿ ಉಚಿತ ಸಹಾಯವಾಣಿ ತೆರೆಯುವುದು.

ಒ. ನೀರು ಪೂರೈಕೆಗೆ ಸಂಬಂಧಿಸಿದ ಅಂಕಿ–ಅಂಶಗಳ ಮಾಹಿತಿಯನ್ನು ಎಂ.ಜೆ.ಪಿ.ಗೆ ನೀಡುವುದು.

## ಭವಿಷ್ಯದಲ್ಲಿ ನಗರಕ್ಕೆ ಅಗತ್ಯವಿರುವ ನೀರು ಪೂರೈಕೆ ಅಂಕಿ–ಅಂಶಗಳು

| ಕ್ರ.ಸಂ. | ವಿಷಯ | ಅಳತೆ | ಪ್ರಮಾಣ |
|---|---|---|---|
| 1 | ಸಾಯಿ, ನಾಗ್ಝಾರಿ & ಮಂಜಾರ ಜಲಮೂಲದಿಂದ ನೀರು ಪೂರೈಕೆ | ಲಕ್ಷ, ಲೀಟರ್‌ಗಳಲ್ಲಿ | 350 |
| 2 | ನೀರಿನ ಸಂಗ್ರಹಕಗಳು | ಸಂಖ್ಯೆ | 11 |
| 3 | ಒಟ್ಟು ಸಂಗ್ರಹ ಸಾಮರ್ಥ್ಯ | ಲಕ್ಷ, ಲೀಟರ್‌ಗಳಲ್ಲಿ | 250, 50 |
| 4 | ದಿನದ ನೀರಿನ ಪೂರೈಕೆ | ಲಕ್ಷ, ಲೀಟರ್‌ಗಳಲ್ಲಿ | 300–350 |
| 5 | ಸಂಪರ್ಕ ಜಾಲದ ಒಟ್ಟು ಉದ್ದ | ಕಿ.ಮೀ. | 600 |
| 6 | ದೈನಂದಿನ ನೀರಿನ ಪೂರೈಕೆ (ಸಾಮಾನ್ಯ) | ಎಲ್.ಪಿ.ಸಿ.ಡಿ. | 100 |
| 7 | ದೈನಂದಿನ ನೀರಿನ ಪೂರೈಕೆ (ಬೇಸಿಗೆ ಕಾಲ) | ಎಲ್.ಪಿ.ಸಿ.ಡಿ. | 100 |
| 8 | ನೀರಿನ ಪೂರೈಕೆಯ ಅವಧಿ | – | ವಾರದಲ್ಲಿ 2 ಬಾರಿ 2 ರಿಂದ 3 ಗಂಟೆಗಳು |

| | | | |
|---|---|---|---|
| 9 | ವಾಸಸ್ಥಳ /ಮನೆಗಳ ಸಂಪರ್ಕ | ಸಂಖ್ಯೆ | 40,000 |
| 10 | ವಾಸ ಸ್ಥಳೇತರ / ಸಂಸ್ಥೆಗಳು | ಸಂಖ್ಯೆ | 274 |
| 11 | ಕೈಗಾರಿಕೆ ಮತ್ತು ವಾಣಿಜ್ಯ | ಸಂಖ್ಯೆ | 723 |
| 12 | ಲಾತೂರ್ ಒಟ್ಟು ವಿಸ್ತೀರ್ಣ | ಸ್ಕ್ವೇರ್ ಕಿ.ಮೀ. | 32.55 |
| 11 | 2005 ರಂತೆ ಒಟ್ಟು ಮನೆಗಳು | ಸಂಖ್ಯೆ | 65,000 |
| 12 | ನೀರಿನ ಸಂಪರ್ಕಜಾಲ ಹೊಂದಿರುವ ಮನೆಗಳು | ಸಂಖ್ಯೆ | 26,000 |

(ಮೂಲ : ನೀರು ಪೂರೈಕೆ ಇಲಾಖೆ– ಎಲ್.ಎಂ.ಸಿ.)

**ಪ್ರಮಾಣೀಕೃತ ಮೌಲ್ಯ :**

ಎಂ.ಜೆ.ಪಿ. ಮತ್ತು ಎಲ್.ಎಂ.ಸಿ.ಗಳ ನಡುವಿನ ಒಪ್ಪಂದದಂತೆ

- ನೀರಿನ ಬಳಕೆದಾರರ ನಿರ್ವಹಣೆ, ವಿದ್ಯುಚ್ಛಕ್ತಿ ಸಂಪರ್ಕಗಳ ಜೊತೆಗೆ ಸಂಸ್ಥೆಯ ಸಾಮರ್ಥ್ಯ ವೃದ್ಧಿಸಲು ಎಸ್.ಪಿ.ವಿ. ಮೂಲಸಂಸ್ಥೆ ಹಾಗೂ ರಾಜ್ಯ ಕಲಾ ಮಾಹಿತಿ ವಿಭಾಗದಿಂದಲು ಪರಿಣತರನ್ನು ಒದಗಿಸುವುದು.
- ಜಾಗತಿಕ ಗುಣಮಟ್ಟದ ಮೀಟರ್‌ಗಳನ್ನು ಖರೀದಿಸಿದ್ದು, ಕಾರ್ಖಾನೆಯು ಲಾತೂರ್‌ನಲ್ಲಿ ದುರಸ್ತಿ ಘಟಕವೊಂದನ್ನು ಪ್ರಾರಂಭಿಸಿದೆ.
- ಎಸ್.ಸಿ.ಎ.ಡಿ.ಎ. ಮಾದರಿಯಲ್ಲಿ ಮೂಲ ಸೌಕರ್ಯಗಳನ್ನು ಅಂತರಾಷ್ಟ್ರೀಯ ಗುಣಮಟ್ಟದಲ್ಲಿ ವೃದ್ಧಿಸಿ ದೇಶದ ಮಾದರಿ ಯೋಜನೆಯಾಗಿಸುವುದು.
- ಎಲ್.ಎಂ.ಸಿ.ಗೆ ನಿರ್ವಾಹಕರು ನಿಗದಿಪಡಿಸಿರುವಷ್ಟು ಹಣವನ್ನು ಪ್ರತಿವರ್ಷ ಸಂದಾಯ ಮಾಡುವುದು.
- ಪರಿಣಿತ ತಂತ್ರಜ್ಞರು, ಹಾಗೂ ಇಂಜಿನಿಯರ್‌ಗಳಿಂದ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವುದರ ಮೂಲಕ ಎಸ್.ಪಿ.ವಿ. ಯು ತನ್ನ ಮೂಲಧನವನ್ನು ಬಳಕೆದಾರರ ಶುಲ್ಕ, ಹೊಸ ಸಂಪರ್ಕ ಶುಲ್ಕದ ಮೂಲಕ ಭರಿಸುವುದು.
- ನಾಗರಿಕರಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ 2 ವರ್ಷದೊಳಗೆ 24×7 ಮಾದರಿಯಲ್ಲಿ ತಡೆರಹಿತ ನೀರನ್ನು ಪೂರೈಸುವುದು.

**ಸಂಕಷ್ಟಗಳು ಮತ್ತು ನಿರ್ವಹಣಾ ತಂತ್ರಗಳು :**

- ಬಳಕೆದಾರರು ಮತ್ತು ಯೋಜನೆಯ ಹೊಂದಾಣಿಕೆ ಸಮಸ್ಯೆ.
- ತಾಂತ್ರಿಕ ಸಮಸ್ಯೆಗಳು.
- ಬೆಳವಣಿಗೆ ಮತ್ತು ಗುರಿ ತಲುಪುವಲ್ಲಿನ ವಿಳಂಬ.
- ದೀರ್ಘಾವಧಿಯಲ್ಲಿ ವೈಯಕ್ತಿಕ ಕೌಶಲ್ಯಾಭಿವೃದ್ಧಿ ಇಳಿಮುಖ ಸಂಭವ.
- ಸಮಯ ಮತ್ತು ಹಣದ ನಡುವಿನ ಹೊಂದಾಣಿಕೆ.

- ಬಳಕೆದಾರರ ಸ್ವೀಕರಿಸುವಿಕೆ ಸಾಮರ್ಥ್ಯ.

**ನಿರ್ವಹಣೆ :**

- ಯೋಜನಾ ವ್ಯಾಪ್ತಿಯ ಸಂಪರ್ಕ ಜಾಲಗಳ ಗುಣಮಟ್ಟ ಸೇವೆ ಮತ್ತು ಕಾರ್ಯ ವೈಖರಿಯ ಪರಿಶೀಲನೆ.
- ಯೋಜನೆಯ ತಂತ್ರಜ್ಞಾನ ಮತ್ತು ಪ್ರಗತಿಯ ಮೌಲ್ಯಮಾಪನ.
- ಯೋಜನೆ ಜಾರಿಯಲ್ಲಿ ವಿಳಂಬವಾಗದಂತೆ ಸಮರ್ಪಕ ತಂತ್ರಜ್ಞಾನ ಮತ್ತು ಸಲಹೆಗಳನ್ನು ಒದಗಿಸುವುದು.
- ನಿರಂತರ ಮೇಲ್ವಿಚಾರಣೆ ಮತ್ತು ವರದಿ ನೀಡುವಿಕೆ.
- ಯೋಜನೆಯ ಕಾರ್ಯಚಟುವಟಿಕೆ ಮತ್ತು ಸಂಪನ್ಮೂಲಗಳ ಬಳಕೆಯ ಬಗ್ಗೆ ಮೌಲ್ಯಮಾಪನ ವರದಿ ಸಲ್ಲಿಸುವುದು.

**ಒಪ್ಪಂದದ ಅವಧಿ :**

ಯೋಜನೆಯ ಎಲ್ಲಾ ಸಂಪರ್ಕ ಜಾಲಗಳಿಗೂ ಆರು (6) ತಿಂಗಳೊಳಗಾಗಿ ಮೀಟರ್ ಅಳವಡಿಸುವ ಅವಧಿಯು ಸೇರಿದಂತೆ ಹತ್ತು (10) ವರ್ಷಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯ ಒಪ್ಪಂದ.

**ತೆರಿಗೆ :**

ಬಳಕೆದಾರರ ಶುಲ್ಕ ಹೊಸ ಸಂಪರ್ಕ ಮಾರ್ಗಗಳ ಸೇವಾ ಶುಲ್ಕ ದುರಸ್ತಿ, ಮೀಟರ್ ಅಳವಡಿಕೆ ಅಕ್ರಮ ಸಂಪರ್ಕಗಳ ಸಕ್ರಮೀಕರಣದಿಂದ ನಿರ್ವಾಹಕರು ಶುಲ್ಕ / ಆದಾಯ ಸಂಗ್ರಹಿಸಬಹುದು. ಶುಲ್ಕ ಪಾವತಿಸದ ಬಳಕೆದಾರರ ಸಂಪರ್ಕವನ್ನು ನಿಷ್ಕ್ರಿಯಗೊಳಿಸುವುದರ ಜೊತೆಗೆ ಎರಡು (2) ವರ್ಷಕ್ಕೊಮ್ಮೆ ಕೋಷ್ಟಕದಲ್ಲಿ ತಿಳಿಸಿದ ಮಾದರಿಯಲಿ ದರ ಪರೀಕ್ಷಿಸಬಹುದು.
ರೂ.ಗಳಲ್ಲಿ

| **ಗ್ರಾಹಕರು** | **2007–08** | **2008–09** | **2010–11** | **2012–13** | **2014–15** | **2016–17** |
|---|---|---|---|---|---|---|
| 1. ಗೃಹಬಳಕೆ | 8.80 | 9.60 | 10.60 | 11.15 | 11.70 | 12.30 |
| 2. ಸಂಸ್ಥೆಗಳು | 17.00 | 18.70 | 20.50 | 21.50 | 22.60 | 23.75 |
| 3. ಕೈಗಾರಿಕೆ ಮತ್ತು ವಾಣಿಜ್ಯ | 40.00 | 42.00 | 44.00 | 46.20 | 48.50 | 50.90 |

ಕೊಳಚೆ ಪ್ರದೇಶಗಳಿಗೆ ಸಾಮಾಜಿಕ ಕಾರ್ಯಕ್ರಮಗಳಿಗೆ ಉಚಿತ ನೀರಿನ ಸೌಲಭ್ಯ ಕಲ್ಪಿಸಲಾಗುವುದು.

**ನೀರಿನ ಸಂಪರ್ಕ ಜಾಲ :**

ಅ. 2005ರ ಸಮೀಕ್ಷೆಯು ನಗರದಲ್ಲಿ ಒಟ್ಟು 70,000 ಸಂಪರ್ಕಗಳಿವೆ. ಆದರೆ ಕೇವಲ 33000 ಅಧಿಕೃತ ಸಂಪರ್ಕ ದಾಖಲೆ ಇದೆ.

ಆ. ಪ್ರಸ್ತುತ ವಾರಕ್ಕೆ 6 ಗಂಟೆಗಳು ನೀರನ್ನೊದಗಿಸುತ್ತಿದ್ದು, ಸರಾಸರಿ ಒಂದು ಮನೆಗೆ 382 ಲೀಟರ್ ಪೂರೈಕೆಯಾಗುತ್ತಿದೆ.

ಇ. ಜನಸಂಖ್ಯೆ ವರ್ಷಕ್ಕೆ 2.5% ಪ್ರಮಾಣದಲ್ಲಿ ಬೆಳೆಯುತ್ತಿದೆ.

**ಸಾಮರ್ಥ್ಯಾಭಿವೃದ್ಧಿ :**

ಸಾಮರ್ಥ್ಯಾಭಿವೃದ್ಧಿಗಾಗಿ ಮುಂದಿನ 4 ವರ್ಷಗಳ ಗುರಿ.

| ವಿಷಯ | ವರ್ಷ 1 | ವರ್ಷ 2 | ವರ್ಷ 3 | ವರ್ಷ 4 |
|---|---|---|---|---|
| ಸೋರಿಕೆ ನಿಯಂತ್ರಣ | 137.5 | 118.3 | 99.2 | 80.0 |
| ಶುಲ್ಕದರ ಪ್ರಮಾಣ | 40.0% | 20.0% | 10.0% | 5.0% |
| ಅಕ್ರಮ ಸಂಪರ್ಕಗಳ ಪತ್ತೆ | 40.0% | 70.0% | 90.0% | 95.0% |
| ಸಂಪರ್ಕಗಳ ಬೇಡಿಕೆ ವೃದ್ಧಿ | 10.0% | 50.0% | 100.0% | 100.0% |
| ಗೃಹವಾರು ನೀರಿನ ಶುಲ್ಕ ಸಂಗ್ರಹ | 45.0% | 58.0% | 71.0% | 85.0% |

**ಬೆಲೆಯಲ್ಲಿನ ವ್ಯತ್ಯಯ :**

1. ಮುನಿಸಿಪಾಲಿಟಿಯಿಂದ ಪಡೆದ ನೀರಲ್ಲಿ ಎಷ್ಟನ್ನು ಬಳಸಲಾಗಿದೆ ಮತ್ತು ಪಂಪ್ ಮಾಡಲಾಗಿದೆ ಎಂಬುದನ್ನು ಆಧರಿಸಿದೆ.
2. ಮುನಿಸಿಪಾಲಿಟಿಯ ಹಳೇ ಪಾವತಿಯಾದ ಬಿಲ್ಲುಗಳಿಗೆ ಎಸ್.ಪಿ.ವಿ.ಗೂ ಸಂಬಂಧವಿಲ್ಲದ್ದರಿಂದ ಸಂಪನ್ಮೂಲಗಳನ್ನು ಸಮರ್ಪಕವಾಗಿ ಪೂರೈಸಬೇಕು.

**ವೆಚ್ಚ :**

ಭೌತಿಕ ರಚನೆ ಮತ್ತು ನಿರ್ವಹಣೆಗಾಗಿ ಎಸ್.ಪಿ.ವಿ. ಯು

1. ವಿದ್ಯುತ್, ರಾಸಾಯನಿಕ ಮತ್ತು ಸಗಟು ನೀರಿನ ನಿರ್ವಹಣಾ ವೆಚ್ಚ.
2. ಸಾಮಗ್ರಿಗಳು, ಸಾಧನಗಳ ನಿಗಧಿತ ವೆಚ್ಚ, ಜಾಗೃತಿ ಕಾರ್ಯಕ್ರಮ, ಕಚೇರಿ ನಿರ್ವಹಣೆ, ಸಾಗಾಣಿಕೆ ಮೂಲ ಸೌಕರ್ಯಾಭಿವೃದ್ಧಿಗೆ ಒದಗಿಸುವ ಅನಗಧಿತ ವೆಚ್ಚ.
3. ಸಂಪರ್ಕ ಜಾಲಗಳ ನಿರ್ವಹಣೆ, ದುರಸ್ತಿ ಮತ್ತು ಸಮೀಕ್ಷೆ ವೆಚ್ಚ.
4. ಮೀಟರ್‌ಗಳ ಖರೀದಿ, ವರ್ಗೀಕರಣ, ಜಾಲಗಳ ಪುನರ್ ಪರಿಶೀಲನೆ ಪ್ರಯೋಗಾಲಯ, ಯಂತ್ರಗಳು, ತಂತ್ರಾಂಶಗಳ ವೆಚ್ಚ.

5. ಉಪಗ್ರಹ ನಕ್ಷೆ, ಯೋಜನೆ, ಸಮೀಕ್ಷೆ, ಪಂಪಿಂಗ್ ಯಂತ್ರಗಳು ದುರಸ್ತಿ, ಸಂಗ್ರಹಣಾಗಾರಗಳ ರಚನೆಗಾಗಿ, ಎಂ.ಜೆ.ಪಿ. ವೆಚ್ಚಗಳು.

**ಉಪಸಂಹಾರ :**

ನಗರಕ್ಕೆ 24×7 ಮಾದರಿಯಲ್ಲಿ ನೀರು ಪೂರೈಸುವಿಕೆಯು ಪಾರದರ್ಶಕ ಸಮರ್ಪಕ ಬಳಕೆಯನ್ನು ಉತ್ತೇಜಿಸಿದ್ದು ಯಶಸ್ವಿಯೆನಿಸಿದೆ. ಇದೊಂದು ಮಾದರಿ ಅಧ್ಯಯನವಾಗಿದ್ದು, ಇತರೇ ಭಾಗಗಳಿಗೆ ವಿಸ್ತರಿಸುವಲ್ಲಿ ಗಳಿಸಿದ ಯಶಸ್ಸು ಸಂತೃಪ್ತಿಕರವಾಗಿಲ್ಲ.

ಮೂರು ಸಹಭಾಗಿಗಳನ್ನೊಳಗೊಂಡ ಯೋಜನೆಯ ರೂಪುರೇಷೆ, ನೀತಿ, ಕಾನೂನು, ಮಾಹಿತಿ, ವಿತರಣೆ, ಸಂಕಷ್ಟಗಳ ನಿರ್ವಹಣೆ ಪಾಲುದಾರಿಕೆ, ಯೋಜನಾಭಿವೃದ್ಧಿಗಾಗಿ ಧನಸಂಗ್ರಹ, ಎಲ್ಲಾ ಜವಾಬ್ದಾರಿಗಳು, ಸಮಾನವಾಗಿ ಹಂಚಿಕೆಯಾಗಿದ್ದು, ಬೇರೆ ನಗರ ಸಭೆಗಳು ಅಭಿವೃದ್ಧಿ ಯೋಜನೆಗಳನ್ನು ಆರ್ಥಿಕ ಭದ್ರತೆಯ ಕೊರತೆಯ ಹೊರತಾಗಿಯು ಪಿ.ಪಿ.ಪಿ. ಮಾದರಿಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸಬಹುದು.

**ಪ್ರಶ್ನೆಗಳು :**

1. 'ಸಾಖಾಸ-ಹೊ&ಅ' ವಿಧಾನವನ್ನು ಅನುಸರಿಸಲು ಸ್ಥಳೀಯ ಸಂಸ್ಥೆಯ ಹಿನ್ನಲೆ ಏನಾಗಿತ್ತು?
2. ಯಾವ ಕಾರಣಕ್ಕಾಗಿ 'BOT' ಮಾದರಿಯನ್ನು ಆಯ್ಕೆ ಮಾಡಲಾಯಿತು?
3. ಬಿಡ್ಡಿಂಗ್ ನಡೆದ ಮೂರು ಹಂತಗಳು ಯಾವುವು?
4. ಅಭಿವೃದ್ಧಿಯ ಒಪ್ಪಂದದ ಮುಖ್ಯ ಅಂಶಗಳಾವುವು?
5. ಯಾವ ಕಾರ್ಯವ್ಯಾಪ್ತಿಗಳನ್ನು ಒಳಗೊಂಡಿದ್ದ ಯೋಜನೆ?
6. ಹಣಕಾಸಿನ ನಿರ್ವಹಣೆಯ ಮುಖ್ಯ ಅಂಶಗಳಾವುವು?
7. ಯೋಜನೆಯನ್ನು ಜಾರಿಗೊಳಿಸುವ ವಿಧಾನಗಳಾವುವು?
8. 'ಸಾಖಾಸ-ಹೊಅನು' ಮಾರ್ಗೋಪಾಯದಲ್ಲಿ ಅನುಭವಿಸಿದ ಸಂಕಷ್ಟ ಮತ್ತು ಅಡೆ-ತಡೆಗಳಾವುವು?
9. ಯೋಜನೆಯ ಫಲಶೃತಿ ಮತ್ತು ಪರಿಣಾಮಗಳಾವುವು?
10. ಮಾದರಿಯ ಪುನರ್ಬಳಕೆಗೆ ಕಲಿತ ಪಾಠಗಳಾವುವು?

******

ನಿದರ್ಶನ:

## 5.5.3 ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಹಲ್ದಿಯೊ ನಗರದ ನೀರು ಪೂರೈಕೆ ಮತ್ತು ನಿರ್ವಹಣೆ: ಪಶ್ಚಿಮ ಬಂಗಾಳ

**ಪರಿಚಯ :**

ಬಂದರು ಮತ್ತು ಕೈಗಾರಿಕಾ ನಗರವಾಗಿರುವ ಹಲ್ದಿಯಾ ಹೂಗ್ಲಿ ಮತ್ತು ಹಲ್ದಿ ನದಿಯ ತಟದಲ್ಲಿದ್ದು, ಕೊಲ್ಕತ್ತಾದಿಂದ 120 ಕಿ.ಮೀ. ದೂರದಲ್ಲಿದೆ. ಕಳೆದ ಕೆಲವು ದಶಕಗಳಿಂದ ರಾಜ್ಯದ ಪ್ರಮುಖ ಕೈಗಾರಿಕಾ ವಲಯವಾಗಿ ಅಭಿವೃದ್ಧಿ ಹೊಂದಿದ್ದು, ಬೃಹತ್ ಕೈಗಾರಿಕೆಗಳಾದ ಸೌತ್ ಏಷ್ಯನ್ ಪೆಟ್ರೋ–ಕೆಮಿಕಲ್ ಲಿಮಿಟೆಡ್, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಟ್, ಎಕ್ಸೀಡ್, ಟಾಟಾ ಕೆಮಿಕಲ್ಸ್, ಹಿಂದೂಸ್ತಾನ್ ಲಿವರ್ಸ್ ಮುಂತಾದವುಗಳಿಂದ ಪೆಟ್ರೋಕೆಮಿಕಲ್ಸ್ ಮತ್ತು ಕೆಮಿಕಲ್ಸ್ ಕೈಗಾರಿಕೆಗಳಿಗೆ ಬಂಡವಾಳ ಆಕರ್ಷಿಸಿದೆ.



ಹಲ್ದಿಯಾವನ್ನು ಯೋಜಿತ ಕೈಗಾರಿಕಾ ನಗರವಾಗಿ ರೂಪಿಸಲು ಉದ್ದೇಶಿಸಿದ ಸರ್ಕಾರ 1980 ರಲ್ಲಿ ಹಲ್ದಿಯಾ ಡೆವಲಪ್‌ಮೆಂಟ್ ಪ್ರಾಧಿಕಾರ" (ಹೆಚ್.ಡಿ.ಎ.)ಯನ್ನು ಸ್ಥಾಪಿಸಿ 326 ಚದರ ಕಿ.ಮೀ. ಭೂಮಿಯನ್ನು ವರ್ಗಾಯಿಸಿತು. ಪ್ರಸ್ತುತ 761 ಚದರ ಕಿ.ಮೀ. ಭೂಮಿಯ ವ್ಯಾಪ್ತಿ, ಇಲ್ಲಿನ ಜನಸಂಖ್ಯೆ 1991 ರಲ್ಲಿ 5.5 ಲಕ್ಷ ವಿದ್ದದ್ದು 2007ರ ವೇಳೆಗೆ 12 ಲಕ್ಷಕ್ಕೆ ಏರಿದೆ. 103 ಚ.ಕಿ.ಮೀ. ವ್ಯಾಪ್ತಿಯಿರುವ ನಗರಸಭೆಯ ಜನಸಂಖ್ಯೆ 2001 ರಲ್ಲಿ 1.70 ಲಕ್ಷದಿಂದ 2007ಕ್ಕೆ 2 ಲಕ್ಷಕ್ಕೆ ತಲುಪಿದೆ.

ಮೂಲ ಸೌಕರ್ಯಗಳಾದ ವಿದ್ಯುತ್, ಸಾರಿಗೆ, ನೀರು, ಶೌಚಾಲಯ ಹಾಗೂ ಇತರೆ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಹೊಣೆಗಾರಿಕೆ ಹೆಚ್.ಡಿ.ಎ. ದಾಗಿದ್ದು, 1992–93 ರವರೆಗೂ ಪಿ.ಹೆಚ್.ಇ.ಒ. ನೀರಿನ ಪೂರೈಕೆ ಹೊಣೆ ಹೊತ್ತಿದ್ದಿತು. 2008 ನವೆಂಬರ್ ಪಿ.ಪಿ.ಪಿ. ಮಾದರಿಯನ್ನು ಆಯ್ಕೆ ಮಾಡುವವರೆಗೂ ಪಿ.ಹೆಚ್.ಇ.ಒ. ನೀರಿನ ಪೂರೈಕೆ ಜವಾಬ್ದಾರಿಯನ್ನು ಹೊರುವಂತೆ ಮಾಡುವಲ್ಲಿ ಹೆಚ್.ಡಿ.ಎ. ಯಶಸ್ವಿಯಾಯಿತು.

ಪಿ.ಹೆಚ್.ಇ.ಒ. ಮೂಲಕ ಹೆಚ್.ಡಿ.ಎ. ಯು ನೀರಿನ ಮೂಲಗಳ ನಿರ್ವಹಣೆ, ಸಂಸ್ಕರಣೆ ಮತ್ತು ಸಂಗ್ರಹಣಾ ಕಾರ್ಯದೊಂದಿಗೆ ಕೈಗಾರಿಕೆ ವಾಣಿಜ್ಯ ಮತ್ತು ಸಂಪೂರ್ಣ ಪ್ರಮಾಣದ ನೀರನ್ನು ಮುನಿಸಿಪಾಲಿಟಿಗೆ ಒದಗಿಸಬೇಕಾಗಿತ್ತು. ಗೃಹ ಮತ್ತು ಕೃಷಿಗಾಗಿ ನೀರಿನ ಪೂರೈಕೆಯು ನಗರಸಭೆಯ ಜವಾಬ್ದಾರಿಯಾಗಿದ್ದಿತು. ಹೆಚ್.ಡಿ.ಎ.ಯ ಅನುಭವ, ಕೆಳಮಟ್ಟದ ಸಂಸ್ಕರಣಾ ವಿಧಾನ, ಭೌತಿಕ ಸೋರಿಕೆಯಿಂದಾಗಿ, ಗುಣಮಟ್ಟ ಮತ್ತು ಪ್ರಮಾಣಕ್ಕೆ ಸಂಬಂಧಿಸಿದಂತೆ ನೋಂದಣಿಯಾದ ದೂರುಗಳನ್ನು ಸರಿಪಡಿಸುವಲ್ಲಿ ವಿಫಲವಾಯಿತು.

ಈ ಕಾರಣಗಳಿಂದಾಗಿ ವ್ಯವಸ್ಥಾಪನೆ ಮತ್ತು ನಿರ್ವಹಣೆ (ಒ&ಎಂ) ಮಾದರಿಯಲ್ಲಿ ಖಾಸಗಿಯವರಿಗೆ ನೀರು ಪೂರೈಕೆ ಜವಾಬ್ದಾರಿ ವರ್ಗಾಯಿಸಲು ತೀರ್ಮಾನಿಸಲಾಯಿತು. ಈ ಸಂಬಂಧ 2004 ರಿಂದ ಹಲವು ಪರಿಣಿತಿಯುಳ್ಳವರ ಮಾರ್ಗದರ್ಶನದಲ್ಲಿ ಯೋಜನೆಯನ್ನು ಸಿದ್ದಪಡಿಸಿ ಜನವರಿ 2007 ರಲ್ಲಿ ಬಿಡ್ಡಿಂಗ್‌ಗೆ ಕರೆನೀಡಿ ಆಯ್ಕೆಯಾದ ಜಸ್ಕೋ ಮತ್ತು ರ್‍ಯಾನ್‌ಹಿಲ್ ಸಂಸ್ಥೆಯ ಎಸ್.ಪಿ.ವಿ. ವಿಶೇಷ ಉದ್ದೇಶಿತ ಘಟಕದೊಂದಿಗೆ ನವೆಂಬರ್ 2008 ರಲ್ಲಿ ಒಪ್ಪಂದವೇರ್ಪಟ್ಟಿತು.

**2. ಯೋಜನಾ ಸಹಭಾಗಿಗಳು :**

JUSCO-Ranhill Utility Berhard ಒಕ್ಕೂಟವು ತಾಂತ್ರಿಕ ಪರಿಣಿತಿ ಒದಗಿಸಿತು. CRISIL ಸಲಹೆಗಳನ್ನು ನೀಡಿತು. ಕೈಗಾರಿಕೆ ಮತ್ತು ನಗರಸಭೆಗಳ ನಡುವೆ ನೀರು ಪೂರೈಕೆಗೆ ಸಂಬಂಧಿಸಿದಂತೆ ಒಪ್ಪಂದವೇರ್ಪಡುವಂತೆ ಮಾಡುವಲ್ಲಿ ಹೆಚ್.ಡಿ.ಎ. ಯಶಸ್ವಿಯಾಯಿತು. ಎಸ್.ಪಿ.ವಿ.ಯು ನಿರ್ವಹಣೆ, ವ್ಯವಸ್ಥಾಪನೆ, ದುರಸ್ತಿಯೊಂದಿಗೆ ಬಳಕೆದಾರರು ಶುಲ್ಕವನ್ನು ಸಂಗ್ರಹಿಸುವಂತಾಯಿತು.

**3. ಬಿಡ್ಡಿಂಗ್ ರಚನೆ ಮತ್ತು ಟೆಂಡರ್ ಪ್ರಕ್ರಿಯೆ :**

ಬಿಡ್ಡಿಂಗ್ 2 ಹಂತಗಳಲ್ಲಿ ನಡೆದು, ಮೊದಲ ಹಂತದಲ್ಲಿ ಸಂಸ್ಥೆಯ ಅನುಭವ ಮತ್ತು ಅರ್ಹತೆಗಳನ್ನು ಫೆಬ್ರವರಿ 2007 ರಂದು ಪಡೆದು ಪರಿಶೀಲಿಸಿ 4 ಸಂಸ್ಥೆಗಳನ್ನು ಆಯ್ಕೆ ಮಾಡಿತು. ಡಿಸೆಂಬರ್ 2007 ರಂದು ಯೋಜನೆಯ ಪ್ರತಿಗಾಗಿ ಆದೇಶಿಸಿ ಜನವರಿ 2008 ರಂದು ಬಿಡ್ಡಿಂಗ್ ಪೂರ್ವ ಆದೇಶ ಹೊರಬಿತ್ತು. ಫೆಬ್ರವರಿ 05, 2008 ಬಿಡ್ಡಿಂಗ್‌ಗೆ ಕೊನೆ ದಿನವಾಗಿದ್ದು, ಸಂಸ್ಥೆಯ ತಾಂತ್ರಿಕ ಪ್ರಾವಿಣ್ಯತೆ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಮೌಲ್ಯಮಾಪನ ಮಾಡಿ ಜುಲೈ 2008 ರಂದು JUSCO ಮತ್ತು Ranhill ನ SPV ಯೋಜನೆ ಅನುಷ್ಠಾನಕ್ಕೆ ಆಯ್ಕೆಯಾಗಿ ಸಹಿ ಮಾಡಿತು. ಆಯ್ಕೆಯಾದ ಸಂಸ್ಥೆಯು, ಯೋಜನಾಭಿವೃದ್ಧಿ ವೆಚ್ಚ ಮತ್ತು ಸಫಲತೆಯ ಶುಲ್ಕವನ್ನು ನೀಡಲು ಬದ್ಧವಾಗಿರಬೇಕಾಗಿದ್ದು, ಸಂಸ್ಥೆ ನವೆಂಬರ್ 2008 ರಿಂದ ಕಾರ್ಯಾರಂಭ ಮಾಡಿತು.

**4. ಅಭಿವೃದ್ಧಿ ಒಪ್ಪಂದ :**

ಒಪ್ಪಂದವು ಸಹಭಾಗಿಗಳ ಜವಾಬ್ದಾರಿಯನ್ನು ಸ್ಪಷ್ಟವಾಗಿ ತಿಳಿಸಿದ್ದು, ಬಳಕೆದಾರರ ಶುಲ್ಕವು ಹೆಚ್.ಡಿ.ಎ. ಯಿಂದ ನಿರ್ಧರಿಸಲ್ಪಟ್ಟಿತು. ಎಸ್.ಪಿ.ವಿ.ಯಿಂದ ಸಂಗ್ರಹಿಸಲ್ಪಡುತ್ತದೆ. ಯೋಜನೆಯು (BOT) ರಚನೆ–ನಿರ್ವಹಣೆ–ವರ್ಗಾವಣೆ ಮಾದರಿಯದಾಗಿದ್ದು, HDA ತನ್ನ ನೀರು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಸೌಕರ್ಯಗಳನ್ನು SPV ಗೆ 25 ವರ್ಷಕ್ಕೆ ವರ್ಗಾಯಿಸಿತು. ಇದಕ್ಕೆ ಪರ್ಯಾಯವಾಗಿ SPV ವಾರ್ಷಿಕ ರಹದಾರಿ ಶುಲ್ಕವನ್ನು ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 221 ಕೆಲಸಗಾರನಿಗೆ ನಿರ್ವಹಣೆ ಮತ್ತು ವ್ಯವಸ್ಥಾಪಕನೆ (O&M) ನಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ನಿಯೋಜಿಸಿಕೊಳ್ಳುವುದು.

**5. ಕೆಲಸದ ವ್ಯಾಪ್ತಿ :**



ಅಸ್ತಿತ್ವದಲ್ಲಿರುವ ರಚನೆಗಳ ಜೊತೆಗೆ ಹೊಸ ಭೌತಿಕ ರಚನೆಗಳನ್ನು ನಿರ್ಮಿಸಿ ನಿರ್ವಹಿಸುವ ಜವಾಬ್ದಾರಿ SPV ಯದಾಗಿದೆ. ಇದರೊಟ್ಟಿಗೆ,

- ನೀರಿನ ಮೂಲ ಮತ್ತು ಉತ್ಪಾದನೆಯ ನಿರ್ವಹಣೆ.
- ಅಸ್ತಿತ್ವದಲ್ಲಿರುವ ಸಂಗ್ರಹಣಾಗಾರಗಳ ಉನ್ನತೀಕರಣ.
- ಹೊಸ ನೀರು ಸಂಗ್ರಹಣಾಗಾರಗಳ ರಚನೆ.
- ಸಂಪರ್ಕ ಜಾಲದ ರಚನೆ.
- ಮೀಟರ್‌ಗಳ ಅಳವಡಿಕೆ.
- ಶುಲ್ಕ ವಿಧಿಸುವ ಮತ್ತು ಸಂಗ್ರಹಿಸುವ ಕಾರ್ಯ.

**ಮೂಲ ಬಂಡವಾಳಕ್ಕೆ ಸಂಬಂಧಿಸಿದಂತೆ ಸಾಧ್ಯತೆಗಳು :**

- ಮೂಲದಲ್ಲಿಯೇ 250 ಲಕ್ಷ ಲೀಟರ್ ಸಾಮರ್ಥ್ಯದ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸುವುದು.
- ಹೊಸ ವ್ಯವಸ್ಥೆಯ ನಿರ್ವಹಣೆ.
- ಪಂಪಿಂಗ್ ಕೇಂದ್ರದ ನಿರ್ಮಾಣ.
- ಹೊಸ ಸಂಪರ್ಕಜಾಲಗಳ ನಿರ್ವಹಣೆ.

  ನೀರು ಸಂಸ್ಕರಣಾ ಘಟಕವು *HDA* ಯಿಂದ ನಿರ್ಮಿಸಲ್ಪಟ್ಟ ನಂತರ SPV ಗೆ ವರ್ಗಾವಣೆಗೊಳ್ಳುತ್ತದೆ.

**6. ಹಣಕಾಸು – ಯೋಜನೆ :**

ಯೋಜನಾ ಸಹಭಾಗಿಗಳು ಹೊಸ ಸಾರ್ವಜನಿಕ ಆಸ್ತಿ ರಚನೆಯಲ್ಲಿ ತಮ್ಮ ಪಾಲನ್ನು ವ್ಯಯಿಸುತ್ತವೆ. ಅಸ್ತಿತ್ವದಲ್ಲಿರುವ 200 ಲಕ್ಷ ಲೀಟರ್ ಸಾಮರ್ಥ್ಯದ ಸಂಸ್ಕರಣಾ ಘಟಕವನ್ನು 250 ಲಕ್ಷ ಲೀಟರ್‌ಗೆ ಉನ್ನತೀಕರಿಸುವಲ್ಲಿ SPV ಗೆ HDA ಯು ತನ್ನ ಪಾಲಾದ 50% ಅಂದರೆ ರೂ. 5 ಲಕ್ಷವನ್ನು ಒದಗಿಸಲು ಸಮ್ಮತಿಸಿತು. 250 ಲೀಟರ್ ಸಾಮರ್ಥ್ಯದ ಹೊಸ ನೀರು ಸಂಗ್ರಹಣಾಗಾರವನ್ನು ನಿರ್ಮಿಸಲು SPV-100 ಕೋಟಿ ರೂ.ಗಳನ್ನು ಹೊಸ ಸಂಪರ್ಕ ಜಾಲದ ಅಭಿವೃದ್ಧಿಗಾಗಿ HDA ಯು ರೂ. 130 ಕೋಟಿ ರೂ.ಗಳನ್ನು ವ್ಯಯಿಸಲು ಒಪ್ಪಿದವು. SPV ಯು ತಾನು ವ್ಯಯಿಸಿದ ಹಣವನ್ನು ಕೈಗಾರಿಕೆಗಳ ಬಳಕೆದಾರರ ಶುಲ್ಕದಿಂದ ಹಾಗೂ ನಗರಸಭೆಗೆ ಪೂರೈಸುವ ಸಗಟು ನೀರಿನಿಂದ ಸಂಗ್ರಹಿಸಬೇಕಾಗಿದೆ.

**7. ಬಳಕೆದಾರರ ಶುಲ್ಕ :**

HDA ಯಿಂದ ನಿರ್ಮಿಸಲಾಗಿರುವ ನೀರಿನ ಸಂಪರ್ಕ ಜಾಲಗಳಿಗೆ ಮೀಟರ್ ಅಳವಡಿಸುವ ಹಾಗೂ ನೀರು ಪೂರೈಕೆ ಮಾಡಿದ ಶುಲ್ಕವನ್ನು ಮಾತ್ರ SPV ಸಂಗ್ರಹಿಸಬಹುದು. ಇದರಂತೆ ಕೈಗಾರಿಕೆಗೆ ಪ್ರತಿ ಕೆ.ಎಲ್. ನೀರಿಗೆ ರೂ. 11 ರಂತೆ, ವಾಣಿಜ್ಯ ಚಟುವಟಿಕೆಗಳಿಗೆ ರೂ. 09 ರಂತೆ ಗೃಹಕೃತ್ಯಗಳಿಗೆ ರೂ. 05 ರಂತೆ ದರಪಟ್ಟಿ ನಿಗಧಿಯಾಗಿದೆ. ಮೀಟರೀಕರಣವಾಗದ ಸಂಪರ್ಕಗಳು ತಿಂಗಳಿಗೆ ರೂ. 60/– ನ್ನು ಪಾವತಿಸಬೇಕು. ಸಗಟು ನೀರನ್ನು ನಗರಸಭೆಯಿಂದ ರೂ. 3/– ರಂತೆ SPV ಖರೀದಿಸುತ್ತದೆ. ಐದು ವರ್ಷಗಳ ನಂತರ ಪ್ರತೀ ವರ್ಷ SPV ಯು ಕೆ.ಎಲ್.ನೀರಿಗೆ ರೂ. 3 ರಂತೆ ದರ ಏರಿಸಬಹುದಾಗಿದೆ.

**8. ಯೋಜನೆ ಜಾರಿಗೊಳಿಸುವ ಪ್ರಕ್ರಿಯೆ :**

ನವೆಂಬರ್ 2008 ರಿಂದ ಕಾರ್ಯಾರಂಭಿಸಿದ SPV ಯು

- ನೀರಿನ ಸಂಸ್ಕರಣಾ ಘಟಕವನ್ನು ಉನ್ನತೀಕರಿಸಿದೆ.
- ಪಂಪಿಂಗ್ ಕೇಂದ್ರದ ಸುಧಾರಣೆ.
- ಸೋರಿಕೆಗಳ ಪತ್ತೆ, ಅಕ್ರಮ ಸಂಪರ್ಕಗಳು 24% ರಿಂದ 16% ಕ್ಕೆ ಇಳಿಕೆ.
- 221–ಕಾರ್ಮಿಕರನ್ನು ಹೆಚ್.ಡಿ.ಎ. ಯಿಂದ ಪಡೆದು ವಿಶೇಷ ಕೌಶಲ್ಯಾಭಿವೃದ್ಧಿ ಕೈಗೊಂಡು ಸಾಮರ್ಥ್ಯಕ್ಕನುಗುಣವಾಗಿ ಜವಾಬ್ದಾರಿ ಹಂಚಿಕೆ.
- ಶುಲ್ಕ ನಿಗಧಿ ಮತ್ತು ಸಂಗ್ರಹಣೆಯಲ್ಲಿ ಪ್ರಗತಿ.

- ಕೈಗಾರಿಕೆಗಳಿಗೆ ಸಮರ್ಪಕ ನೀರು ಪೂರೈಕೆಯಾಗುತ್ತಿದೆ.
- ಹೊಸ ಸಂಸ್ಕರಣಾ ಘಟಕದ ಕಾರ್ಯವು 18 ತಿಂಗಳೊಳಗಾಗಿ ಪೂರ್ಣವಾಗಲಿದ್ದು, ಪ್ರಸ್ತುತ ಶೇ. 60ರಷ್ಟು ಕೆಲಸ ಸಂಪೂರ್ಣವಾಗಿದೆ.
- ಹೆಚ್.ಡಿ.ಎ. ಸಂಪರ್ಕ ಜಾಲದ ಕಾರ್ಯವು ಶೇ. 60 ರಷ್ಟು ಮುಗಿದಿದೆ.
- ಹೂಗ್ಲಿ ನದಿಯಿಂದ ಸಂಗ್ರಹಿಸಲ್ಪಟ್ಟ ನೀರು 100 ಲಕ್ಷ ಲೀಟರ್ ಸಾಮರ್ಥ್ಯದ 3 ಜಲ ಸಂಗ್ರಹ ತೊಟ್ಟಿಗಳಲ್ಲಿ ಸಂಗ್ರಹಣೆಗೊಂಡು 2000 ಲಕ್ಷ ಲೀಟರ್ ಸಾಮರ್ಥ್ಯದ ಕ್ಷಾರ ಸಮತೆಯ ಘಟಕಕ್ಕೂ ನಂತರ ಸಂಸ್ಕರಣಾ ಘಟಕಕ್ಕೂ ಸಾಗಿಸಿ ನೀರು ವಿತರಣಾ ಸಂಗ್ರಹಕಗಳಿಂದ ಗ್ರಾಹಕರನ್ನು ತಲುಪುತ್ತದೆ.

**9. ಸಂಕಷ್ಟಗಳು ಹಾಗೂ ಅಡೆ-ತಡೆಗಳು :**

- ಕೈಗಾರಿಕೆಗಳಿಂದ ಬೇಡಿಕೆ ಹಾಗೂ ಶುಲ್ಕ ಸಂಗ್ರಹಣೆಯಲ್ಲಿ ಖಾಸಗಿ ನಿರ್ವಾಹಕರು ಸಂಕಷ್ಟ ಎದುರಿಸುತ್ತಿದ್ದಾರೆ.
- ಬಾಹ್ಯ ಮತ್ತು ಆಂತರಿಕ ವಾತಾವರಣದ ಮೇಲೆ ಕೈಗಾರಿಕೆಗಳ ಅಸ್ತಿತ್ವವಿದ್ದು ಬೇಡಿಕೆಯು ಅಸ್ಥಿರವಾಗಿದೆ.
- ಕಾರ್ಮಿಕರು 6ನೇ ವೇತನ ಆಯೋಗದಂತೆ ವೇತನದ ಪರಿಷ್ಕರಣೆಗೆ ಆಗ್ರಹಿಸಿದ್ದು, ನಿರ್ವಾಹಕರಿಗೆ ಸಮಸ್ಯೆಯಾಗಿದೆ.
- ಹೆಚ್.ಡಿ.ಎ. ಯು ಭೂಮಿಯ ಗುತ್ತಿಗೆ ಒಪ್ಪಂದಕ್ಕೆ ಸಹಿಮಾಡದೆ ಸಹಿ ಹಾಕದಿರುವುದು ಯೋಜನೆಯ ವಿಳಂಬಕ್ಕೆ ಕಾರಣವಾಗಿದೆ.
- ಹೆಚ್.ಡಿ.ಎ. ಯ ಮುಖ್ಯಸ್ಥರು ರಾಜಕೀಯ ಮುಖಂಡರಾಗಿದ್ದು, ನಿರ್ವಾಹಕ ರಾಜಕೀಯ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

**10. ಯೋಜನೆಯ ಪರಿಣಾಮ ಮತ್ತು ಫಲಶೃತಿ :**

- ➢ ಹಲ್ದಿಯಾ ಯೋಜನೆಯಲ್ಲಿ ನಿರ್ವಾಹಕ ತನ್ನ ಮೂಲಬಂಡವಾಳವನ್ನು 25 ವರ್ಷಗಳಲ್ಲಿ ಬಳಕೆದಾರರ ಶುಲ್ಕದ ಮೂಲಕ ಸಂಗ್ರಹಿಸಬೇಕಾಗಿದ್ದು, ಸರ್ಕಾರಕ್ಕೆ ವಾರ್ಷಿಕ ರಹದಾರಿ ಶುಲ್ಕವಾಗಿ ನಿಗಧಿತ ಮೊತ್ತವನ್ನು 25 ವರ್ಷಗಳವರೆಗೆ ನೀಡಬೇಕಾಗಿದೆ.
- ➢ ನೀರಿನ ಪ್ರಮಾಣ ಮತ್ತು ಗುಣಮಟ್ಟದಲ್ಲಿ ಸುಧಾರಣೆಯಾಗಿದೆ. ಕೈಗಾರಿಕೆಗಳಿಗೆ 21 ಗುಂಟೆ ಹಾಗೂ ವಾಣಿಜ್ಯ ಮತ್ತು ಗೃಹಕೃತ್ಯಗಳಿಗೆ 7 ಘಂಟೆಗಳು ನೀರು ಪೂರೈಕೆಯಾಗುತ್ತಿದೆ.
- ➢ ಶುಲ್ಕ ಸಂಗ್ರಹಣೆಯು ರೂ. 2.2 ಕೋಟಿಯಿಂದ 3.2 ಕೋಟಿಗೆ ಹೆಚ್ಚಿದ್ದು ಅಕ್ರಮ ಸಂಪರ್ಕಗಳು 24% ರಿಂದ 16% ಕ್ಕೆ ಇಳಿದಿದೆ.
- ➢ ನಿಗಧಿತ ಅವಧಿಯಲ್ಲಿಯೇ ಪೂರ್ಣವಾಗುತ್ತಿರುವ ಯೋಜನೆ ಇದಾಗಿದೆ.

**11. ಯೋಜನೆಯ ಅನುಕರಣೆಗಾಗಿ ಕಲಿತ ಪಾಠಗಳು :**

- ➢ ಯೋಜನೆ ರೂಪುರೇಷೆ ಮತ್ತು ಸಹಭಾಗಿಗಳ ನಡುವೆ ಹೊಂದಾಣಿಕೆ ಇದ್ದರೆ ಖಾ.ಸಾ.ಸ. ಅನುಷ್ಠಾನ ಸುಲಭವಾಗುತ್ತದೆ.
- ➢ ಯೋಜನೆ ರಚನಾ ಶುಲ್ಕವನ್ನು ಬಿಡ್ಡರ್‌ಗಳಿಂದ ವಸೂಲಿ ಮಾಡಿದ್ದು, ಬಿಡ್ಡಿಂಗ್ ನಂತರ ಯೋಜನೆಯಲ್ಲಿ ಸಕ್ರಿಯವಾಗಿರಲು ಸಹಕಾರಿಯಾಗಿದೆ ಹಾಗೂ ಖಾಸಗಿ, ಸಾರ್ವಜನಿಕ

ತಾಂತ್ರಿಕ ಸಹಕಾರದಿಂದ ಒಪ್ಪಂದ, ಬೇಗ ಜಾರಿಗೆ ಬರಲು ನೆರವಾಯಿತು.

- ಬಳಕೆದಾರರ ಶುಲ್ಕದಿಂದ ಖಾಸಗಿಯವರು ತಮ್ಮ ಮೂಲ ಬಂಡವಾಳವನ್ನು ಹಿಂಪಡೆಯಬೇಕಾಗಿರುವುದರಿಂದ ಶುಲ್ಕ ಸಂಗ್ರಹ ಉತ್ತಮವಾಗಿದೆ.
- ಸಹಭಾಗಿಗಳ ಬದ್ಧತೆಯ ಮೇಲೆ ಯೋಜನೆಯ ಯಶಸ್ಸು ನೆಲೆಸಿದೆ.

**ಪ್ರಶ್ನೆಗಳು :**

1. 'ಸಾಖಾಸ-ಹೊ&ಅ' ವಿಧಾನವನ್ನು ಅನುಸರಿಸಲು ಸ್ಥಳೀಯ ಸಂಸ್ಥೆಯ ಹಿನ್ನಲೆ ಏನಾಗಿತ್ತು?
2. ಯಾವ ಕಾರಣಕ್ಕಾಗಿ 'BOT' ಮಾದರಿಯನ್ನು ಆಯ್ಕೆ ಮಾಡಲಾಯಿತು?
3. ಬಿಡ್ಡಿಂಗ್ ನಡೆದ ಮೂರು ಹಂತಗಳು ಯಾವುವು?
4. ಅಭಿವೃದ್ಧಿಯ ಒಪ್ಪಂದದ ಮುಖ್ಯ ಅಂಶಗಳಾವುವು?
5. ಯಾವ ಕಾರ್ಯವ್ಯಾಪ್ತಿಗಳನ್ನು ಒಳಗೊಂಡಿದ್ದ ಯೋಜನೆ?
6. ಹಣಕಾಸಿನ ನಿರ್ವಹಣೆಯ ಮುಖ್ಯ ಅಂಶಗಳಾವುವು?
7. ಯೋಜನೆಯನ್ನು ಜಾರಿಗೊಳಿಸುವ ವಿಧಾನಗಳಾವುವು?
8. 'ಸಾಖಾಮ-ಹೊಅನು' ಮಾರ್ಗೋಪಾಯದಲ್ಲಿ ಅನುಭವಿಸಿದ ಸಂಕಷ್ಟ ಮತ್ತು ಅಡೆ-ತಡೆಗಳಾವುವು?
9. ಯೋಜನೆಯ ಫಲಶೃತಿ ಮತ್ತು ಪರಿಣಾಮಗಳಾವುವು?
10. ಮಾದರಿಯ ಪುನರ್ಬಳಕೆಗೆ ಕಲಿತ ಪಾಠಗಳಾವುವು?

## 5.5.4. ಸಾರ್ವಜನಕರ ಸಹಭಾಗಿತ್ವದಲ್ಲಿ ಒಳಚರಂಡಿ ಕೊಳಚೆ ನಿರ್ವಹಣೆ ಆಲಂದೂರು, ತಮಿಳುನಾಡು

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಚೆನ್ನೈನ ಉಪನಗರವಾದ ಆಲಂದೂರು ತಮಿಳುನಾಡಿನ ಕಂಚಿಪುರಂ ಜಿಲ್ಲೆಯಲ್ಲಿದ್ದು, ರಾಜ್ಯದ ಇತರೇ ನಗರಗಳಿಗೆ ಹೋಲಿಸಿದರೆ ಮೂಲಸೌಕರ್ಯಗಳಿಂದ ವಂಚಿತವಾಗಿದ್ದು ಸ್ಪಷ್ಟವಾಗುತಿತ್ತು. ಆದ್ದರಿಂದ 1996 ರಲ್ಲಿ ಆಲಂದೂರು ನಗರಸಭೆಯ ಅಧ್ಯಕ್ಷರಾಗಿದ್ದ ಶ್ರೀ ಆರ್.ಸಿ. ಭಾರತಿಯವರು ಜನರಿಗೆ ಉತತಮ ಸೇವೆಯನ್ನು ಸಾರ್ವಜನಕ ಖಾಸಗೀ ಸಹಭಾಗಿತ್ವ (PPP) ಮಾದರಿಯಲ್ಲಿ ಒದಗಿಸಲು ನಿರ್ಮಾಣ–ನಿರ್ವಹಣೆ–ವರ್ಗಾವಣೆ (BOT) ವಿಧಾನವನ್ನು ಆಯ್ಕೆ ಮಾಡಿ ಒಪ್ಪಂದವನ್ನು ಸಿದ್ದಪಡಿಸಿದರು. ಸೇವೆಗಾಗಿ ಶುಲ್ಕ ನೀಡುವ, ಸಾಮಾಜಿಕ ಸ್ವೀಕರಿಸುವಿಗೆ ಹಾಗೂ ಯೋಜನೆಯ ಆರ್ಥಿಕ ಸಾಮರ್ಥ್ಯದ ಸಮೀಕ್ಷೆ ಕೈಗೊಂಡು ನಂತರ ನಗರಸಭೆ ಹಾಗೂ ಖಾಸಗಿಯವರು (PPP) ಒಪ್ಪಂದದಕ್ಕೆ ಸಹಿ ಹಾಕಿದರು.

**ನಗರ – ನಕ್ಷೆ :**

2001ರ ಜನಗಣತಿಯಂತೆ ನಗರವು 1.45 ಲಕ್ಷ ಜನಸಂಖ್ಯೆ ಹೊಂದಿದ್ದು, 1980–90ರ ದಶಕದಲ್ಲಿ ಚೆನ್ನೈನಲ್ಲಿ ಉಂಟಾದ ನಗರೀಕರಣ ಆಲಂದೂರನ್ನು ಉಪನಗರವಾಗಿ ಪರಿವರ್ತಿಸಿತು. ಹಾಗೂ ನಗರಕ್ಕೆ ಆಯ್ಕೆ ದರ್ಜೆ ನಗರಸಭೆ ಸ್ಥಾನಮಾನ ದೊರೆತಿದೆ.

**ಯೋಜನೆ ಆರಂಭದ ಮುಂಚಿನ ಸ್ಥಿತಿ :**

ನಗರ ಸಮರ್ಪಕ ಒಳ ಚರಂಡಿ ವ್ಯವಸ್ಥೆಯನ್ನು ಹೊಂದಿರದೆ, ಇದ್ದುದರಿಂದ ಕೊಳಚೆ ಸಂಗ್ರಹಣಾ ತೊಟ್ಟಿಗಳಿಂದ ಹೆಚ್ಚುವರಿಯಾಗಿ ಹರಿದ ನೀರು, ಸೊಳ್ಳೆಗಳನ್ನು ಪೋಷಿಸುವ ಹಾಗೂ ಖಾಯಿಲೆ ಹರಡುವ ಕಾರ್ಯ ಆರಂಭಿಸಿದ್ದರಿಂದ ಅನಾರೋಗ್ಯ ಉಲ್ಬಣವಾಗಿದ್ದಲ್ಲದೆ ಅಂತರ್ಜಲ ಕಲುಷಿತವಾಗಲಾರಂಭಿಸಿತು.

**ಯೋಜನೆ ಆರಂಭಿಸಲು ಪ್ರೇರಣೆ :**

ಅಧಿಕ ಜನಸಂದಣಿ ಹಾಗೂ ನಗರದ ಮೂಲ ಸೌಕರ್ಯಗಳ ಮೇಲೆ ಸೃಷ್ಟಿಯಾದ ಅಧಿಕ ಒತ್ತಡದಿಂದಾಗಿ, ಹಾಗೂ ನಗರ ಸಭೆಯ ದುರ್ಬಲ ಆರ್ಥಿಕ ಸ್ಥಿತಿಯಿಂದಾಗಿ ಸಮಸ್ಯೆ, ಬೃಹತ್ತಾಗಿ ಪರಿಣಮಿಸಿತು. ಹೊಸ ಮಾದರಿಯ ಶೋಧದಲ್ಲಿದ ನಗರಸಭೆಗೆ PPP ಯು ಉತ್ತಮ ವಿಧಾನವೆನಸಲು ನಾಗರೀಕರು ರಾಜಕಾರಣಿಗಳು ಬೆಂಬಲ ಸೂಚಿಸಿದರು. ಹಾಗೂ ನಗರ ಅಭಿವೃದ್ಧಿಗೆ ಖಾಸಗೀ ಸಂಸ್ಥೆ ಮುಂದೆ ಬಂದದ್ದರಿಂದ ಸರ್ಕಾರ ಅಲ್ಪಪ್ರಮಾಣದ ಅನುದಾನ ನೀಡಿ ಯೋಜನೆಗೆ ಉತ್ತೇಜನ ನೀಡಿತು.

**ಯೋಜನೆ ವಿವರ :**

ಉಪ ಹಾಗೂ ಮುಖ್ಯ ಒಳ ಚರಂಡಿ ಕಾಲುವೆಗಳನ್ನು ಪರಸ್ಪರ ಸಂಪರ್ಕಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಇದರೊಟ್ಟಿಗೆ

- 120 ಕಿ.ಮೀ. ಉದ್ದ ಉಪ ಕಾಲುವೆಗಳ ಮೂಲಕ ಮುಖ್ಯ ಕೊಳಚೆ ಕಾಲುವೆಗೆ ಭೂಮಿಯ ಒಳಭಾಗದಿಂದ ಸಂಪರ್ಕ ಕಲ್ಪಿಸುವುದು.
- ಕೊಳಚೆ ನೀರನ್ನು ಮೇಲೆತ್ತುವ ಪಂಪಿಂಗ್ ಕೇಂದ್ರದ ನಿರ್ಮಾಣ.
- ಕೊಳಚೆ ನೀರಿನ ಸಂಸ್ಕರಣಾ ಘಟಕದ ರಚನೆ.
- ಚಿಕಿತ್ಸಾ ಘಟಕವು BOT ನಿರ್ಮಾಣ-ನಿರ್ವಹಣೆ-ವರ್ಗಾವಣೆ ಮಾದರಿಯದಾಗಿದ್ದು, 14 ವರ್ಷಗಳ ಕಾಲಾವಧಿ ಖಾಸಗಿಯವರಿಗೆ ನೀಡಲಾಗಿದ್ದು, ಕೊಳಚೆ ನೀರಿನ ಚಿಕಿತ್ಸಾ ಗುಣಮಟ್ಟಕ್ಕನುಗುಣವಾಗಿ ನಗರಸಭೆಯು ನಿಗದಿತ ಹಣವನ್ನು ಖಾಸಗಿಯವರಿಗೆ ಪಾವತಿಸುತ್ತದೆ.

**ಯೋಜನೆಯ ಘಟಕಗಳು**

| **ಯೋಜನೆ** | **ಘಟಕ** |
|---|---|
| ಉಪ ಕಾಲುವೆಗಳು | 101 ಕಿ.ಮೀ. |
| ಮುಖ್ಯ ಕಾಲುವೆ | 19 ಕಿ.ಮೀ. |
| ಮುಖ್ಯ ಪಂಪಿಂಗ್ ಸಾಮರ್ಥ್ಯ (800 mm) | 5.5 ಕಿ.ಮೀ. |
| ಪಂಪಿಂಗ್ ಉಪಕರಣಗಳ ಕೇಂದ್ರಗಳು | 5 |
| ಕೊಳಚೆ ನೀರು ಸಂಸ್ಕರಣಾ ಘಟಕ | 2 (120 ಲಕ್ಷ ಲೀಟರ್ ಸಾಮರ್ಥ್ಯ) |

ಅ. ವಿಶ್ವಬ್ಯಾಂಕ್ ಖಾಸಗೀ ಟೆಂಡರ್ ಕರೆಯುವುದಕ್ಕೆ ಮುಂಚೆ ಸಾರ್ವಜನಕರ ಭಾಗವಹಿಸುವಿಕೆಯನ್ನು ಗುರುತಿಸಲು ಪ್ರತಿ ಮನೆಯಿಂದ ರೂ. 5,000/- ಗಳನ್ನು 10,000 ಸಂಗ್ರಹಿಸಲು ತಿಳಿಸಿತು.

ಆ. ನಗರ ಸಭಾಧ್ಯಕ್ಷರು ಜನರನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಇ. ಪಂಪಿಂಗ್ ಮನೆ ಕೊಳಚೆ ನೀರು ಸಂಸ್ಕರಣಾ ಘಟಕದ ನಿರ್ಮಾಣಕ್ಕಾಗಿ ಭೂಮಿಯನ್ನು ಆಕ್ರಮಿಸಿಕೊಂಡಿತು. ಜನರಿಂದ ಹಣವನ್ನು ವಾಸಸ್ಥಳವನ್ನಾಧರಿಸಿ ಎರಡು ಹಂತಗಳಲ್ಲಿ ಸಂಗ್ರಹಿಸಿತು.

**ಸಾರ್ವಜನಕರಿಂದ ಹಣ ಸಂಗ್ರಹಣಾ ವಿಧಾನ**

| ಸ್ಥಳ | ಒಂದು ಬಾರಿ (ಒಂದು ಘಟಕಕ್ಕೆ) | ತಿಂಗಳ ಶುಲ್ಕ (ಪ್ರತೀ ಘಟಕ) |
|---|---|---|
| ವಾಸ ಸ್ಥಳ | 5000 | 150 |
| ವಾಣಿಜ್ಯ ಉದ್ದೇಶ | 10000 | 450 |
| ಕೈಗಾರಿಕಾ ಉದ್ದೇಶ | 10000 | 750 |

**ಹಣ ಸಂಗ್ರಹಿಸಲು ಬಳಸಿದ ತಂತ್ರಗಾರಿಕೆ :**

ಅ. ಎಲ್ಲಾ ರಜಾದಿನಗಳಲ್ಲೂ ಸ್ಥಳೀಯರೊಂದಿಗೆ ಚರ್ಚೆಗಳನ್ನು ಏರ್ಪಡಿಸಿ ಜನರನ್ನು ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲಾಯಿತು.

ಆ. ವಾಸಸ್ಥಳಗಳ ಸ್ಥಳೀಯ ನಾಯಕರು ನರ್ವಾಹಕರಿಗೆ ಯೋಜನೆಯ ಮಹತ್ವ ತಿಳಿಸಿ ಹೇಳಿದ್ದು ಹಾಗೂ ಸಭೆಗಳ ಫಲಶೃತಿಯಾಗಿ ಸ್ವಯಿಚ್ಛೆಯಿಂದ ಜನ ಹಣ ಪಾವತಿಸಿದರು.

ಇ. ದೂರದರ್ಶನ, ದಿನಪತ್ರಿಕೆ ಹಾಗೂ ಕರಪತ್ರಗಳ ಮೂಲಕ ಜನರಿಗೆ ತಿಳುವಳಿಕೆ ಒದಗಿಸಲಾಯಿತು.

ಈ. ನಗರದ ವಿವಿಧೆಡೆ ಹಣ ಸಂಗ್ರಹಣ ಕೇಂದ್ರವನ್ನು ತೆರೆಯಲಾಯಿತು ಹಾಗೂ ಮನೆ ಭೇಟಿ ನೀಡಲು ಹಣ ಸಂಗ್ರಹಿಸಲಾಯಿತು.

**ಸಂಪನ್ಮೂಲದ ಕ್ರೋಢೀಕರಣ :**

ಅ. ಜನರಿಂದ ಯೋಜನೆಗಾಗಿ ಹಣವನ್ನು ಸಂಗ್ರಹಿಸಿದ್ದು, ಯೋಜನೆಯ ವೈಶಿಷ್ಟ್ಯತೆಯಾಗಿದೆ. ಜನರು ಯೋಜನೆಯ ಕರಡು ರಚನೆಯಿಂದ – ಯೋಜನೆಯ ಪರಿಶೀಲನೆ ಅವಧಿಯವರೆಗೂ–ಭಾಗಿಗಳಾಗಿದ್ದು–ಜನರಲ್ಲಿ–ಒಡೆತನದ ಮನೋಭಾವ ಮೂಡಿಸಿದಲ್ಲದೆ, ನಗರಸಭೆ ತನ್ನ ಆರ್ಥಿಕ ಸಮಸ್ಯೆಯಿಂದ ಹೊರಬಂದಿತು.

ಆ. ಯೋಜನೆಗೆ ವಿವಿಧ ಮೂಲಗಳಿಂದ ಸಾಲ ಮತ್ತು ಅನುದಾನ ದೊರೆಯಿತು. ಯೋಜನೆಗೆ ರೂ. 34 ಕೋಟಿದಾಗಿದ್ದು, ಮೂಲಗಳ ವಿವರ ಇಂತಿದೆ.

**ಹಣದ ಮೂಲಗಳು :**

| **ಮೂಲಗಳು** | **ಕೊಡುಗೆ (ಕೋಟಿ)** |
|---|---|
| ರಾಜ್ಯ ಸರ್ಕಾರ | 3.00 |
| TUFIDCO ಸಾಲ | 16.00 |
| TUFIDCO ಅನುದಾನ | 1.00 |
| ಸಾರ್ವಜನಕ ನಗದು ಹೂಡಿಕೆಗೆ ಬಡ್ಡಿ | 2.00 |
| ಸಾರ್ವಜನಕ ಕೊಡುಗೆ | 8.00 |
| TNUIFSL ಸಾಲ | 4.00 |
| **ಒಟ್ಟು** | **34.00** |

**ಯೋಜನೆಯ – ಸಹಭಾಗಿಗಳ ವಿವರ :**

- ವಿಶ್ವದ ಬ್ಯಾಂಕಿನ ಆರ್ಥಿಕ ಅಂಗ ಸಂಸ್ಥೆಗಳಿಂದ ಸಹಾಯ.
- ತಮಿಳುನಾಡು ಅಬ್ರನ್ ಫೈನಾನ್ಸ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಡೆವೆಲಪರ್‌ಮೆಂಟ್ ಕಾರ್ಪೋರೇಷನ್ (TUFIDCO)
- ತಮಿಳುನಾಡು ಅಬ್ರನ್ ಡೆವೆಲಪ್‌ಮೆಂಟ್ ಫಂಡ್.
- ತಮಿಳುನಾಡು ಅಬ್ರನ್ ಫೈನಾನ್ಸ್ ಇನ್ಫ್ರಾಸ್ಟ್ರಕ್ಚರ್ ಫೈನಾನ್ಸ್ ಸರ್ವಿಸ್ ಲಿಮಿಟೆಡ್.
- ನಗರವಾಸಿಗಳು.

**ಸಮಸ್ಯೆಗಳು :**

- ಯೋಜನೆಯ ಅಗತ್ಯತೆಯನ್ನು ನಾಗರೀಕರಿಗೆ ಮನವರಿಕೆ ಮಾಡಿ, ಜನರಿಂದ ಹಣ ಸಂಗ್ರಹಿಸಲು ಹೆಚ್ಚು ಸಮಯ ಹಾಗೂ ಹಣ ವ್ಯಯವಾಯಿತು.
- ಪಂಪಿಂಗ್ ಮನೆ ನಿರ್ಮಾಣಕ್ಕೆ ಸುತ್ತಮುತ್ತಲ ನಿವಾಸಿಗಳ ಪ್ರತಿರೋಧ.
- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ – ರಸ್ತೆಯನ್ನು ಒಡೆದು ಒಳಚರಂಡಿ ನಿರ್ಮಿಸಲು ಅನುಮತಿ ಪಡೆಯುವಲ್ಲಿ ವಿಳಂಭ.
- ಸಡಿಲ ಭೂಮಿ – ಅಂತರ್ಜಲದ ಮೇಲ್ಮಟ್ಟ ಯೋಜನೆಯ ಜಾರಿಗೆ ವಿಳಂಭವಾಯಿತು.

**ಯೋಜನೆಯ ಜಾರಿ :**

ನಗರಸಭೆ ಅಧ್ಯಕ್ಷರು ಹಾಗೂ ಅಧಿಕಾರಿ, ಸಿಬ್ಬಂದಿಗಳ ಕಾರ್ಯಾಧ್ಯಕ್ಷತೆಯಿಂದ ಎದುರಾದ ಅಡೆ-ತಡೆಗಳನ್ನು ನಿವಾರಿಸಿ ಯಶಸ್ವಿ ಯೋಜನೆಯಾಗಿ ರೂಪಿಸಲು ಸಾಧ್ಯವಾಯಿತು.

**ಮೊದಲ ಹಂತದ ಯೋಜನೆಯ ವಿವಿಧ ಸ್ತರಗಳು**

| **ಹಂತಗಳು** | **ಇಂದಿನ ಸ್ಥಿತಿ** |
|---|---|
| ಯೋಜನೆ ಆರಂಭವಾದ ದಿನ | 01 ಮಾರ್ಚ್ 2000 |
| ಕೊಳಚೆ ನೀರು-ಪೈಪುಗಳ ಖರೀದಿ | ಮುಗಿದಿದೆ |
| ಮುಖ್ಯ ಕಾಲುವೆ ನಿರ್ಮಾಣ | ಮುಗಿದಿದೆ |
| ಪಂಪಿಂಗ್ ಮನೆ | ಮುಗಿದಿದೆ |
| ಪಂಪಿಂಗ್ ಯಂತ್ರ ಅಳವಡಿಕೆ | ಮುಗಿದಿದೆ |
| ಕೊಳಚೆ ನೀರಿನ ಚಿಕಿತ್ಸಾ ಘಟಕ | ಮುಗಿದಿದೆ |
| ಉಪ ಮತ್ತು ಮುಖ್ಯ ಕಾಲುವೆಯಲ್ಲಿ ನೀರಿನ ಮುಕ್ತ ಚಲನೆ ಪರೀಕ್ಷೆ | ಪರಿಶೀಲನೆಯಲ್ಲಿದೆ |
| ವಾಸಸ್ಥಳದಿಂದ ಉಪ ಕಾಲುವೆಗಳಿಗೆ ಸಂಪರ್ಕ | ಪ್ರಗತಿಯಲ್ಲಿದೆ. |

**ಫಲಶೃತಿ :**

1. **ಮೂಲ ಸೌಕರ್ಯಾಭಿವೃದ್ಧಿ :** ಉತ್ತಮ ಒಳಚರಂಡಿ ವ್ಯವಸ್ಥೆ ಕೊಳಚೆ ನೀರು ಸಂಗ್ರಹಣಾ ಮತ್ತು ಚಿಕಿತ್ಸಾ ಘಟಕಗಳ ರಚನೆಯಿಂದಾಗಿ ಅಂತರ್ಜಲದ ಕಲುಷಿತವಾಗುವ ಮಟ್ಟ ಬಹಳ ಇಳಿಮುಖವಾಗಿದೆ.

2. **ಪರಿಸರ:** ನೆಲ-ಒಳಚರಂಡಿ ವ್ಯವಸ್ಥೆಯು ನಗರದಲ್ಲಿ ಶುಚಿತ್ವ ಮತ್ತು ಆರೋಗ್ಯಕರ ವಾತಾವರಣವನ್ನು ನಿರ್ಮಿಸಿದೆ.
3. **ಜವಬ್ದಾರಿತನ:** ಯೋಜನೆಯಲ್ಲಿ ಜನರು ಬಂಡವಾಳ ತೊಡಗಿಸಿದ್ದರಿಂದ ಹಾಗೂ ಯೋಜನೆಯ ಜಾರಿಯ ಪ್ರತೀ ಹಂತದಲ್ಲೂ ತೊಡಗಿಸಿಕೊಂಡಿದ್ದರಿಂದ ಹಣದ ಪಾರದರ್ಶಕತೆಗೆ ಯಾವುದೇ ತೊಡಕಾಗಿದೆ. ಆನರು ತಮ್ಮ ನಗರದ ಅಭಿವೃದ್ಧಿಯ ಪ್ರಮುಖ ಪಾಲುದಾರರಾದರು.
4. **ಸ್ಥಳೀಯ ಸಂಸ್ಥೆ ಮತ್ತು ನಾಗರೀಕರ ಸಂಬಂಧ :** ಪ್ರಾರಂಭ ಹಂತದಿಂದಲು ನಾಗರೀಕರು ಯೋಜನೆಯ ಭಾಗವಾಗಿದ್ದರಿಂದ ನಗರಸಭೆಯೊಂದಿಗೆ ಉತ್ತಮ ಸಂಬಂಧವೇರ್ಪಟ್ಟಿತು. ಯೋಜನೆಯು ಯಶಸ್ವಿಯಾಗಿ ಮುಕ್ತಾಯವಾಗಿದ್ದು, ಜನರು ತಮ್ಮ ಹಣ ಸದ್ಬಳಕೆಯಾಗಿದೆ ಎಂದು ಭಾವಿಸಲು ಮತ್ತು ಸ್ಥಳೀಯ ಸಂಸ್ಥೆಯ ಮೇಲೆ ವಿಶ್ವಾಸ ವೃದ್ಧಿಯಾಗಲು ಕಾರಣವಾಯಿತು.

**ಕಲಿತ ಪಾಠಗಳು :**

- ❖ ಮುಕ್ತ ಮತ್ತು ಸಂಘಟಿತ ಪ್ರಯತ್ನದಿಂದಾಗಿ ನಾಗರೀಕರನ್ನು ಯೋಜನೆಯ ಭಾಗವನ್ನಾಗಿ ಮಾಡುವುದು ಸಾಧ್ಯವಾಯಿತು.
- ❖ ಬೇರೆ ಇಲಾಖೆಗಳ ಸಹಕಾರ ಹಾಗೂ ನಾಗರೀಕರ ಬೆಂಬಲವು ಎದುರಾದ ಸಮಸ್ಯೆಗಳನ್ನು ನಿವಾರಿಸಿ ಯೋಜನೆ ಯಶಸ್ವಿಯಾಗಿ ಸಂಪೂರ್ಣಗೊಳ್ಳಲು ನೆರವಾಯಿತು.

**ಸುಸ್ಥಿರತೆ / ಜೀವಿತಾವಧಿ :**

ಉತ್ತಮ ನಿರ್ವಹಣೆ, ಕಾಲಕಾಲಿಕ ತಪಾಸಣೆ, ಯೋಗ್ಯ ಮೇಲ್ವಿಚಾರಣೆ ಹಾಗೂ ವಿವಿಧ ಹಂತಗಳಲ್ಲಿ ಸಂಪರ್ಕ ಜಾಲಗಳ ಪರಿಶೀಲನೆ ಮತ್ತು ದುರಸ್ಥಿ, ಕಾಲಕಾಲಕ್ಕೆ ನಡೆದರೆ ಯೋಜನೆಯು ಹೆಚ್ಚು ದೀರ್ಘಾವಧಿಯವರೆಗೆ ಬದುಕುವ ಲಕ್ಷಣಗಳಿವೆ.

**ವರ್ಗಾವಣೆ :**

ಒಳಚರಂಡಿ ರಚನೆಯು ಇಂಜಿನಿಯರಿಂಗ್ ಇಲಾಖೆಯ ಕಾರ್ಯವಾಗಿದ್ದರು, ನಗರಸಭೆಯ ಆಸಕ್ತಿ ಹಾಗೂ ಜನರ ಭಾಗವಹಿಸುವಿಕೆಯಿಂದ ನಿರ್ಮಾಣ ಜವಾಬ್ದಾರಿ PPP ಮಾದರಿಯಲ್ಲಿ ಖಾಸಗಿಯವರಿಂದ ನಿರ್ಮಾಣವಾಯಿತು. ಹಾಗೂ ಸಾವಜನಕರಿಗೆ ಸ್ವೊತ್ತಿನ ಮೇಲೆ ಒಡೆತನದ ಅನುಭವ ನೀಡಿತು. ಈ ಮಾದರಿಯ ಅಳವಡಿಕೆಯಿಂದ ನಗರಸಭೆಯು ಕೊರತೆ ಆರ್ಥಿಕತೆಯಲ್ಲಿಯೇ ಅತ್ಯಂತ ಯಶಸ್ವಿ ಯೋಜನೆಯನ್ನು ಜಾರಿ ಮಾಡುವಲ್ಲಿ ಸಫಲವಾಯಿತು.

**ಪ್ರಶ್ನೆಗಳು :**

1. 'ಸಾಖಾಸ–ಹೊ&ಅ' ವಿಧಾನವನ್ನು ಅನುಸರಿಸಲು ಸ್ಥಳೀಯ ಸಂಸ್ಥೆಯ ಹಿನ್ನಲೆ ಏನಾಗಿತ್ತು?
2. ಯಾವ ಕಾರಣಕ್ಕಾಗಿ 'BOT' ಮಾದರಿಯನ್ನು ಆಯ್ಕೆ ಮಾಡಲಾಯಿತು?
3. ಬಿಡ್ಡಿಂಗ್ ನಡೆದ ಮೂರು ಹಂತಗಳು ಯಾವುವು?
4. ಅಭಿವೃದ್ಧಿಯ ಒಪ್ಪಂದದ ಮುಖ್ಯ ಅಂಶಗಳಾವುವು?
5. ಯಾವ ಕಾರ್ಯವ್ಯಾಪ್ತಿಗಳನ್ನು ಒಳಗೊಂಡಿದ್ದ ಯೋಜನೆ?
6. ಹಣಕಾಸಿನ ನಿರ್ವಹಣೆಯ ಮುಖ್ಯ ಅಂಶಗಳಾವುವು?
7. ಯೋಜನೆಯನ್ನು ಜಾರಿಗೊಳಿಸುವ ವಿಧಾನಗಳಾವುವು?
8. 'ಸಾಖಾಮ–ಹೊಅನು' ಮಾರ್ಗೋಪಾಯದಲ್ಲಿ ಅನುಭವಿಸಿದ ಸಂಕಷ್ಟ ಮತ್ತು ಅಡೆ–ತಡೆಗಳಾವುವು?
9. ಯೋಜನೆಯ ಫಲಶೃತಿ ಮತ್ತು ಪರಿಣಾಮಗಳಾವುವು?
10. ಮಾದರಿಯ ಪುನರ್ಬಳಕೆಗೆ ಕಲಿತ ಪಾಠಗಳಾವುವು?

# 6.0. ಅಧಿವೇಶನ 3.1 ಮತ್ತು 3.2 ಕ್ರಿಯಾಯೋಜನೆ ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವ– ಉತ್ತಮ ಯೋಜನೆಗಳ ದಾಖಲೀಕರಣದ ಮಾರ್ಗದರ್ಶಿಗಳು

**ಪರಿಚಯ:**

ಈ ಮಾರ್ಗದರ್ಶನಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಗಳಲ್ಲಿನ ದಾಖಲೀಕರಣಕ್ಕಾಗಿ ಅಭಿವೃದ್ಧಿಪಡಿಸಲಾಗಿದೆ. ಇದರ ಮೂಲಕ ಬಡಜನರ ಜೀವನಮಟ್ಟವನ್ನು ಸುಧಾರಿಸುವ ಯೋಜನೆಗಳ ದಾಖಲೆ ಮಾಡಬಹುದಾಗಿದೆ.

**ಅಂಶಗಳು:**

- ದಾಖಲೀಕರಣದ ಉದ್ದೇಶಗಳು, ಯಾವುದನ್ನು ದಾಖಲಿಸಬಹುದು ಮತ್ತು ಯಾವುದನ್ನು ದಾಖಲಿಸಬಾರದು ಎಂದು ವಿವರಿಸಲಾಗಿರುತ್ತದೆ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿನ ವಿವಿದ ವಿಧಗಳು, ಕೆಲಸಕಾರ್ಯಗಳು, ಅನುಷ್ಠಾನದಲ್ಲಿನ ಮುಖ್ಯ ಅಂಶಗಳನ್ನು ತಿಳಿಸಲಾಗಿದೆ.
- ಪ್ರಾದೇಶಿಕವಾಗಿ ದೊರಕುವ ಸೌಲಭ್ಯಗಳ ಮಾಹಿತಿಯನ್ನು ಒಳಗೊಂಡಿರುತ್ತದೆ.
- ಈ ಮಾರ್ಗದರ್ಶಿಯನ್ನು ಅನುಸರಿಸಲು ಸೂಚನೆಗಳನ್ನು ನಿಡಲಾಗಿದೆ.

**ದಾಖಲೀಕರಣದ ಮೂರು ಮಾದರಿಗಳು**

'A' ವರ್ಗ:– ಯೋಜನೆಗಳ ಸಂಕ್ಷೀಪ್ತ ವಿಷಯಗಳು, ಯೋಜನೆಗಳ ಮೌಲ್ಯ, ಒಟ್ಟಾರೆ ಚಿತ್ರಣದ ವರದಿ.

'B' ವರ್ಗ:– ಯೋಜನೆಗಳಲ್ಲಿನ ಹಂತಗಳು, ವಿವರಣೆಗಳು ಮತ್ತು ವಿಶ್ಲೇಷಣಾ ವರದಿ.

'C' ವರ್ಗ:– ಯೋಜನೆಗಳ ಸಂಪೂರ್ಣ ಸಾರಾಂಶವನ್ನು ವಿವರಿಸುವುದು.

**ದಾಖಲೀಕರಣದ ಉದ್ದೇಶಗಳು:**

UNESCAP ಸಂಸ್ಥೆಯು ಅಂತರ್ಜಾಲದ ಮುಖಾಂತರ ನಗರಾಭಿವೃದ್ಧಿಯಲ್ಲಿ ವಿವಿಧ ಯೋಜನೆಗಳು ಅವುಗಳಿಗೆ ಸಂಬಂದಿಸಿದ ಮಾಹಿತಿಗಳನ್ನು ಒದಗಿಸಲಾಗುತ್ತಿದೆ. ಈ ಮಾಹಿತಿಗಳನ್ನು ಪ್ರಾದೇಶಿಕವಾಗಿ ಬಳಸಿಕೊಳ್ಳಬಹುದಾಗಿದೆ. ಹಾಗೂ ಸಾರ್ವಜನಿಕ ಖಾಸಗಿ ಸಹಭಾಗಿತ್ವಕ್ಕೆ ಸಂಬಂದಿಸಿದಂತೆ ಪ್ರಾದೇಶಿಕ ಮಾಹಿತಿ ವಿನಿಮಯ ಕೇಂದ್ರವನ್ನು ಸ್ಥಾಪಿಸಿ ಅದರ ಮೂಲಕ ಯೋಜನೆಗಳನ್ನು ಅಭಿವೃದ್ಧಿ ಪಡಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ವಿಶ್ವದಲ್ಲಿನ ಬೇರೆ ಬೇರೆ ದೇಶಗಳಲ್ಲಿರುವ ವೃತ್ತಿಪರರನ್ನು ಒಂದೆಡೆ ಕಲೆಹಾಕಿ ಅವರುಗಳ ಕ್ರಿಯಾತ್ಮಕ ಮತ್ತು ಯಶಸ್ವಿ ಯೋಜನೆಗಳ ಮಾಹಿತಿಗಳನ್ನು ವಿನಿಯೋಗಿಸಿಕೊಂಡು ಪ್ರಾದೇಶಿಕವಾಗಿ ಅವುಗಳನ್ನು ಇತಿಮಿತಿಗಳಲ್ಲಿ ಅಭಿವೃದ್ಧಿಪಡಿಸಿ ಅದರ ಮೂಲಕ ಬಡಜನರ ಅಗತ್ಯಗಳನ್ನು ಪೂರೈಸುವುದು ಈ ಯೋಜನೆಯ ಗುರಿಯಾಗಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಖಾಸಗಿ ವಲಯವು ಲಾಭದ ದೃಷ್ಟಿಯಿಂದ ಸಾರ್ವಜನಿಕ ಸಂಸ್ಥೆಯೊಂದಿಗೆ ವ್ಯವಹರಿಸುವ ಯೋಜನೆಗಳನ್ನು ಹಾಗೂ ಯೋಜನೆಗಳಲ್ಲಿನ ಕ್ರಿಯಾಶಿಲತೆಗಳನ್ನು ದಾಖಲಿಸುವುದು. ಸಾಖಾಸ ಯೋಜನೆಗಳನ್ನು ಈಗಾಗಲೇ ಅನುಷ್ಠಾನಗೊಂಡಿದ್ದಲ್ಲಿ ಮತ್ತು ಅವುಗಳನ್ನು ಇತರೆ ಪ್ರದೇಶಗಳಲ್ಲಿ ಅನುಸರಿಸುವುದಾದಲ್ಲಿ ಮಾತ್ರ ಅಂತಹ ಯೋಜನೆಗಳನ್ನು ದಾಖಲಿಸುವುದು.

UNESCAP ಸಂಸ್ಥೆಯು ಯೋಜನೆಗಳನ್ನು ವಿವಿಧ ಪ್ರದೇಶಗಳಲ್ಲಿ ಅನುಸರಿಸುವಂತಹ ಮಾದರಿಗಳನ್ನು ಎದುರು ನೋಡುತ್ತಿದೆ. ಯಾವ ಯೋಜನೆಗಳು ಕೆಲವು ಪ್ರದೇಶಗಳಿಗೆ ಸೀಮಿತವಾಗಿವೆಯೊ ಮತ್ತು ಸಮಯಧಾರಿತವಾಗಿವೆಯೋ ಅಂತಹ ಯೋಜನೆಗಳನ್ನು ದಾಖಲಿಸುವುದು ಪ್ರಯೋಜನಕಾರಿಯಲ್ಲ. ಹಾಗೆಯೇ ಪ್ರಸ್ತುತ ಸಾಖಾಸದ ಯೋಜನೆಗಳನ್ನು ವ್ಯಾಪಕವಾಗಿ ಅನುಸರಿಸುತ್ತಿರುವ ಎಲ್ಲಾ ಪ್ರದೇಶಗಳಲ್ಲಿಯೂ ಹರಡಿರುವಂತಹ ಯೋಜನೆಗಳ ದಾಖಲೀಕರಣವು ಪ್ರಯೋಜನಕಾರಿಯಲ್ಲ.




ಯೋಜನೆಗಳನ್ನು ಯಥಾವತ್ತಾಗಿ ಅನುಸರಿಸುವುದು ಪ್ರಾದೇಶಿಕವಾಗಿ ಅಗತ್ಯ ಮತ್ತು ವಾತಾವರಣವನ್ನು ಒಳಗೊಂಡಿರುತ್ತದೆ. ಹಲವಾರು ಯೋಜನಾ ಕಾರ್ಯಗಳು ವಿವಿದ ರೀತಿಯಲ್ಲಿ ಅಗತ್ಯ ಮತ್ತು ಅನಗತ್ಯ ಅಂಶಗಳಿಂದ ಕೂಡಿರುತ್ತದೆ. ಕೇವಲ ಕೆಲವೇ ಕೆಲವು ಯೋಜನೆಗಳನ್ನು ಸಂಪೂರ್ಣವಾಗಿ ಅನುಕರಿಸಲಾಗುತ್ತದೆ. ಇಂತಹ ಸಂದರ್ಬದಲ್ಲಿ ದಾಖಲೀಕರಣವು ಯೋಜನೆಗಳ ಮುಖ್ಯ ಗುರಿಗಳು ಮತ್ತು ಹಂತಗಳನ್ನು ವಿವರಿಸಬೇಕಾಗುತ್ತದೆ, ಯೋಜನೆಗಳಲ್ಲಿನ ಮಹತ್ವದ ತೀರ್ಮಾನಗಳು, ಹಂತಗಳು, ಕಲಿತ ಪಾಠಗಳನ್ನು ವಿವರಿಸಬೇಕಾಗುತ್ತದೆ. ದಾಖಲೀಕರಣದಲ್ಲಿ ಯಶಸ್ವಿ ಯೋಜನೆಗಳನ್ನು ಪ್ರಸ್ತಾಪಿಸುವುದು ಸರಿ ಅದರ ಜೊತೆಯಲ್ಲಿ ಯೋಜನೆಗಳ ಅನುಷ್ಠಾನದಲ್ಲಿನ ತೊಡಕುಗಳು, ಅನುಭವಿಸಿದ ಸೋಲುಗಳನ್ನು ಕೂಡ ದಾಖಲಿಸುವುದು ಮುಖ್ಯ. ಈ ಅಂಶಗಳು ದಾಖಲೀಕರಣವು ಒಳಗೊಳ್ಳಬೇಕಾದ ಅಂಶಗಳನ್ನು ವಿವರಿಸುತ್ತದೆ.

**ಸಾರ್ವಜನಿಕ ಖಾಸಗಿ ಸಹಭಾಗಿತ್ವ.**

ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವವು ಹೊಸತೇನಲ್ಲ. ಹಲವಾರು ವರ್ಷಗಳಿಂದ ಸರ್ಕಾರವು ಸೇವೆ ನೀಡುವುದನ್ನು ಖಾಸಗಿಯವರಿಗೆ ಅವಕಾಶ ನೀಡುತ್ತಾ ಬಂದಿದೆ. ಸೇವೆ ನೀಡುವುದನ್ನು ಗುತ್ತಿಗೆ ನೀಡುವುದು, ನಿರ್ವಹಣೆ, ಸರ್ಕಾರಿ ಆಸ್ತಿಗಳನ್ನು ಖಾಸಗಿಯವರಿಗೆ ನೀಡುವುದು ಮತ್ತು ಇತ್ಯಾದಿ.

ಇತ್ತಿಚಿನ ದಿನಗಳಲ್ಲಿ ವಿದೇಶಿ ಹೂಡಿಕೆದಾರರು, ಏಜೆನ್ಸಿಗಳು ಅಭಿವೃದ್ಧಿ ಹೊಂದುತ್ತಿರುವ

ರಾಷ್ಟ್ರಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಸಮುದಾಯದಲ್ಲಿನ ಅಗತ್ಯ ಸೇವೆಗಳಿಗೆ ಹಣಕಾಸು ನೆರವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ನೀಡುತ್ತಿವೆ. ಈ ಸಂಸ್ಥೆಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ನಾಗರೀಕ ಸೌಲಭ್ಯ ಬೇಡಿಕೆಗಳನ್ನು ಅಭಿವೃದ್ಧಿ ಹೊಂದಿದ ದೇಶಗಳಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಹೂಡಿಕೆ ಮಾಡುತ್ತಿವೆ. ಖಾಸಗಿ ವಲಯವು ದೇಶದ ಹಲವಾರು ರಾಜ್ಯಗಳಲ್ಲಿರುವ ಸರ್ಕಾರಿ ಸಾಮ್ಯದ ಸಂಸ್ಥೆಗಳ ಕಳಪೆ ನಿರ್ವಹಣೆಯ ಮೇಲೆ ಬೆಳಕು ಚೆಲ್ಲುತ್ತಿವೆ ಇದರ ಮೂಲಕ ಅವುಗಳ ಉತ್ತಮ ನಿರ್ವಹಣೆಗೆ ಮಾರ್ಗಸೂಚಿಗಳನ್ನು ರೂಪಿಸುತ್ತಿದೆ.

ಖಾಸಗಿ ಸಹಭಾಗಿತ್ವವನ್ನು ಸಾರ್ವಜನಿಕ ವಲಯದಲ್ಲಿ ತೊಡಗಿಸಿಕೊಳ್ಳಲು ಹಲವಾರು ಮಾರ್ಗೋಪಾಯಗಳಿವೆ. ಇವುಗಳಲ್ಲಿ ನಿಗದಿತ ಪ್ರಾಯೋಜಕತ್ವ, ಕೆಲವು ಯೋಜನೆಗಳಲ್ಲಿ ಸಹಭಾಗಿತ್ವ, ದೀರ್ಘಾವಧಿ ಯೋಜನೆಗಳಲ್ಲಿ ಗುತ್ತಿಗೆ, ಪರವಾನಗಿ ನೀಡಿ ಯೋಜನೆಯ ಸಂಪೂರ್ಣ ನಿರ್ವಹಣೆ, ಸೇವೆ ಅಥವಾ ಮೂಲಭೂತ ಸೌಲಭ್ಯ ಒದಗಿಸುವಿಕೆ ಒಳಗೊಂಡಿರುತ್ತದೆ. ಇದರ ಕೆಲವು ಆಯ್ಕೆಗಳನ್ನು ಮುಂದಿನ ಚಿತ್ರದಲ್ಲಿ ತೋರಿಸಲಾಗಿದೆ.

ಸಾಖಾಸದಲ್ಲಿ ಇನ್ನುಳಿದ ಸಹಭಾಗಿತ್ವದ ವಿಧಗಳೆಂದರೆ, ಸರ್ಕಾರವು ಬೃಹತ್ ಸಂಸ್ಥೆ(ಮಲ್ಟಿನ್ಯಾಷನಲ್)ಯೊಂದಿಗೆ ಜೊತೆ ಜೊತೆಗೆ ಕಾರ್ಯನಿರ್ವಹಿಸುವುದು. ಅಥವಾ ಸ್ಥಳೀಯವಾಗಿರುವ ಸಣ್ಣ ಸಣ್ಣ ಗುಂಪುಗಳೊಂದಿಗೆ (ವಾರುಕಟ್ಟೆ ವ್ಯಾಪಾರಿಗಳು) ಕಾರ್ಯನಿರ್ವಹಿಸುವುದು. ಅಥವಾ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸರ್ಕಾರೇತರ ಸಂಸ್ಥೆಗಳೊಂದಿಗೆ ಅಥವಾ ಸಮುದಾಯ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸುವುದು(ಶಿಕ್ಷಣ, ವೈದ್ಯಕೀಯ, ಇತ್ಯಾದಿ)

ಸಾಖಾಸದ ಮತ್ತೊಂದು ಸಾಧ್ಯತೆಯೆಂದರೆ ಸಾರ್ವಜನಿಕ ಸಂಸ್ಥೆಯ ಪಾಲುದಾರರು ಸರ್ಕಾರೇತರ ಸಂಸ್ಥೆ ಅಥವಾ ಸಮುದಾಯ ಸಂಸ್ಥೆಯಾಗಿದ್ದಲ್ಲಿ, ಸಾರ್ವಜನಿಕ ಸಂಸ್ಥೆಯು ಮುಖ್ಯ ಪಾತ್ರ ವಹಿಸುತ್ತದೆ. ಇದರಲ್ಲಿ ಪಾಲುದಾರ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ರೂಪಿಸುವುದು ಸಾರ್ವಜನಿಕ ಸಂಸ್ಥೆಯ ಕೆಲಸವಾಗಿರುತ್ತದೆ.

ಯೋಜನೆಯಲ್ಲಿ ಸಹಭಾಗಿತ್ವದ ಪ್ರಮಾಣ ಎಷ್ಟೆ ಇದ್ದರೂ ಸಹ ಯೋಜನೆಯ ಮುಖ್ಯ ಉದ್ದೇಶವು ಸಾಮಾಜಿಕ ಜವಬ್ದಾರಿಯಿಂದ ಕೂಡಿರಬೇಕು. ಖಾಸಗಿ ವಲಯದ ತಾಂತ್ರಿಕತೆ, ನೈಪುಣ್ಯ, ಹಣಕಾಸು, ನಿರ್ವಹಣೆ, ಲೆಕ್ಕಾಚಾರ, ಸಾರ್ವಜನಿಕ ಹಿತ, ಸಾರ್ವಜನಿಕ ಲೆಕ್ಕಾಚಾರವನ್ನು ಸಾಖಾಸ ಯೋಜನೆಗಳು ಪೂರೈಸಬೇಕು. ಸಾರ್ವಜನಿಕ ಮತ್ತು ಖಾಸಗಿ ರಂಗವು ತಮ್ಮ ಯೋಜನೆಗಳಲ್ಲಿನ ಆಡಳಿತದಲ್ಲಿ ಮತ್ತು ತಿರ್ಮಾನ ತೆಗೆದುಕೊಳ್ಳುವಿಕೆಯಲ್ಲಿ ಒಂದುಗೂಡುವಿಕೆಯಿಂದ ಸಹಭಾಗಿತ್ವವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದನ್ನು 'ಜೊತೆಯಲ್ಲಿನ ನಿರ್ಧಾರ ಮತ್ತು ಜೊತೆಯಲ್ಲಿ ಕಾರ್ಯಾಚರಣೆ'ಯಲ್ಲಿ ವಿವರಿಸಲಾಗಿದೆ. ಹಾಗೆಯೇ ಕಡಿಮೆ ಚೌಕಟ್ಟಿರುವ ಸಹಭಾಗಿತ್ವಗಳು ಸಹ ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತವೆ.

**ಪ್ರಾಯೋಜಕತ್ವ**
ಖಾಸಗಿ ಕ್ಷೇತ್ರವು ಹಣಖಾಸು ಅಥವಾ ಅಗತ್ಯ ನೆರವನ್ನು ಸರ್ಕಾರಕ್ಕೆ ಅಥವಾ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುವುದು.

**ನಿರ್ವಹಣಾ ಒಪ್ಪಂದ**
ಖಾಸಗಿ ಸಂಸ್ಥೆಗಳಿಗೆ ಸರ್ಕಾರವು ಕೆಲವು ನಿರ್ದಿಷ್ಟ ಹಣಕಾಸು ಮತ್ತು ಅವಧಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸುವುದು.

**ಕಟ್ಟು"ಕೆ–ನಿರ್ವಹಣೆ–ಹಿಂದಿರುಗಿಸು"ಕೆ (ಬಿ.ಒ.ಟಿ)**
ಕಂಪನಿಯು ಕಟ್ಟುವುದು, ಮೂಲಭೂತ ಸೌಕರ್ಯ ನಿರ್ವಹಿಸಿ ಸರ್ಕಾರಕ್ಕೆ ಹಿಂದುರುಗಿಸುವುದು

**ರಿಯಾಯಿತಿ**
ಸಾರ್ವಜನಿಕರಿಗೆ ಉಚಿತವಾಗಿ ಸೇವೆಯನ್ನು ನೀಡಲು ಸರ್ಕಾರವು ಖಾಸಗಿ ಸಂಸ್ಥೆಗೆ ಅನುಮತಿಯನ್ನು ನಿಗಧಿತ ಅವಧಿಗೆ ನೀಡುವುದು. ಸರ್ಕಾರವು ಬಡಜನರಿಗೆ ರಿಯಾಯಿತಿಯನ್ನು ನೀಡಬಹುದು.

**ಸಾರ್ವಜನಿಕ ಖಾಸಗಿ ಸಹಭಾಗಿತ್ವ– ಉದಾಹರಣೆಗಳು**

**ಸ್ವಂತ ಸೇವೆ**
ಖಾಸಗಿ ವ್ಯಕ್ತಿಗಳು(ಸಂಸ್ಥೆ) ಉಚಿತವಾಗಿ ಸೇವೆ ನಿಡುವುದು.(ಉದಾ: ವೈದ್ಯರು)

**ಸೇವಾ ಕರಾರು**
ಸರ್ಕಾರವು ಕಂಪನಿಗಳಿಗೆ ಆತವಾ ಸ್ವಯಂ ಸೇವಾ ಸಂಸ್ಥೆಗಗೆ ಸೇವೆ ನೀಡುವುದನ್ನು ಅನುಮತಿಸುವುದು.

**ಸಮಭಾಗಿತ್ವ**
ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳು ಒಟ್ಟಾಗಿ ಯೋಜನೆಗಳನ್ನು ಸ್ಥಾಪಿಸಿ, ಸೇವೆ ನಿಡುವುದು. ಲಾಭ/ನಷ್ಟದಲ್ಲಿ ಸಮಪಾಲು ಪಡೆಯುವುದು.

**ಖಾಸಗಿ ಒಡೆತನ ಅವಕಾಶ**
ಸರ್ಕಾರವು ಸಂಪೂರ್ಣ ಸೇವೆ ನೀಡುವುದಕ್ಕೆ ಖಾಸಗಿ ಕ್ಷೇತ್ರಕ್ಕೆ ಅವಕಾಶ ನೀಡುವುದು. ಖಾಸಗಿ ಸಂಸ್ಥೆಯು ಸೇವೆಯನ್ನು ಅವಧಿಯ 'ಿತಿಲ್ಲದೆ ಪೂರೈಸಬಹುದಾಗಿರುತ್ತದೆ ಮತ್ತು ಸೇವಾ ನಿಯಮಗಳನ್ನು ಸರ್ಕಾರವು ನಿಗಧಿಗೊಳಿಸುತ್ತದೆ.

**UNESCAP ಸಂಸ್ಥೆಯು ನಗರ ಬಡತನ ನಿರ್ಮೂಲನೆಯಲ್ಲಿ ಸಾಖಾಸದ ಕೆಲವು ತೊಡಕುಗಳನ್ನು ಸಹ ಪಟ್ಟಿ ಮಾಡಿದೆ.** ಇವುಗಳಲ್ಲಿ ಕೆಲವು:

- ಸಾಖಾಸ ಯೋಜನೆಗಳಿಗೆ ಸೂಕ್ತ ಕಾನೂನಿನ ಚೌಕಟ್ಟು, ನಿಯಮಗಳು, ಆಡಳಿತಾತ್ಮಕ ಕಾರ್ಯ್ದಗಳು.
- ಸರ್ಕಾರವು ಸಾಖಾಸ ಯೋಜನೆಗಳಲ್ಲಿ ಬೃಹತ್ ಪ್ರಮಾಣದ ಸಂಸ್ಥೆಗಳೊಂದಿಗೆ ವ್ಯವಹಾರ ನಡೆಸಲು ಸೂಕ್ತ ನೈಪುಣ್ಯ.
- ಹಣಕಾಸು ತೊಂದರೆ ಮತ್ತು ಇತರೆ ಲಾಭಾಂಶವನ್ನು ಹಂಚಿಕೊಳ್ಳಲು ಅವಕಾಶವಿಲ್ಲದಿರುವುದು(ಕೆಲವೊಮ್ಮೆ ಸರ್ಕಾರವು ಖಾಸಗಿಯವರಿಗೆ ಹಣ ಮತ್ತು ಲಾಭಾಂಶದ ಭರವಸೆ ನಿಡುತ್ತದೆ. ಆದರೆ ಲಾಭಾಂಶದ ಪಾಲನ್ನು ಪ್ರಸ್ತಾಪಿಸಿರುವುದಿಲ್ಲ)
- ಯೋಜನೆಗಳಿಂದ ಬಡಜನರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು.( ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಸಣ್ಣ ಸಣ್ಣ ವ್ಯಾಪಾರಿಗಳಿಗೆ ತೊಂದರೆಯಾಗುವುದು)

ಈ ಮೇಲಿನ ಎಲ್ಲಾ ಅಂಶಗಳಿಂದ ಸಾಖಾಸಕ್ಕೆ ಮಿಶ್ರಪಲಗಳು ಸಿಗುತ್ತಿವೆ. ಉತ್ತಮವಾಗಿ ನಿರ್ವಹಣೆಯಾದ ಯೋಜನೆಗಳ ದಾಖಲೀಕರಣದ ಮುಖ್ಯ ಉದ್ದೇಶವೆಂದರೆ ಯೋಜನೆಗಳ ಅನುಕೂಲತೆ ಮತ್ತು ವೆಚ್ಚ ಮತ್ತು ವಿವಿಧ ರಾಷ್ಟ್ರಗಳ ಯೋಜನಾ ನಿರ್ವಹಣಾ ವಿಧಾನಗಳು.ವಿವರವಾಗಿ, ಎಲ್ಲಾ ಸಾಖಾಸ ಯೋಜನೆಗಳು ಬಡತನವನ್ನು ನಿರ್ಮೂಲನೆ ಮಾಡುವಲ್ಲಿ ಪಲಕಾರಿಯಾಗಿಲ್ಲ. ಸಮಾಜದ ಒಂದು ವರ್ಗಕ್ಕೆ ಸೀಮಿತವಾದ ಯೋಜನೆಗಳು ಕಂಡುಬರುತ್ತಿವೆ. ಅಥವಾ ಸಮಾಜದ ಒಂದು ಪ್ರಮುಖ ಆರ್ಥಿಕ ಚಟುವಟಿಕೆಗೆ ಅನುಕೂಲಕರವಾಗಿದೆ.

**ಅನುಕರಿಸುವ ಹಂತಗಳು**

ಬಡತನ ನಿರ್ಮೂಲನೆಯಲ್ಲಿ ಸಾಖಾಸ ಯೋಜನೆಗಳ ದಾಖಲೀಕರಣದಲ್ಲಿ ಅಭಿವೃದ್ಧಿ ಮತ್ತು ಕಾರ್ಯಗಳ ಮೂರು ಹಂತಗಳು ಪ್ರಮುಖವಾಗಿವೆ. ಈ ಮೂರು ಹಂತಗಳು ಪರಸ್ಪರ ಬದಲಾಗುವ ಹಂತಗಳು. ಅವುಗಳೆಂದರೆ

**1. ಪಾಲುದಾರ ಅಭಿವೃದ್ಧಿ ಹಂತ:** ಈ ಹಂತದಲ್ಲಿ ಪಾಲುದಾರರನ್ನು ಗುರುತಿಸುವುದಾಗಿರುತ್ತದೆ. ಇದು ಔಪಚಾರಿಕ ಆಯ್ಕೆ ಅಥವಾ ಕಾನೂನುರಿತ್ಯಾ ಒಪ್ಪಂದವಾಗಿರಬಹುದು. ಅಥವಾ ಔಪಚಾರಿಕವಲ್ಲದ ರೀತಿಯಲ್ಲಿಯೂ ಕೂಡ ಇರಬಹುದು(ಮಾತುಕತೆ, ನಂಬಿಕೆ).

**2. ಯೋಜನಾ ಅಭಿವೃದ್ಧಿ ಹಂತ:** ಈ ಹಂತದಲ್ಲಿ ಯೋಜಿತ ವಸ್ತು ಅಥವಾ ಸೇವೆಯನ್ನು ಕೊಡುವುದು ಅಥವಾ ನೀಡುವುದನ್ನು ಅಭಿವೃದ್ಧಿ ಪಡಿಸುವುದಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ವಸ್ತು ಅಥವಾ ಸೇವೆಯನ್ನು ಪಾಲುದಾರರನ್ನು ಗುರುತಿಸುವ ಮೊದಲು ಯೋಜಿಸಲಾಗಿರುತ್ತದೆ.

**3. ಕಾರ್ಯ ಹಂತ:** ಈ ಹಂತದಲ್ಲಿ ಯೋಜನೆಯನ್ನು ಪೂರ್ವ ನಿಗಧಿತ ಕರಾರಿನೊಂದಿಗೆ ಜಾರಿ ಮಾಡುವುದು. ಯೋಜನೆಯ ಅನುಷ್ಠಾನದಲ್ಲಿ ಬರಬಹುದಾದ ತೊಂದರೆಗಳನ್ನು ನಿವಾರಿಸಿಕೊಂಡು ಉತ್ತಮವಾಗಿ ಅನುಷ್ಠಾನಗೊಳಿಸುವುದು ಉದ್ದೇಶವಾಗಿರುತ್ತದೆ.

ಕಾರ್ಯ ಹಂತ

ಯೋಜನಾಭಿವೃದ್ಧಿ ಹಂತ

ಪಾಲುದಾರರನ್ನು ಗುರುತಿಸುವುದು

ಈ ಕೆಳಗಿನ ರೇಖಾಚಿತ್ರವು ಸಾಖಾಸ ಅನುಕರಿಸುವ ಮೂರು ಹಂತಗಳನ್ನು ವಿವರಿಸುತ್ತದೆ.

## ಪ್ರಾದೇಶಿಕ ಮಾಹಿತಿ ಸಂಪನ್ಮೂಲ ವಿನಿಮಯ ಕೇಂದ್ರ

**ಮಾಹಿತಿ ಸಂಪನ್ಮೂಲದ ಉದ್ದೇಶ:**

ಹೆಸರೆ ಸೂಚಿಸುವಂತೆ ಪ್ರಾದೇಶಿಕ ಮಾಹಿತಿ ವಿನಿಮಯ ಕೇಂದ್ರವು ಕ್ರಿಯಾಶೀಲ ಯೋಜನೆಗಳ ನೈಪುಣ್ಯವನ್ನು ಪಡೆದು ಅದನ್ನು ಬೇರೆಯವರಿಗೆ ವರ್ಗಾಯಿಸುವುದಾಗಿರುತ್ತದೆ. ಇದನ್ನು:

- ಕ್ರಿಯಾತ್ಮಕ ಯೋಜನೆಗಳು ಮತ್ತು ಅಭ್ಯಾಸಗಳನ್ನು ಅಂತರ್ಜಾಲದಲ್ಲಿ ಮಾಹಿತಿಯನ್ನು ಪಡೆಯುವುದು, ವಿಶ್ಲೇಷಿಸುವುದು ಮತ್ತು ಒದಗಿಸುವುದು ಮತ್ತು
- ನೈಪುಣ್ಯ ಮತ್ತು ಅನುಭವವನ್ನು ಮುಖಾ ಮುಖಿಯಾಗಿ ಚರ್ಚಿಸಿ ನಿಡುವುದು.

**ಮಾಹಿತಿ ಕೇಂದ್ರದ ಕೆಲಸ ಕಾರ್ಯಗಳು:**

ಗುರಿಯನ್ನು ಸಾಧಿಸುವಲ್ಲಿ ಕೇಂದ್ರವು ಮುಖ್ಯವಾಗಿ:

- UNESCAP ಸಂಸ್ಥೆಯು ಸಿದ್ದಪಡಿಸಿದ ನಮೂನೆಗಳಲ್ಲಿ ಯೋಜನೆಗಳ ಮಾಹಿತಿಯನ್ನು ಭರ್ತಿಮಾಡಿ ಅವುಗಳ ಕ್ಷಮತೆಯನ್ನು ಪರಿಕ್ಷಿಸುವುದು. ಅವುಗಳ ಮೌಲ್ಯವನ್ನು ನಿರ್ಧರಿಸುವುದು.
- ಎಲೆಕ್ಟ್ರಾನಿಕ್ ತಂತ್ರಜ್ಞಾನದ ಮುಖಾಂತರ ಮಾಹಿತಿಗಳನ್ನು ಕಲೆಹಾಕುವುದು, ಅಭಿವೃದ್ಧಿಗೊಳಿಸುವುದು ಮತ್ತು ವಿವರಿಸುವುದು.
- ಭಾಗಿಗಳ ಜೊತೆ ಪರಸ್ಪರ ವಿಶ್ಲೇಷಣೆ ಮತ್ತು ಮುಖಾ ಮುಖಿ ಚರ್ಚೆ ಮೂಲಕ ಮಾಹಿತಿಗಳ ವಿನಿಮಯ.
- ಸಾಮಾರ್ಥ್ಯ ಬಲವರ್ಧನೆ
- ಸಾಖಾಸ ಯೊಜನೆಗಳಿಗೆ ಸಂಬಂದಿಸಿದಂತೆ ಅಂತರ್ಜಾಲದಲ್ಲಿ ಇತರೆ ಸಂಪರ್ಕಗಳ ವಿವರಗಳು ಮತ್ತು ಇತರೆ ಕ್ಷೇತ್ರಗಳ ಮಾಹಿತಿಗಳನ್ನು ಒದಗಿಸುವುದು.

**ಮಾರ್ಗದರ್ಶಿಗಳ ಉಪಯೋಗ :**

**ಯಾರು ಯೋಜನೆಗಳ(ಅನುಷ್ಠಾನ) ದಾಖಲಿಕರಣ ಮಾಡಬೇಕು?**

ಯೋಜನೆಗಳನ್ನು ಅಥವಾ ಅಭ್ಯಾಸಗಳನ್ನು ಯಾರು ಬೇಕಾದರು ದಾಖಲಿಸಬಹುದು.

ಮುಖ್ಯವಾಗಿ ವಿವಿಧ ಭಾಗಿದಾರರು, ವಿಶ್ಲೇಷಕರು, ಹಾಗೂ

- ವಿಶ್ವವಿದ್ಯಾನಿಲಯಗಳು, ತರಬೇತಿ ಮತ್ತು ಸಂಶೋಧನಾ ಸಂಸ್ಥೆಗಳು ಅಥವಾ ಸಂಶೋಧಕರು.
- ಯೋಜನೆಗಳ ಪ್ರಾಯೋಜಕರು (ಉದಾ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯ ಕೇಂದ್ರಿತ ಸಂಸ್ಥೆಗಳು)
- ನೆರವು ನೀಡುವ ಸಂಸ್ಥೆಗಳು (ಉದಾ: ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ಇತ್ಯಾದಿ)
- ಯೋಜನಾ ಪಾಲುದಾರರು (ಉದಾ: ಸರ್ಕಾರಿ ಸಂಸ್ಥೆಗಳು, ಖಾಸಗಿ ಕಂಪನಿಗಳು, ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯ ಕೇಂದ್ರಿತ ಸಂಸ್ಥೆಗಳು)

ಮೂರನೆ ವ್ಯಕ್ತಿಯ ದಾಖಲಿಕರಣ ಅಥವಾ ಸ್ವತಂತ್ರ ವ್ಯಕ್ತಿಯ, ಸಂಸ್ಥೆಯ ದಾಖಲೀಕರಣವು ಪ್ರಮುಖವಾಗಿದೆ. ಯೋಜನೆಗಳ ಕರ್ತೃವು ಯೋಜನೆಗಳ ದಾಖಲಿಕರಣಕ್ಕೆ ಉತ್ತಮ ವ್ಯಕ್ತಿಯಾಗಿರುತ್ತಾನೆ. ಕಾರಣ ಆತನಿಗೆ (ಸಂಸ್ಥೆಗೆ) ಯೋಜನೆಯಲ್ಲಿ ಒಳಗೊಂಡಿರುವ ಎಲ್ಲಾ ಅಂಶಗಳ ಅರಿವು ಇರುತ್ತದೆ. ಸೂಕ್ತವಾಗಿ, ದಾಖಲಿಕರಣದಲ್ಲಿ ಸಹಭಾಗಿಗಳ ದಾಖಲಿಕರಣವು ಪ್ರಾಶಸ್ತ ಪಡೆಯುತ್ತದೆ.

**ದಾಖಲೀಕರಣದ ಪಲಾನುಭವಿಗಳು:**

ಈ ಮೊದಲೆ ತಿಳಿಸಿರುವಂತೆ, ದಾಖಲಿಕರಣದ ಮುಖ್ಯ ಉದ್ದೇಶವು ಅಂತರ್ಜಾಲದ ಮುಖಾಂತರ ವಿವಿದ ವರ್ಗದವರಿಗೆ ಮಾಹಿತಿ ನೀಡುವುದಾಗಿರುತ್ತದೆ. ಇದರಲ್ಲಿ ಆಧುನಿಕ ತಂತ್ರಜ್ಞಾನ, ಕೌಶಲ್ಯ, ಕ್ರಿಯಾಶೀಲತೆ, ಯಶಸ್ಸು, ಇತ್ಯಾದಿಗಳು ಒಳಗೊಂಡಿರುತ್ತದೆ. ಆಸಕ್ತಿಯುತ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಂತರ್ಜಾಲದಲ್ಲಿ ಸೂಕ್ತ ಸಾಖಾಸ ಮಾದರಿಗಳನ್ನು ಅವಲೋಕಿಸಬಹುದು ಮತ್ತು ಹೆಚ್ಚಿನ ಮಾಹಿತಿಗಾಗಿ ಮಾದರಿಗಳನ್ನು ಅಭಿವೃದ್ಧಿಪಡಿಸಿದವರನ್ನು ಸಂಪರ್ಕಿಸಿ ಕ್ಷೇತ್ರವಿಕ್ಷಣೆಯನ್ನು ಸಹ ಮಾಡಬಹುದಾಗಿರುತ್ತದೆ. ಸಾಖಾಸ ಮಾಹಿತಿಯನ್ನು ಕೊನೆಯದಾಗಿ ಬಳಸುವವರಲ್ಲಿ ವೃತ್ತಿಪರರು, ಸರ್ಕಾರಿ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಮುದಾಯಾಧರಿತ ಸಂಸ್ಥೆಗಳು ಹಾಗೂ ಖಾಸಗಿ ವಲಯ.

ವಿಚಾರ ವಿನಿಮಯದಲ್ಲಿ ಭಾಷಾ ಮಾಧ್ಯಮದ ಅನಾನುಕೂಲವು ಹಲವು ಸರ್ಕಾರಗಳನ್ನು, ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯಧರಿತ ಸಂಸ್ಥೆಗಳಿಗೆ ತೊಡಕಾಗಬಹುದು. ಇಂತಹ ಸಂದರ್ಭದಲ್ಲಿ ಮದ್ಯಸ್ಥರ ಅವಶ್ಯಕತೆಯಿರುತ್ತದೆ ಇದಕ್ಕೆ ಮುಖ್ಯ ಕಾರಣ ಮಾಹಿತಿಗಳನ್ನು ಪೂರ್ಣವಾಗಿ ಬಳಸಿಕೊಳ್ಳುವುದು ನಿರ್ದಾರ ತೆಗೆದುಕೊಳ್ಳುವಲ್ಲಿ ಸಮಾಲೋಚಿಸುವುದು ಇತ್ಯಾದಿ

ಯೋಜನೆಗಳನ್ನು ದಾಖಲಿಸುವಾಗ ಈ ಮೇಲ್ಕಂಡ ಅಂಶಗಳನ್ನು ಗಮನಿಸಬೇಕು. ವಿವಿಧ ವರ್ಗದವರನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಖಲಿಸಬೇಕು. ಮಾಹಿತಿಗಳನ್ನು ಅವಲೋಕಿಸುವಾಗ ಒದುಗರಲ್ಲಿ ಬರಬಹುದಾದ ಪ್ರಶ್ನೆಗಳು, ಸಂದೇಹಗಳನ್ನು ಪರಿಹರಿಸುವಂತಹ ಮಾಹಿತಿಗಳನ್ನು ಒದಗಿಸುವುದು ಸೂಕ್ತ.

**A, B ಮತ್ತು C ಮಾದರಿಯ ದಾಖಲಿಕರಣಗಳು**

ದಾಖಲಿಕರಣದ ಪೂರ್ಣ ಕೆಲಸವು ಈ ಮೂರು ವಿದದ ದಾಖಲಿಕರಣದ ಮಾದರಿಗಳೊಂದಿಗೆ ಹಾಗೂ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಿದ ನಂತರ ಮುಕ್ತಾಯಗೊಳ್ಳುತ್ತದೆ.

**A ವರ್ಗ:–** ಯೋಜನೆಗಳ ಸಂಕ್ಷಿಪ್ತ ವಿಷಯಗಳು, ಯೋಜನೆಗಳ ಮೌಲ್ಯ, ಒಟ್ಟಾರೆ ಚಿತ್ರಣದ ವರದಿ.

**'B' ವರ್ಗ:–** ಯೋಜನೆಗಳಲ್ಲಿನ ಹಂತಗಳು, ವಿವರಣೆಗಳು ಮತ್ತು ವಿಶ್ಲೇಷಣಾ ವರದಿ.

**'C' ವರ್ಗ:–** ಯೋಜನೆಗಳ ಸಂಪೂರ್ಣ ಸಾರಾಂಶವನ್ನು ವಿವರಿಸುವುದು.

B ವರ್ಗದ ದಾಖಲಿಕರಣದ ಮಾದರಿಗಳನ್ನು ತಯಾರಿಸುವಾಗ ಸಂದರ್ಭಗಳು ಈ ಕೆಳಕಂಡಂತಿರುತ್ತವೆ.

- A ಮಾದರಿಯ ವರದಿಗಳಲ್ಲಿ ಯೋಜನೆಯು ಕ್ರಿಯಾಶೀಲತೆಯನ್ನು ಹೊಂದಿದ್ದು ಹಾಗೂ ಆ ಯೋಜನೆಗಳಿಂದ ಬಡಜನರಿಗೆ ಉಪಯೋಗವಾಗುವಂತ್ತಿದ್ದರೆ ಹಾಗೂ ಮುಂದಿನ ಯೋಜನೆಗಳಿಗೆ ಅಗತ್ಯ ಮಾಹಿತಿಯುಳ್ಳದಾಗಿದ್ದಾಗ.
- ಯೊಜನೆಗಳ ಸಂಪೂರ್ಣ ಮಾಹಿತಿಗಳು ಲಬ್ಯವಿದ್ದಾಗ ಮಾತ್ರ.
- ವರದಿಗಳಲ್ಲಿ ವಿವರಿಸುವಂತಹ ವಿಷಯಗಳಿಗೆ ಹಿನ್ನೆಲೆ ಮಾಹಿತಿಯು ಲಬ್ಯವಿದ್ದಾಗ ಹಾಗೂ ಅದರಿಂದ ವಿಶ್ಲೇಷಣೆಗೆ ಅನುಕೂಲಕರವಾಗಿರುವಂತಹ ವಿಷಯಗಳಿದ್ದಾಗ ಹಾಗೂ ಪ್ರಸ್ತಾಪಿತ ವಿಷಯಗಳನ್ನು ಚರ್ಚಿಸಲು ಅವಕಾಶವಿರುವುದು.
- UNESCAP ಸಂಸ್ಥೆಯು B ಮಾದರಿಯ ದಾಖಲಿಕರಣಕ್ಕೆ ಅನುಮತಿಸಿದಾಗ.

ಈ ಮೇಲ್ಕಂಡ ಮೂರು ಮಾದರಿಗಳನ್ನು ಎಲೆಕ್ಟ್ರಾನಿಕ್ ವ್ಯವಸ್ಥೆಯ ಮುಖಾಂತರ ಪೂರ್ಣಗೊಳಿಸಬೇಕು. A ಮಾದರಿಯ ವರದಿಗಳನ್ನು ಮುದ್ರಿಕೆಗಳಲ್ಲಿಯೂ ಸಹ ತಯಾರಿಸಲಾಗುತ್ತದೆ. ಈ ಮುದ್ರಿಕೆಗಳನ್ನು ತಂತ್ರಜ್ಞಾನ ಬಳಕೆಗೆ ಅವಕಾಶವಿಲ್ಲದಿರುವ ಪ್ರದೇಶಗಳಲ್ಲಿ ಕಾರ್ಯಚಟುವಟಿಕೆಗಳಲ್ಲಿರುವ ಸಿಬ್ಬಂದಿಗಳು ಬಳಸಲು ಅನುಕೂಲಕರವಾಗಿರುತ್ತದೆ.

ಮಾದರಿ ವರದಿಗಳು ಪ್ರಶ್ನಾವಳಿಗಳ ರೂಪದಲ್ಲಿರಬೇಕು. ಜೊತೆಯಲ್ಲಿ ಸಣ್ಣ ಸಣ್ಣ ಟಿಪ್ಪಣಿಗಳನ್ನು ಒಳಗೊಂಡಿದ್ದು ಒದುಗರಿಗೆ (ಅಬ್ಯಾಸಿಸುವವರಿಗೆ) ಅದರ ಅಗತ್ಯತೆಯನ್ನು ತಿಳಿಸುವಂತಿರಬೇಕು. ಯೋಜನೆಗಳನ್ನು ದಾಖಲಿಸುವವರು ದಾಖಲಿಸುವಾಗ ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡುತ್ತಾರೆ. A ಮತ್ತು B ಮಾದರಿಯ ನಮೂನೆಗಳಲ್ಲಿ ಭರ್ತಿ ಮಾಡುವ ಸ್ಥಳವನ್ನು ನಿಗಧಿಗೊಳಿಸಬೇಕು. ಇದರಿಂದ ದಿರ್ಘಾವಾದ ಉತ್ತರಗಳನ್ನು ತಡೆಯುವುದು ಹಾಗೂ ಅಗತ್ಯ ಮಾಹಿತಿಗಳನ್ನು ಮಾತ್ರ ತುಂಬುವುದು ಸಾದ್ಯವಾಗುತ್ತದೆ.

'B' ವರದಿಯ ನಮೂನೆಯಲ್ಲಿ ದಾಖಲಿಕರಣವು ಗರಿಷ್ಟ 30 ಪುಟಗಳಿಗೆ ಸೀಮಿತಗೊಳಿಸಬೇಕು.

**ಪ್ರಮುಖ ಸೂಚನೆ:**

UNESCAP ಸಂಸ್ಥೆಯು ಉತ್ತಮ ಅಬ್ಯಾಸಗಳಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ನೀಡಲೆ ಬೇಕಾದ ಅನಿವಾರ್ಯತೆ ಇರುವುದಿಲ್ಲ. ಯೋಜನೆಗೆ ಸಂಬಂದಿಸಿದಂತೆ ಅಗತ್ಯ ಮಾಹಿತಿಗಳನ್ನು ಹಾಗೂ ನಮೂನೆಯಲ್ಲಿಲ್ಲದೆ ಇರುವಂತಹ ಪ್ರಶ್ನೆಗಳನ್ನು ಕೂಡ ಸೇರಿಸಬಹುದು.

**ದಾಖಲಿಕರಣದ ರೇಖಾಂಶ:**

**ಇಲ್ಲಾ**

UNESCAP ಸಂಸ್ಥೆಗೆ ಯೋಜನೆಗಳಲ್ಲಿ ಮುಂದುವರೆಯದಂತೆ ಕೋರಿಕೆ.

**ಹೌದು**

UNESCAP ಸಂಸ್ಥೆಯ ಜೊತೆ ಒಪ್ಪಂಧ:

¨B' ಮಾದರಿಯ ವರದಿ ತಯಾರಿಕೆ

B' ಮಾದರಿಯ ವರದಿ ತಯಾರಿಕೆ ನಂತರ UNESCAPE ಸಂಸ್ಥೆಗೆ ಮಾಹಿತಿ ರವಾನೆ.

A ಮಾದರಿ ವರದಿಗಳ ತಯಾರಿಕೆ ನಂತರ UNESCAP ಸಂಸ್ಥೆಗೆ ರವಾನಿಸುವುದು.

ಉತ್ತಮ ಆಧುನಿಕ ಅಥವಾ ಪೂರ್ಣಗೊಂಡ ಯೋಜನೆಗಳ ದಾಖಲಿಕರಣ

**ಪ್ರಮಾಣಿಕರಣ:**

ಉತ್ತಮ ಯೋಜನೆಗಳು ಮತ್ತು ಅಬ್ಯಾಸಗಳನ್ನು ಸಂಪೂರ್ಣವಾಗಿ ಮತ್ತು ವಿವರವಾಗಿ ದಾಖಲಿಸುವುದು ಮುಖ್ಯವಾಗಿದೆ. ಲಭ್ಯವಿರುವ ಮಾಹಿತಿಗಳು ಜಾಹಿರಾತುಗಳಾಗದೇ ಸೂಕ್ತ ಮಾಹಿತಿಗಳನ್ನು ಒದಗಿಸುವಂತಿರಬೇಕು.

ಎಲ್ಲಾ ಸಂದರ್ಭಗಳಲ್ಲಿ, ಮಾಹಿತಿಗಳನ್ನು ದಾಖಲಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಯೋಜನೆಗಳ ವಿವಿದ ಭಾಗಿದಾರರನ್ನು ಸಂಪರ್ಕಿಸಿ ಯೋಜನೆಯ ಪರಿಣಾಮವನ್ನು ಗಮನದಲ್ಲಿರಿಸಿಕೊಂಡು ದಾಖಲಿಸುವುದು ಅತಿ ಮುಖ್ಯ. B ವರ್ಗದ ವರದಿಗಳಲ್ಲಿ ಯೋಜನೆಯ ಎಲ್ಲಾ ರೀತಿಯ ಮೌಲ್ಯಮಾಪನವನ್ನು ಒಳಗೊಂಡಿರಬೇಕು. ದಾಖಲಿಕರಿಸುವ ವ್ಯಕ್ತಿಯು ಯೋಜನೆಯ ಪಾಲುದಾರನಾಗಿದ್ದರೆ ಅಂತಹ ವರದಿಗಳನ್ನು ಪ್ರಮಾಣಿಕರಿಸಬೇಕಾಗುತ್ತದೆ. ಇದನ್ನು ಈ ಕೆಳಕಂಡಂತೆ ಪ್ರಮಾಣಿಕರಿಸಬಹುದು.

- ಸಂಶೋದನಾ ವ್ಯಕ್ತಿಗಳಿಂದ ಅಥವಾ ಸರ್ಕಾರಿ ಏಜೆನ್ಸಿಗಳಿಂದ ಅಥವಾ ಅಂತರರಾಷ್ಟ್ರೀಯ ಸಂಸ್ಥೆಗಳು ಲೆಕ್ಕ ನಿರ್ವಹಣೆಯಲ್ಲಿ ಪರಿಣತಿ ಹೊಂದಿರುವಂತಹ ಸಂಸ್ಥೆಗಳು ವರದಿಯನ್ನು ಪ್ರಮಾಣಿಕರಿಸಬೇಕು.
- ವರದಿಗಳ ಸಂಪೂರ್ಣ ಹಂತಗಳ ಪರಿಶೀಲನೆ.

ಹಂತಗಳ ಪರಿಶೀಲನೆಯಲ್ಲಿ ಯೋಜನೆಗಳ ವರದಿಗಳನ್ನು ಅಬ್ಯಾಸಿಗರಿಗೆ ನೀಡಿ ಅವರ ಪ್ರತಿಕ್ರಿಯೆಯನ್ನು ಪಡೆಯುವುದು ಅದರ ಮೂಲಕ ವರದಿಯನ್ನು ಪ್ರಮಾಣಿಕರಿಸುವುದು.

**ಭಾಷೆ:**

ಮಾಹಿತಿಗಳನ್ನು ದಾಖಲಿಸುವ ಬಾಷೆಯೆಂದರೆ ಅದು 'ಆಂಗ್ಲ' ಬಾಷೆ.

ಸಂಸ್ಥೆಗಳು A ವರ್ಗದ ವರದಿಗಳನ್ನು ಸಂಸ್ಥೆಗೆ ಅನುಕೂಲಕರವಾದ ಪ್ರಾದೇಶಿಕ ಭಾಷೆಗೆ ಭಾಷಾಂತರಿಸಿಕೊಳ್ಳಬಹುದು. ಇದರಿಂದ ಪ್ರಾದೇಶಿಕವಾಗಿ ಕಾರ್ಯನಿರ್ವಹಿಸುವವರಿಗೆ ಅನುಕೂಲವಾಗುತ್ತದೆ.

## 6.2 ಉತ್ತಮ ಆಡಳಿತದ ಮೂಲ ಮಂತ್ರಗಳು

ಯೋಜನೆಗಳ ಅಥವಾ ಅಭ್ಯಾಸಗಳ ದಾಖಲಿಕರಣದಲ್ಲಿ ಉತ್ತಮ ಆಡಳಿತದ ಸೂತ್ರಗಳನ್ನು ಪರಿಗಣಿಸುವುದು ಮುಖ್ಯವಾಗಿರುತ್ತದೆ. ಆಡಳಿತದಲ್ಲಿ ಸಾಖಾಸ ಯೋಜನೆಗಳ ಪಾತ್ರವನ್ನು ತಿಳಿಯುವುದು. ಈ ಯೋಜನೆಗಳ ನಿರ್ವಹಣೆ, ಅನುಷ್ಠಾನದಲ್ಲಿ ಉತ್ತಮ ಆಡಳಿತದ ಮುಖಾಂತರ ರೂಪಿತವಾಗಿದೆಯೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

**ಈ ಕೆಳಕಂಡ ಕೋಷ್ಟಕದಲ್ಲಿ ಸಾಖಾಸ ಯೋಜನೆಗಳು ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.**

| ಮಾರ್ಗಸೂಚಿಗಳು | ಗುರಿಗಳು ಮತ್ತು ಪ್ರಾಮುಖ್ಯತೆ |
|---|---|
| ಪರಿಪೂರಕ | • ಸಾಮಾಜಿಕ, ಆರ್ಥಿಕ ಮತ್ತು ವಾತಾವರಣಕ್ಕೆ ಪ್ರಾಮುಖ್ಯತೆ<br>• ವಿವಿದ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು.<br>• ಪೂರಕ ಯೋಜನೆ ಮತ್ತು ನಿರ್ವಹಣೆಯನ್ನು ಒಳಗೊಳ್ಳುವುದು.<br>• ಸಮಾಜದ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಂತೆ ಆರ್ಥಿಕಾಭಿವೃದ್ಧಿ. |
| ರಿಯಾಯಿತಿ | • ಸ್ಥಳೀಯ ಆಡಳಿತಕ್ಕೆ ಜವಬ್ದಾರಿ ನೀಡುವುದು.<br>• ಆಡಳಿತವು ಸಮುದಾಯ ಕೇಂದ್ರೀತವಾಗಿರಬೇಕು.<br>• ನಾಗರೀಕ ಸಮಾಜವನ್ನು ಭಾಗವಹಿಸಲು ಉತ್ತೇಜನ. |
| ಸಮಪಾಲು ಮತ್ತು ಉನ್ನತಿಕರಣ | • ಮೂಲಭೂತ ಸೌಕರ್ಯ ಮತ್ತು ತೊಂದರೆ ಇರಬಾರದು.<br>• ಹಣದ ಹರಿವಿಗೆ ಹಣಕ್ಕೆ ಹೊಂದಾಣಿಕೆಯಾಗಿರಬೇಕು.<br>• ನಿಗದಿತ ಗುಂಪಿನ ಅಗತ್ಯತೆ ಮತ್ತು ತೆಗೆದುಕೊಳ್ಳುವಿಕೆ,<br>• ತೀರ್ಮಾನ ಬಡಜನರಿಗೆ ಅನುಕೂಲ ಸಂಪನ್ಮೂಲ ಹಂಚಿಕೆ, ಸೇವೆ ಕಲ್ಪಿಸುವಂತಿರಬೇಕು. ನೀಡುವಿಕೆಯಲ್ಲಿ ಲಿಂಗಬೇದ ವಿರಬಾರದು.<br>• ಔಪಚಾರಿಕವಲ್ಲದ ವಲಯಕ್ಕೆ ಔಪಚಾರಿಕವಾಗಿ ನೀತಿ ನಿಯಮಗಳ ಪಾಲನೆಯಾಗಬೇಕು. |
| ದೃಡತೆ | • ಸಹಭಾಗಿತ್ವವನ್ನು ಖಾಸಗಿ ಕ್ಷೇತ್ರ ಮತ್ತು ನಾಗರೀಕ ಸಮಾಜಕ್ಕೆ ಕೂಡಿರಬೇಕು<br>• ಸೇವೆಯು ಕ್ರಿಯಾಶೀಲತೆಯಿಂದ ಏರ್ಪಾಟಾಗಿರಬೇಕು.<br>.• ನೀತಿ ನಿಯಮಗಳಾನುಸಾರ ವಾಣಿಜ್ಯ ಒಪ್ಪಂದಗಳಿರಬೇಕು.<br>• ಸಾರ್ವಜನಿಕ ಸೇವೆಯಲ್ಲಿ ಉದ್ದೇಶ, ಗುರಿಯನ್ನು ಸ್ಪಷ್ಟಪಡಿಸಬೇಕು.<br>• ಸ್ಥಳೀಯ ಸಂಪನ್ಮೂಲಗಳ ಕ್ರೋಡೀಕರಣ |
| ಪಾರದರ್ಶಕತೆ ಮತ್ತು ಲೆಕ್ಕಾಚಾರ | • ತೀರ್ಮಾನ ತೆಗೆದುಕೊಳ್ಳುವಿಕೆ ಮತ್ತು ಟೆಂಡರ್‌ನಲ್ಲಿ ಪಾರದರ್ಶಕತೆ. |

| | |
|---|---|
| | • ನಾಗರೀಕರೊಂದಿಗೆ ಬಹಿರಂಗವಾಗಿ ಚರ್ಚೆಗಳಾಗಬೇಕು.<br>• ಸ್ವತಂತ್ರವಾದ ಆಡಿಟ್<br>• ಮಾಹಿತಿಗಳ ಲಭ್ಯತೆ.<br>• ಹೂಡಿಕೆದಾರರನ್ನು ಬಳಸಿಕೊಳ್ಳುವುದು.<br>• ವೃತ್ತಿಪರತೆ ಮತ್ತು ಸಾಮಾಜಿಕ ಕಳಕಳಿ.<br>• ಭ್ರಷ್ಟಚಾರ ಕಂಡುಬಂದಲ್ಲಿ ಭತ್ಯೆಗಳನ್ನು ನೀಡದಿರುವುದು. |
| **ಪೌರತ್ವ ಮತ್ತು ನಾಗರೀಕ ಪಾಲ್ಗೊಳ್ಳುವಿಕೆ.** | • ಸೂಕ್ತ ನಾಯಕತ್ವದಿಂದ ಜನರ ಪಾಲ್ಗೊಳ್ಳುವಿಕೆ ಹೆಚ್ಚುತ್ತದೆ.<br>• ಎಲ್ಲಾ ವರ್ಗದವರ ಪಾಲ್ಗೊಳ್ಳುವಿಕೆ.<br>• ಪ್ರಜಾಸತ್ತಾತ್ಮಕ ತೀರ್ಮಾನ ತೆಗೆದುಕೋಳ್ಳುವುದು.<br>• ಗಂಡು ಮತ್ತು ಹೆಣ್ಣಿಗೆ ಸಮಾನ ಅವಕಾಶ. |
| **ಭದ್ರತೆ** | • ಸದ್ರಡ ವಾತಾವರಣದ ನಿರ್ಮಾಣ<br>• ವಿಕೋಪ ನಿರ್ವಹಣಾ ಸಿದ್ದತೆ.<br>• ಅಪರಾಧಗಳ ನಿಯಂತ್ರಣ ಮತ್ತು ತಡೆಗಟ್ಟುವುದು.<br>• ಅವಧಿಯ ಭದ್ರತೆ<br>• ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು. |

(ಮೂಲ : UNESCAP 2008)

# 7.0 ಅಧಿವೇಶನ 3.3 ಮತ್ತು 3.4 ನಗರ ಮೂಲಭೂತ ಸೌಕರ್ಯ ಯೋಜನೆ ಅಭಿವದ್ಧಿಗಾಗಿ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಮಾರ್ಗಸೂಚಿ

**1.0 ಹಿನ್ನಲೆ**

ಸಾಖಾಸ ಮಾರ್ಗೋಪಾಯ ಸಾರ್ವಜನಿಕ ಮತ್ತು ಖಾಸಗಿಯವರ ಸಹಕಾರದಿಂದ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಿ ಸೇವೆಗಳನ್ನು ಬಳಕೆದಾರರಿಗೆ ನೀಡುವುದಾಗಿದೆ. ಪ್ರತಿಯೊಂದು ಸಾಖಾಸ ಯೋಜನೆಯಲ್ಲಿ ಬಹುಸಂಖ್ಯಾತ ಭಾಗೀದಾರರು – ಸ್ಥಳೀಯ ಸಂಸ್ಥೆಗಳು, ನಾಗರೀಕರು, ಖಾಸಗಿ ಕ್ಷೇತ್ರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು.

ವಿವಿಧ ಭಾಗೀದಾರರು ತಮ್ಮ ಹಿತಾಸಕ್ತಿಯನ್ನು ಹಾಗೂ ಉದ್ದೇಶಗಳನ್ನು ಹೊಂದಿರುತ್ತವೆ. ಸ್ಥಳೀಯ ಸಂಸ್ಥೆಗಳು ಸೇವಾಲಭ್ಯತೆಯನ್ನು ಉತ್ತಮಪಡಿಸುವ ಹಿತಾಸಕ್ತಿ ಹೊಂದಿರುತ್ತವೆ, ಸೇವೆಯ ಸಾಮರ್ಥ್ಯ ಮತ್ತು ಗುಣವನ್ನು ಉಳಿಸಿಕೊಳ್ಳುವುದಾಗಿದೆ. ನಾಗರೀಕರಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಸೇವೆಯನ್ನು ಪಡೆಯುವುದಾಗಿದೆ. ಖಾಸಗಿ ಕ್ಷೇತ್ರ ಹಾನಿಗಳನ್ನು ಕಡಿಮೆಗೊಳಿಸಿ ಮತ್ತು ಲಾಭವನ್ನು ಗರಿಷ್ಠಗೊಳಿಸಿ ಕೊಳ್ಳುವುದಾಗಿದೆ.

**5.0 ಸಾಖಾಸಾ ಪ್ರಕ್ರಿಯೆ :**

**ಉತ್ತರಾಂಚಲ್‌ನಲ್ಲಿ ಬಸ್‌ನಿಲ್ದಾಣ ಅಭಿವೃದ್ಧಿ**

2003 ರಲ್ಲಿ 20 ವರ್ಷಗಳ ಕಾಲ ಸಂಚಾರ ಮತ್ತು ವಾಹನಗಳ ದುರಸ್ಥಿ ಜವಾಬ್ದಾರಿಯನ್ನು ಮಸ್ಸೂರಿ–ಡೆಹರಾಡೂನ್ ಪ್ರದೇಶವನ್ನು ಖಾಸಗಿ ಸಂಸ್ಥೆಗೆ ವಹಿಸಲಾಯಿತು. ಮೊದಲ ನಾಲ್ಕು ವರ್ಷದ ನಂತರ ಪ್ರತಿ ವರ್ಷ ರೂ. 81 ಲಕ್ಷಗಳನ್ನು ಎಂ.ಡಿ.ಡಿ.ಎ.ಗೆ ನೀಡುವುದು. ಒಪ್ಪಂದ ಅವಧಿಯ ನಂತರ ಎಲ್ಲಾ ಸ್ಥಿರಾಸ್ತಿ ವಾಪಸ್ಸು ಪಡೆಯಲಾಗುವುದು. 2004 ರಿಂದ ಉತ್ತಮ ಸಂಚಾರ ಸೇವೆ ಮತ್ತು ಆತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣವಾಯಿತು. ಪ್ರಾಧಿಕಾರಕ್ಕೆ ಯಾವ ಹೆಚ್ಚಿನ ಹೊರೆಯೂ ಆಗಲಿಲ್ಲ.

ಆಧಾರ : ನಗರ ಆರ್ಥಿಕತೆ, ಸಂಚಿಕೆ 8 ಸಂ.4, ಅಕ್ಟೋಬರ್–ಡಿಸೆಂಬರ್ 2005.

ಈ ಕೈಪಿಡಿಯನ್ನು ಸ್ಥಳೀಯ ಸಂಸ್ಥೆಗಳ ದೃಷ್ಟಿಕೋನದಿಂದ ತಯಾರಿಸಲಾಗಿದೆ. ಯಾವುದೇ ಯೋಜನೆ ಸಹ್ಯವಾಗಿ ಹೆಚ್ಚು ಕಾಲ ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗುವುದು. ಸ್ಥಳೀಯ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಹಾಲಿ ಇರುವ ಆಸ್ತಿಪಾಸ್ತಿಗಳನ್ನು ಉತ್ತಮಪಡಿಸುವುದರ ಜೊತೆಗೆ ಹೊಸ ಬಗೆಯ ಯೋಜನೆಗಳನ್ನು ಅಭಿವೃದ್ಧಿ ಉತ್ತಮಪಡಿಸುವುದಾಗಿದೆ. ಸ್ಥಳೀಯ ಸಂಸ್ಥೆಗಳು ಯೋಜನೆಯ ಸಾಧ್ಯಸಾಧ್ಯತೆಗಳನ್ನು ಅವಲೋಕಿಸಲು ಹಾಲಿ ಇರುವ ಸೇವಾಗುಣಮಟ್ಟ, ಆರ್ಥಿಕ

ಸಹ್ಯತೆ, ಬಳಕೆಯಲ್ಲಿ ಸಾಮರ್ಥ್ಯದಂತಹ ನಿರ್ಣಾಯಕ ಅಂಶಗಳಿಗೆ ಪ್ರಾಮುಖ್ಯತೆ ನೀಡಬಹುದು.

ಸಾಖಾಸದಲ್ಲಿ ಒಡಂಬಡಿಕೆ ಮತ್ತು ಒಪ್ಪಂದಗಳು ಸರಳ ಕರಾರಿನಿಂದ ಹಿಡಿದು ಅನೇಕ ದೀರ್ಘಕಾಲಿಕ ರಿಯಾಯಿತಿಗಳನ್ನು ಹೊಂದಿರುತ್ತವೆ. ಸ್ಥಳೀಯ ಸಂಸ್ಥೆಗಳು ಈಗಾಗಲೇ ಕಸದ ಸಾಗಾಣಿಕೆ, ಯಂತ್ರಗಳನ್ನು ದುರಸ್ತಿ ಮತ್ತಿತರ ಸೇವೆಗಳಿಗೆ ಈಗಾಗಲೇ ಖಾಸಗಿ ಭಾಗೀದಾರರನ್ನು ಅಳವಡಿಸಿಕೊಂಡಿರುತ್ತಾರೆ. ಇಲ್ಲಿ ಖಾಸಗಿಯವರು ಬಂಡವಾಳವನ್ನು ಹೂಡುವ ಅವಕಾಶವಿರುವುದಿಲ್ಲ. ಸ್ಥಳೀಯ ಸಂಸ್ಥೆಗಳು ನಿಗದಿತ ಸಂಭಾವನೆಯನ್ನು ನೀಡಿ, ನಷ್ಟದ ಸಮಸ್ಯೆ ಉದ್ಭವಿಸುವುದಿಲ್ಲ. ಈ ಕೈಪಿಡಿಯನ್ನು ಸ್ಥಳೀಯ ಸಂಸ್ಥೆಗಳ ಹೆಚ್ಚಿನ ಬಂಡವಾಳ ಹೂಡಿಕೆ ಯೋಜನೆಗಳನ್ನು ಖಾಸಾಸ ಮಾರ್ಗೋಪಾಯದ ಮೂಲಕ ಯೋಜನಾ ಜೀವಿತದ ಅವಧಿಯಲ್ಲಿ ಹಣಕಾಸಿನ ಪ್ರಯೋಜನ, ನಷ್ಟವನ್ನು ಭರಿಸುವ ಪರಿಸ್ಥಿತಿಗೆ ರೂಪಿಸಲಾಗಿದೆ.

**6.0 ಸಾಖಾಸಾ ಪ್ರಕ್ರಿಯೆ :**

**ಸಮುದ್ರ ನೀರಿನ ಶುದ್ಧೀಕರಣ ಚೆನ್ನೈ**

100 ದಶಲಕ್ಷ ಲೀಟರ್ ನೀರನ್ನು ಒಂದು ಸ್ಪೆನ್ ದೇಶದ ಸಂಸ್ಥೆಯೊಂದಿಗೆ ಎಸ್.ಪಿ.ಯು. ಪ್ರಾರಂಭದೊಂದಿಗೆ ಪ್ರತ್ಯೇಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ನೀರಿನ ಉತ್ಪಾದನಾ, ಸಾಗಾಣಿಕೆ, ವಿದ್ಯುತ್ ಸರಬರಾಜು, ಗ್ರಾಹಕರಿಗೆ ಸರಬರಾಜು ವಿವಿಧ ಸಂಸ್ಥೆಗಳಿಗೆ ನೀಡಲಾಗಿದೆ. ವಿವಿಧ ಅನುಷ್ಠಾನದ ಹಂತದಲ್ಲಿರುವ ಈ ಯೋಜನೆ ದೊಡ್ಡ ಪ್ರಮಾಣ ಖಾಸಗಿ–ಸಾರ್ವಜನಿಕ ಸಹಭಾಗಿತ್ವದ ಯೋಜನೆ.

ಆಧಾರ : CWDL 2008

ಸಾಮಾನ್ಯವಾಗಿ ಖಾಸಾಸ ಯೋಜನೆಯ ಜೀವನಚಕ್ರ ಏಳು ಹಂತಗಳನ್ನು ಹೊಂದಿದೆ. ಇವುಗಳು (1) ಯೋಜನೆಯ ಪ್ರಾರಂಭಿಕತೆ ಮತ್ತು ವಿಶ್ಲೇಷಣೆ (2) ಸಾಧ್ಯತೆಗಳ ಅಧ್ಯಯನ (3) ಯೋಜನೆಯ ರೂಪ ನಿರ್ಧಾರ. ಮೇಲ್ನೋಟಕ್ಕೆ ಯೋಜನೆಯ ಸಾಖಾಸಕ್ಕೆ ಸೂಕ್ತವೆನಿಸಿದರೆ ತಾಂತ್ರಿಕ ಅಂಶ ಹಾಗೂ ಆರ್ಥಿಕ ವಿವರಗಳು ಸೃಷ್ಟಿವಾಗಿರುವುದಿಲ್ಲ. ಆಗ ನಾಲ್ಕನೆಯ ಹಂತದ ಅವಶ್ಯಕತೆ ಇರುವುದಿಲ್ಲ. ಆಗ ಐದನೆಯ ಮುಂದಿನ ಹಂತಗಳಾದ ಹರಾಜು ಪ್ರಕ್ರಿಯೆ ಶುರುವಾಗುವುದಿಲ್ಲ. ಯೋಜನೆಯಲ್ಲಿ ಆರನೆಯ ಹಂತ ಯೋಜನೆಯ ಅನುಷ್ಠಾನ ಮತ್ತು ನಿರ್ಮಾಣ ಮೇಲ್ವಿಚಾರಣೆ. ಏಳನೆಯ ಹಂತ ಯೋಜನೆಯ ಅನುಮತಿಯಿಂದ. ಈ ಕೈಪಿಡಿಯಲ್ಲಿ ಮೊದಲ ಮೂರು ಹಂತಗಳನ್ನು ಪರಿಗಣಿಸಲಾಗಿದೆ. ಬಹುಪಾಲು ಸ್ಥಳೀಯ ಸಂಸ್ಥೆಗಳಿಗೆ ಯೋಜನಾ ಹಂತದಲ್ಲಿ ಸಾಖಾಸ ಮಾರ್ಗೋಪಾಯಗಳ ವಿಶ್ಲೇಷಣೆ ನೀಡಲು ಸಾಮರ್ಥ್ಯವಿರುವುದಿಲ್ಲ. ಈ ಕೈಪಿಡಿಯಲ್ಲಿ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗೆ ವಿಸ್ತೃತ ಹಂತಗಳನ್ನು ಯಾವುದೇ ಯೋಜನೆಗೆ ಬಳಸಲು ವಿವರವಾಗಿ ನೀಡಲಾಗಿದೆ.

## 2. ಪರಿಚಯ

ಸಾಖಾಸ – ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳು ಸಹಕಾರ ಮತ್ತು ಸಹಭಾಗಿತ್ವದಲ್ಲಿ ಮೂಲಭೂತ ಸೌಕರ್ಯ ಸೃಷ್ಟಿಸಿ ಮತ್ತು ಇಲ್ಲವೆ ಸೇವೆಗಳನ್ನು ಬಳಕೆದಾರರಿಗೆ ನೀಡುವುದಾಗಿದೆ. ಯಾವುದೇ ಬಗೆಯ ಸಾಖಾಸ ವ್ಯಾಖ್ಯಾನ ಒಂದೇ ಆಗಿರುವುದಿಲ್ಲ. ಪ್ರತಿಯೊಂದು ಯೋಜನೆ ಮಿತಿ, ಸೇವೆ, ಕಾಲಾವಧಿ, ವಿವಿಧ ಜವಾಬ್ದಾರಿ ಮೇಲೆ ಯೋಜನೆಯ ಸ್ಥಿತಿ ಅವಲಂಬಿತವಾಗಿರುತ್ತದೆ. ಸೇವಾ ಕರಾರು, ನಿರ್ವಹಣಾ ಕರಾರು, ನಿರ್ಮಾಣ ಮಾಡಿ ವರ್ಗಾವಣೆ (BOT) ವ್ಯತ್ಯಾಸ, ನಿರ್ಮಾಣ ಮಾಡಿ, ಕಾರ್ಯಶೀಲತೆ ಮಾಡಿ ವರ್ಗಾವಣೆ (DBOT), ನಿರ್ಮಾಣ ಮಾಡಿ – ಮಾಲೀಕತ್ವ ಪಡೆದು ವಿವಿಧ ರೀತಿಯಲ್ಲಿ ಹೀಗೆ ಸಾಖಾಸ ಮಾದರಿಗಳಿವೆ.

ಕೈಪಿಡಿಯ ಸಂದರ್ಭದಲ್ಲಿ, ಸಾರ್ವಜನಿಕ ಕ್ಷೇತ್ರವೆಂದರೆ ಯಾವುದೇ ಸ್ಥಳೀಯ ಸಂಸ್ಥೆ ಅಥವಾ ಪುರಸಭೆ ನಗರ ಪ್ರದೇಶದ ಮೂಲಭೂತ ಸೌಕರ್ಯಕ್ಕಾಗಿ ಯೋಜನೆಯನ್ನು ಗುರುತಿಸಿದ ಸಾಂಸ್ಥಿಕ ಸಂಸ್ಥೆಯಾಗಿರುತ್ತದೆ. ಇಲ್ಲಿ ಖಾಸಗಿ ಕ್ಷೇತ್ರ ಸಾಖಾಸದ ಖಾಸಗಿ – ಈ ಕೆಳಕಂಡ ಯಾವುದಾದರೂ ಆಗಿರಬಹುದು.

ಅ) ಖಾಸಗಿ ಕ್ಷೇತ್ರ ಸಂಸ್ಥೆ (ಸ್ಥಳೀಯ ಗುತ್ತಿಗೆದಾರರಿಂದ ಹಿಡಿದು ದೊಡ್ಡ ಖಾಸಗಿ–ಕಂಪನಿ ಯಾಗಿರಬಹುದು)

ಆ) ನಾಗರೀಕ ಹಿತಾಸಕ್ತಿ ಸಂಘ

ಇ) ಸ್ವಯಂಸೇವಾ ಸಂಸ್ಥೆ

ಈ) ಸಮುದಾಯ ಸಂಘಟನೆಗಳು, ಇತ್ಯಾದಿ

### 2.1 ಸಾಖಾಸ ಯೋಜನೆಗಳ ಕಾರ್ಯವ್ಯಾಪ್ತಿ

ಸರ್ಕಾರಿ ಸಂಸ್ಥೆಗಳು ಈಗಾಗಲೇ ಅನೇಕ ಯೋಜನೆಗಳನ್ನು ಕರಾರು ಒಪ್ಪಂದದ ಮೂಲಕ ಖಾಸಗಿಯವರೊಂದಿಗೆ ವಿನ್ಯಾಸಗಳ ತಯಾರಿಕೆ, ಸರಳ ಸೇವಾ ಒಪ್ಪಂದಗಳು, ವಸ್ತುಗಳ ಕೊಳ್ಳುವಿಕೆ ಇತ್ಯಾದಿ ಕಾರ್ಯಗಳಲ್ಲಿ ಬಳಸುತ್ತಿದ್ದಾರೆ. ಈ ಕೈಪಿಡಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಯಾವ ಬಗೆಯ ಯೋಜನೆಗಳು ಸಾಖಾಸ ಮಾದರಿಗಳಿಗೆ ಸೂಕ್ತವೆಂಬುದನ್ನು ತಿಳಿಯಲು ವಿನ್ಯಾಸಗೊಳಿಸಲಾಗಿದೆ.

ಆದ್ದರಿಂದ, ಸಾಖಾಸ ಯೋಜನೆಗಳ ಕಾರ್ಯವ್ಯಾಪ್ತಿ ಕೆಳಕಾಣಿಸಿದ ಒಂದು ಅಥವಾ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

ಅ) ವಿನ್ಯಾಸಗಳನ್ನು ತಯಾರಿಸುವುದು.

ಆ) ಮೂಲಭೂತ ಸೌಕರ್ಯಗಳ ನಿರ್ಮಾಣ

ಇ) ಉಪಯುಕ್ತ ತಾಂತ್ರಿಕ ಹಸ್ತಾಂತರ

ಈ) ಆಸ್ತಿಪಾಸ್ತಿಗಳ ನಿರ್ವಹಣೆ.

ಉ) ಸಾರ್ವಜನಿಕ ಸೇವೆಗಳನ್ನು ದೊರಕಿಸುವುದು.

ಊ) ಬಳಕೆದಾರರ ಶುಲ್ಕ ವಸೂಲಾತಿ

**2.2 ಪುರಸಭಾ ಸೇವೆಗಳಲ್ಲಿ ಸಾಖಾಸ**

ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಒಳಚರಂಡಿ, ಘನತ್ಯಾಜ್ಯ ನಿರ್ವಹಣೆ, ನಗರ ಸಾರಿಗೆ ಇತ್ಯಾದಿಗಳನ್ನು ಕಲ್ಪಿಸುವುದಾಗಿದೆ. ಈ ಕ್ಷೇತ್ರಗಳು ಪ್ರತಿಯೊಂದು ಪ್ರತ್ಯೇಕ ಚಟುವಟಿಕೆಗಳಾಗಿವೆ. ಸೇವೆಯನ್ನು ನೀಡುವುದು ಹಾಗೂ ಶುಲ್ಕ ಪಾವತಿ ವಿಶಿಷ್ಟವಾಗಿರುತ್ತವೆ. ಆದ್ದರಿಂದ, ಪ್ರತಿಯೊಂದು ಯೋಜನೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಸಾಖಾಸ ಮಾರ್ಗೋಪಾಯಗಳನ್ನು ನಿರ್ಧರಿಸಬೇಕಾಗುತ್ತದೆ.

**7.0 ಸಾಖಾಸಾ ಪ್ರಕ್ರಿಯೆ :**

**ಆಲಂದೂರು, ತಮಿಳುನಾಡು ಒಳಚರಂಡಿ ಯೋಜನೆ**

1996 ರಲ್ಲಿ ಶೇಕಡ 25 ರಷ್ಟು ಸಾರ್ವಜನಿಕ ವಂತಿಗೆಯೊಂದಿಗೆ ಪ್ರಾರಂಭವಾದ ಈ ಯೋಜನೆ 1999 ರಲ್ಲಿ ಅನುಷ್ಠಾನಕ್ಕೆ ಬಂದಿತು. ಒಳಚರಂಡಿ ಸಂಪರ್ಕ, ನೀರೆತ್ತುವ ಹಾಗೂ ಸಂಸ್ಕರಣಾ ಘಟಕಗಳನ್ನು ಒಂದೇ ಸಂಸ್ಥೆಗೆ ವಹಿಸಲಾಯಿತು. BOT ಮಾದರಿ ಬಳಸಲಾಯಿತು. ವ್ಯವಸ್ಥೆ ಕಾರ್ಯಸಾದುವಾದ ನಂತರ ಬಂಡವಾಳ ಮತ್ತು ಸೇವಾ ಶುಲ್ಕವಾಗಿ ರೂ. 180 ಪ್ರತಿ ಮನೆಗೆ ಪ್ರತಿ ತಿಂಗಳು ಸಂಗ್ರಹಿಸಲಾಯಿತು.

ಆಧಾರ ನಗರಾಭಿವದ್ಧಿ ಇಲಾಖೆ ಕೇಂದ್ರ ಸರ್ಕಾರ 2008

ಮೂಲಭೂತ ಸೌಲಭ್ಯಗಳಾದ ಶುದ್ಧವಾದ ನೀರು ಹಾಗೂ ನೈರ್ಮಲ್ಯ ಸಮಾಜದ ದೃಷ್ಟಿಯಲ್ಲಿ ಬಹುಮುಖ್ಯ. ಅದರ ಕೇವಲ ಬಳಕೆದಾರರ ಶುಲ್ಕದಿಂದ ಮಾತ್ರವೇ ಆರ್ಥಿಕ ಸುಸ್ಥಿತಿ ಲಭ್ಯವಿರುವುದಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಈ ಸೇವೆಗಳನ್ನು ಪೂರೈಸುವ ಜವಾಬ್ದಾರಿಯಿದೆ.

ಸೇವೆಗಳಲ್ಲಿ ಕೆಲವು ಭಾಗಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ದೊರಕಿಸಿಕೊಡುವುದು ಸಾಧ್ಯ. ಉದಾಹರಣೆ ನೀರಿನ ಮೂಲಗಳ ಅಭಿವೃದ್ಧಿ ಮತ್ತು ನೀರಿನ ಶುದ್ಧೀಕರಣ ಘಟಕಗಳ ದುರಸ್ಥಿಯನ್ನು ಖಾಸಗಿಯ ಸಹಭಾಗಿತ್ವದಲ್ಲಿ ನಿರ್ವಹಿಸಬಹುದು. ಇಂತಹ ವ್ಯವಸ್ಥೆಯಿಂದ ಕಾರ್ಯಕ್ಷಮತೆ ಹೆಚ್ಚಿಸಿ ಒಟ್ಟಾರೆ ಸಾರ್ವಜನಿಕರ ಸೇವಾ ವೆಚ್ಚವನ್ನು ಕಡಿಮೆಗೊಳಿಸಿ ಆರ್ಥಿಕವಾಗಿ ಸುಸ್ಥಿರವಾಗಲು ಸಾಧ್ಯ.

ನಗರಗಳಲ್ಲಿ ಬಡಜನರ ಸಂಖ್ಯೆ ಬಹುಪಾಲು ಆಗಿದ್ದು ಹಾಗೂ ಉತ್ತಮವಲ್ಲದ ಜೀವನ ಪರಿಸ್ಥಿತಿಗಳಲ್ಲಿ ವಾಸವಾಗಿರುತ್ತಾರೆ.

ಬಹುಪಾಲು ನಗರಗಳಲ್ಲಿ ಬಡಜನರಿಗೆ ಕುಡಿಯುವ ನೀರಿನ ಹಾಗೂ ಒಳಚರಂಡಿಯ ಸೇವಾ ಸೌಲಭ್ಯವಿರುವುದಿಲ್ಲ. ಈ ಸೇವೆಗಳ ಕೊರತೆಯಿಂದಾಗಿ ಹೆಚ್ಚಿನ ವೆಚ್ಚಗಳನ್ನು ಭರಿಸುತ್ತಿರುತ್ತಾರೆ. ಸಮುದಾಯ ಸಂಘಟನೆಗಳನ್ನು ಸ್ವಯಂಸೇವಾ ಸಂಸ್ಥೆಗಳು ಹಾಗೂ ಖಾಸಗಿಯವರನ್ನು ತೊಡಗಿಸಿಕೊಂಡು ಸೇವಾ ಸೌಲಭ್ಯವನ್ನು ವಿಸ್ತರಿಸಿ ಆರ್ಥಿಕ ಸಾಮರ್ಥ್ಯದ ಅನುಗುಣವಾಗಿ ಪ್ರಯೋಜನವನ್ನು ನೀಡಬಹುದು.

ಸಾಖಾಸ ಯೋಜನೆಗಳಲ್ಲಿ ಸ್ಥಳೀಯ ಸಂಸ್ಥೆಗಳು ಖಾಸಗಿಯವರೊಂದಿಗೆ ಪಾಲುದಾರಿಕೆ ಪಡೆಯಬೇಕಾಗುತ್ತದೆ. ಈ ಸ್ಥಿತಿ ಅನೇಕ ಬಾರಿ ವೈವಿರುದ್ಯತೆಯ ಪರಿಸ್ಥಿತಿಯನ್ನು ಸೃಷ್ಟಿಸಬಹುದು. ಉದಾಹರಣೆಗೆ ಹೆಚ್ಚಿನ ಬಳಕೆದಾರರ ಶುಲ್ಕ ಯೋಜನೆಯನ್ನು ಸಹ್ಯಗೊಳಿಸಲು ಅಗತ್ಯವಿದ್ದಾಗ ನಾಗರೀಕರಿಗೆ ಸೇವೆಯನ್ನು ಕಡಿಮೆ ಶುಲ್ಕದಲ್ಲಿ ನೀಡಬೇಕಾಗುತ್ತದೆ. ಅದರಲ್ಲೂ ಬಡಜನರಿಗೆ ಇದು ಅತ್ಯಂತ ಸೂಕ್ಷ್ಮವಾದ ವಿಚಾರ. ವ್ಯವಸ್ಥೆಯ ಸಾಮರ್ಥ್ಯವ್ನನು ವೃದ್ಧಿಗೊಳಿಸುವುದು, ಆರ್ಥಿಕ ವರ್ಗ ಅನುಗುಣವಾಗಿ ಶುಲ್ಕ ನಿಗಧಿ ಮತ್ತಿತರ ನಿಯಂತ್ರಣ ಮಾರ್ಗೋಪಾಯ ಅಗತ್ಯವಾಗುತ್ತದೆ.

ಇದೇ ರೀತಿ ಅನೇಕ ಯೋಜನೆಗಳು ಕೇವಲ ಆರ್ಥಿಕವಾಗಿ ಶುಲ್ಕದಿಂದ ಮಾತ್ರ ಉಳಿಯಲಾರವು. ಆಗ ಸರ್ಕಾರದ ನೆರವಿನ ಅಗತ್ಯವಿರುತ್ತದೆ. ಇಂತಹ ಪರಿಸ್ಥಿತಿಗೆ ಕೇಂದ್ರ ಸರ್ಕಾರದ ಸಾಖಾಸ ಮಾರ್ಗವನ್ನು ಅನುಸರಿಸಿ, ಸಹ್ಯತೆಗೆ ಹಣಕಾಸಿನ ಕೊರತೆ (Viability Gap Funding) ಯ ಮೂಲಕ ಮೂಲಭೂತ ಸೌಕರ್ಯ ಯೋಜನೆ ಅನುವು ಮಾಡಿಕೊಟ್ಟಿದೆ. UGP ಗೆ ಅರ್ಹವಾಗಲು ಸ್ಪರ್ಧಾತ್ಮಕ ಹರಾಜಿನಲ್ಲಿ ಖಾಸಗಿಯವರ ಪಾಲು ಶೇಕಡ 51 ರಷ್ಟು ಇರಬೇಕು. ಈ ಯೋಜನೆಗಳನ್ನು ವೆಚ್ಚ ಆದಾಯ ವಿಶ್ಲೇಷಣೆಯಲ್ಲಿ ಅದೇ ಸೇವೆಯನ್ನು ಸಾಖಾಸ ಮಾದರಿಯಲ್ಲಿದೆ ನೀಡುವಾಗ ಆಗುವ ಪರಿಸ್ಥಿತಿಯ ಆಧಾರವನ್ನಾಗಿಟ್ಟುಕೊಳ್ಳುವುದು ಮುಖ್ಯ.

**2.3 ಖಾಸಾಸ – ಜೀವನಚಕ್ರ**

ಏಳು ಹಂತಗಳಲ್ಲಿ ಖಾಸಾಸ–ಜೀವನ ಚಕ್ರವನ್ನು ಗುರುತಿಸಬಹುದು.

1. ಹಂತ : ಯೋಜನೆಯ ಪ್ರಾರಂಭ ಮತ್ತು ಅವಲೋಕನ – ಉದ್ದೇಶ ಹಾಗೂ ಪ್ರಯೋಜನಗಳ ಬಗ್ಗೆ ಚಿಂತನೆ.
2. ಹಂತ : ಸೂಕ್ತತೆಯ ವಿಶ್ಲೇಷಣೆ – ತುರ್ತು ವಿಶ್ಲೇಷಣೆ – ಆರ್ಥಿಕ ಸೂಕ್ತತೆ, ವೆಚ್ಚಗಳು ಮತ್ತು ಆದಾಯದ ಮೂಲ.
3. ಹಂತ : ಮೊದಲ ಹಂತದ ಯೋಜನಾ ರೂಪ – ವಿವಿಧ ಭಾಗೀದಾರರ ಜವಾಬ್ದಾರಿ ಹಾಗೂ ಪಾತ್ರ ಹಾಗೂ ಖಾಸಾಸ ಮಾಧರಿಯ ನಿರ್ಧಾರ.
4. ಹಂತ : ಯೋಜನೆಯ ವಿವರಗಳ ಸಿದ್ಧತೆ – ತಾಂತ್ರಿಕ, ಆರ್ಥಿಕ ಹಾಗೂ ವಾಣಿಜ್ಯ ವಿವರಗಳು, ಯೋಜನೆಯ ಕಾರ್ಯವ್ಯಾಪ್ತಿಯಿಂದ ಸೃಷ್ಟತೆ. ವಾಣಿಜ್ಯ ದೃಷ್ಟಿಯಿಂದ ಯೋಜನೆಯ ಸಹ್ಯ ಸ್ವರೂಪ ತಿಳಿಯಬಹುದು.

5. ಹಂತ : ಹರಾಜು ಪ್ರಕ್ರಿಯೆ – ಅರ್ಹತೆಗೆ ಅರ್ಜಿ, ಯೋಜನೆಗೆ ಅರ್ಜಿ ಹಾಕಲು ಮನವಿ, ರಿಯಾಯಿತಿಗಳ ಒಪ್ಪಂದಗಳು, ಸ್ವತಂತ್ರ ಹಾಗೂ ಪಾರದರ್ಶಕತೆಯಿಂದ ಖಾಸಗಿಯವರನ್ನು ಆಹ್ವಾನಿಸುವುದು.
6. ಹಂತ : ಯೋಜನೆಯ ನಿರ್ಮಾಣ ಮತ್ತು ಮೌಲ್ಯಮಾಪನ – ಮೊದಲೆ ನಿರ್ಧರಿಸಿದ ವಿವಿಧ ವಿಷಯಗಳ ಅಂಶಗಳನ್ನು ನಿರ್ದಿಷ್ಠಪಡಿಸಿದ ಕಾಲದಲ್ಲಿ ಅಳೆಯುವುದು ಹಾಗೂ ನಿಗದಿತ ಸಮಯದಲ್ಲಿ ಹಾಗೂ ವೆಚ್ಚದಲ್ಲಿ  ಯೋಜನೆಯನ್ನು ಪೂರ್ಣಗೊಳಿಸುವುದು.
7. ಹಂತ : ಕಾರ್ಯಚಟುವಟಿಕೆಯ ಪ್ರಾರಂಭ. ಸೇವಾ ಸೌಲಭ್ಯಗಳನ್ನು  ನೀಡಲು ನಿರ್ದಿಷ್ಟಪಡಿಸಿದ ಗುಣ ಮತ್ತು ಪ್ರಮಾಣಗಳನ್ನು ಯೋಜನೆಯ ವಿನ್ಯಾಸದ ಅನ್ವಯ ನೀಡಲು ಬದ್ಧತೆ.

ಪ್ರತಿಯೊಂದು ಏಳು ಹಂತದಲ್ಲಿ ಒಂದು ಹಂತಕ್ಕೆ ಮತ್ತೊಂದು ಹಂತಕ್ಕೆ ಸೇತು ಸಂಬಂದವಿದ್ದು, ಪ್ರಮುಖ ನಿರ್ಧಾರಗಳು, ಹಾಗೂ ಪ್ರಮುಖ ವಿಷಯಗಳ ಪಟ್ಟಿಯನ್ನು ಚಿತ್ರದಲ್ಲಿ ನೀಡಲಾಗಿದೆ.



**ಚಿತ್ರ : 1 ಹಂತ, ಪ್ರಮುಖ ನಿರ್ಧಾರ ಹಾಗೂ ವಿಷಯಗಳ ಸಂಬಂಧಗಳು**



2.4 ಮಾರ್ಗಸೂಚಿ ಹಾದಿಗಳು :

ಮೂರು ಹಂತದಲ್ಲಿ ಚಟುವಟಿಕೆ ಮತ್ತು ನಿರ್ಧಾರದ ಅಂಶಗಳನ್ನು ಚಿತ್ರ–2 ರಲ್ಲಿ ನೀಡಲಾಗಿದೆ.

- ಹಂತ–1 : ಯೋಜನೆಯ ಪ್ರಾರಂಭಿಕ ಅವಲೋಕನ
- ಹಂತ–2 : ವಾಣಿಜ್ಯ ದೃಷ್ಟಿಯಲ್ಲಿ ಪರಿಷ್ಕರಣೆ ಮತ್ತು ವ್ಯವಸ್ಥೆಗಳು.
- ಹಂತ–3 : ಪ್ರಾರಂಭಿಕ ಯೋಜನೆಯ ರೂಪ.

ಎಲ್ಲಾ ಮೂರು ಹಂತಗಳಲ್ಲೂ ಸ್ಥಳೀಯ ಸಂಸ್ಥೆ ನಿರಂತರವಾಗಿ ಮುಖ್ಯ ಭಾಗೀದಾರರಾದ ಸಾರ್ವಜನಿಕರು/ ಯೋಜನೆಯ ಫಲಾನುಭವಿಗಳು, ರಾಜಕೀಯ ಪ್ರತಿನಿಧಿಗಳು, ಸಮುದಾಯ ಗುಂಪುಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು, ಖಾಸಗಿಯವರು, ಸ್ಥಳೀಯ ಸಂಸ್ಥೆಯ ಸಿಬ್ಬಂದಿಗಳು, ಆರ್ಥಿಕ ಸಂಸ್ಥೆಗಳು ಮತ್ತಿತರ ಸರ್ಕಾರದ ಸಂಸ್ಥೆಗಳೊಂದಿಗೆ ಸಂವಾದವನ್ನು ಇಟ್ಟುಕೊಳ್ಳಬೇಕಾದುದು ಅಗತ್ಯ. ಈ ಸಂವಾದದಲ್ಲಿ ಮಾಡಿದ ವಿವಿಧ ಪ್ರಾಮುಖ್ಯ ಅಂಶಗಳನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳ ಬೇಕಾಗುತ್ತದೆ.

ಯೋಜನಾ ಅವಲೋಕನದಲ್ಲಿ ಮಾರ್ಗಸೂಚಿಯಲ್ಲಿನ ಮೊದಲ ಮೂರು ಹಂತಗಳು.

**ಚಿತ್ರ–2 ವಿವಿಧ ಹಂತಗಳ ಚಟುವಟಿಕೆ ಮತ್ತು ಮುಖ್ಯ ನಿರ್ಧಾರಗಳು**

| ಹಂತ–1 | ಹಂತ–2 | ಹಂತ–3 |
|---|---|---|
| ಪ್ರಾರಂಭಿಕ | ವಾಣಿಜ್ಯ ವ್ಯವಸ್ಥೆಗಳು | ಯೋಜನೆಯ ರೂಪ |
| ಭಾಗೀದಾರರ ಸಂವಾದ ಮತ್ತು ಮುಖ್ಯ ಅಂಶಗಳು | | |




ಮೂಲ ಆಧಾರ : ಸಾಖಾಸ ಯೋಜನೆಗಳನ್ನು ನಗರ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಲು ತಾಂತ್ರಿಕ ಮಾರ್ಗೋಪಾಯಗಳ ಕೈಪಿಡಿ, ನರ್ಮ ಯೋಜನೆ, ನಗರಾಭಿವೃದ್ದಿ ಇಲಾಖೆ, ಕೇಂದ್ರ ಸರ್ಕಾರಗಳ ನರ್ಮ್ 2008

## 8.0 ಅಡಕಗಳು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಸಾ.ಖಾ.ಸ.)

## ಮುಖ್ಯಪದಗಳು ಮತ್ತು ವ್ಯಾಖ್ಯಾನಗಳು

**ಸಾ.ಖಾ.ಸ. ಎಂದರೇನು?**

ಸಾರ್ವಜನಿಕ (ಸರ್ಕಾರದ) ಇಲಾಖೆಯು ಸಾಂಪ್ರದಾಯಿಕವಾಗಿ ನಿರ್ವಹಿಸಿಕೊಂಡು ಬಂದಿರುವ ಸೇವಾ ಸೌಕರ್ಯದ ಜವಾಬ್ದಾರಿಯನ್ನು ಕೆಲವೊಂದು ನಿಬಂಧನೆಗಳಿಗೆ ಒಳಪಡಿಸಿ ಖಾಸಗಿಯವರಿಗೆ ವರ್ಗಾಯಿಸಲು ಸರ್ಕಾರಿ ಮತ್ತು ಖಾಸಗಿ (ಸರ್ಕಾರೇತರ) ಸಂಸ್ಥೆಗಳ ನಡುವೆ ಏರ್ಪಟ್ಟ ಒಪ್ಪಂದವನ್ನು ಸಾ.ಖಾ.ಸ. ಎಂದು ವ್ಯಾಖ್ಯಾನಿಸಬಹುದು.

- ಗ್ರಾಹಕರಿಗೆ ಪಾರದರ್ಶಕತೆ ನೀಡುವ ಜವಾಬ್ದಾರಿ ಸರ್ಕಾರದ್ದಾಗಿದೆ.

**ಏತಕ್ಕಾಗಿ ಸಾ.ಖಾ.ಸ.?**




- ಸರ್ಕಾರದ ಬಳಿ ಬಂಡವಾಳದ ಕೊರತೆ ಎದುರಾದಾಗ – ಖಾಸಗಿಯವರಿಂದ ಬಂಡವಾಳ ಹೂಡಿಸಿ ನಿರ್ವಹಣೆ ಜವಾಬ್ದಾರಿಯನ್ನು ವರ್ಗಾಯಿಸುವ ಪರಿಸ್ಥಿತಿ.
- ನಿರ್ವಹಣಾ ಅನುಭವವನ್ನು ಸಮೀಕರಿಸಲು.
- ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು.
- ಯೋಜನಾ ವೆಚ್ಚ ಮತ್ತು ಸೇವಾ ಶುಲ್ಕವನ್ನು ಹಿಂಪಡೆಯುವಿಕೆಯನ್ನು ವೃದ್ಧಿಸಲು.
- ಉತ್ತಮ ಗ್ರಾಹಕ ಸೇವೆ ಮತ್ತು ಸಹ ಸ್ಪಂದನವನ್ನು ಒದಗಿಸಲು.

**ವಿಶೇಷ ಉದ್ದೇಶಿತ ವಾಹಕ (SPV) ಎಂದರೇನು?**

- ಪ್ರತಿಯೊಂದು ಯೋಜನೆಯನ್ನು ಜಾರಿಗೊಳಿಸಲು ರಚನೆಯಾಗುವ ಹೊಸ ಕಂಪನಿ.
- ಮಾತೃ ಸಂಸ್ಥೆಯಿಂದ ಕಾನೂನಾತ್ಮಕ ಬದ್ಧತೆಯ ಪಾಲುದಾರಿಕೆ ಹೊರತಾಗಿ ಮತ್ತಾವುದೇ ಹಣಕಾಸು ನೆರವು ದೊರೆಯುವುದಿಲ್ಲ.
- ಬಹಳಷ್ಟು ಬದ್ದತೆಯ ಒಪ್ಪಂದವು ನಿರ್ಮಾಣ, ನಿರ್ವಹಣೆ, ವ್ಯವಸ್ಥಾಪನೆ, ಬಂಡವಾಳ ಹಿಂಪಡೆಯುವಿಕೆ, ವಿನಾಯಿತಿ ಮುಂತಾದ ವಿವರಗಳನ್ನು ಒಳಗೊಂಡಿರುತ್ತದೆ.
- ಆರ್ಥಿಕ ದಿವಾಳಿತನ ರಹಿತ– ಯೋಜನೆ ಮತ್ತು ಪ್ರಾಯೋಜಕರು ಸುರಕ್ಷಿತ.
- ಪಾಲುದಾರರು ಬ್ಯಾಂಕಿನ ಖಾತೆಗೆ ಹಣ ತುಂಬುವಂತೆ ಮಾಡಿ ಬ್ಯಾಂಕಿನಿಂದ ನಿಯಂತ್ರಿಸುತ್ತದೆ.

- ಗುರಿಯನ್ನು ತಲುಪಿಸುವ ಸಾಧನವಾಗಿ ಗೌರವಧನ ಕಾರ್ಯನಿರ್ವಹಿಸುತ್ತದೆ.
- ಸುಲಭವಾಗಿ ಅಳೆಯಬಹುದಾದ ಮತ್ತು ಪರಿಶೀಲಿಸಬಹುದಾದ ಗುರಿಗಳನ್ನು ನಿಗಧಿಪಡಿಸುವುದು ಕಷ್ಟಕರವಾಗಿದೆ (ಎಲ್ಲಾ ನಗರ ಸಭೆಗಳು ಇದೇ ಪರಿಸ್ಥಿತಿ ಎದುರಿಸುತ್ತಿದೆ)
- ಸಾರ್ವಜನಿಕ ವಲಯದ ಕಡಿಮೆ ಬಂಡವಾಳ ಹೂಡಿಕೆ.
- ಗುರಿಯ ಸಾಧನೆಯ ನಿಯಂತ್ರಣ ಸಾರ್ವಜನಿಕ ಮತ್ತು ಖಾಸಗಿಯವರ ಜವಾಬ್ದಾರಿಯಾಗಿದೆ.
- ಆರೋಗ್ಯಕರವಾದ ಸ್ಪರ್ಧೆಯನ್ನು ನಗರ ಪ್ರದೇಶಗಳಲ್ಲಿ ಪರಿಚಯಿಸುತ್ತದೆ.

ಸಂಪೂರ್ಣ ಖಾಸಗೀಕರಣ

ನಿರ್ಮಿಸು, ನಿರ್ವಹಿಸು, ಹಸ್ತಾಂತರಗೊಳಿಸುವ ರಿಯಾಯಿತಿಗಳು

ನಡೆಸುವುದು ಮತ್ತು ದುರಸ್ತಿಯ ರಿಯಾಯಿತಿಗಳು

ನಿರ್ವಹಣೆ ಮತ್ತು ದುರಸ್ತಿ ಒಪ್ಪಂದಗಳು

ಕೆಲಸ ಮತ್ತು ಸೇವೆಯ ಒಪ್ಪಂದಗಳು

**ಯಾವ ಬಗೆಯ ಖಾಸಾಸ ಮಾದರಿಗಳಿವೆ?**

**ಸೇವೆಯ ಒಪ್ಪಂದವೆಂದರೇನು (ಸರ್ವಿಸ್ ಕಾಂಟ್ರ್ಯಾಕ್ಟ್)**

- ಅತ್ಯಂತ ಸುಲಭ, ಕಡಿಮೆ ಬೆದರಿಕೆಯ ಮೂಲಕ ಕಡಿಮೆ ಸ್ಪರ್ದೆಯನ್ನು ಏರ್ಪಡಿಸಿ ಸರಿ ಸುಮಾರು ಲಾಭ ಪಡೆಯಲು ಹಾಗೂ ಸಾಮಾರ್ಥ್ಯ ವೃದ್ಧಿಗೊಳಿಸುವುದು.
- ಸ್ಪಷ್ಟವಾದ ವ್ಯವಸ್ಥೆಯ ಭಾಗಗಳನ್ನು ಹೊರಗೆ ನೀಡಿ, ಖಾಸಗಿ ಕ್ಷೇತ್ರದವರಿಗೆ ಅವಕಾಶ ನೀಡಿದರೂ ಹೆಚ್ಚಿನ ಲಾಭ ನೀಡಲಾಗದು.
- ಉಪಯೋಗಕಾರಿ ಮೊದಲ ಹೆಜ್ಜೆ.
- ಖಾಸಗಿ ಭಾಗಿದಾರರಿಂದ ಬಂಡವಾಳ ಹೂಡಿಕೆ ಇಲ್ಲ.

**ನಿರ್ವಹಣಾ ಒಪ್ಪಂದ (ಮ್ಯಾನೆಜ್‌ಮೆಂಟ್ ಕಾಂಟ್ರ್ಯಾಕ್ಟ್)**

- ಪ್ರತಿನಿತ್ಯದ ನಿರ್ವಹಣೆಗೆ ನಿಯಂತ್ರಣ ಮತ್ತು ಅಧಿಕಾರ ಖಾಸಗಿ ಸಂಸ್ಥೆಗೆ.
- ಗುತ್ತಿಗೆದಾರರಿಗೆ ಸಾಮಾರ್ಥ್ಯವನ್ನು ವೃದ್ಧಿಸಲು ಅವಕಾಶ ನೀಡಿ ಅದಕ್ಕೆ ಸೂಕ್ತ ಪ್ರತಿಫಲವನ್ನು ದೊರಕಿಸುತ್ತಾ ಹೊಂದುವುದು.
- ನಿಗಧಿಪಡಿಸಿದ ಗುರಿಯನ್ನು ತಲುಪಿದಂತೆ ಆರ್ಥಿಕ ಲಾಭ.
- ಸಾರ್ವಜನಿಕ ಉಧ್ಯಮದಿಂದ ಬಂಡವಾಳ ಹೂಡಿಕೆ.
- ಅಳೆಯಬಲ್ಲ ಸ್ಪಷ್ಟ ಗುರಿಗಳನ್ನು ಮಾಪನ ಮಾಡಲು ಕಷ್ಟ.

- ಗುರಿಯನ್ನು ಮುಟ್ಟಲು ಕೇವಲ ಖಾಸಗಿಯವರನ್ನು ಅವಲಂಬಿಸುವುದು.
- ನಗರದೊಳಗೆ ಮಾತ್ರ ಸ್ಪರ್ದೆಯನ್ನು ಏರ್ಪಡಿಸಲು ಸಾಧ್ಯ.

**ಗುತ್ತಿಗೆ ಒಪ್ಪಂದ (ಲೀಸ್ ಕಾಂಟ್ರ್ಯಾಕ್ಟ್) ಎಂದರೇನು?**

- ಸಾರ್ವಜನಕ ಆಸ್ತಿಯನ್ನು ನಿರ್ದಿಷ್ಟ ನಿಬಂಧನೆಗಳಿಗೊಳಪಡಿಸಿ ಖಾಸಗಿಯವರಿಗೆ ನೀಡುವುದು.
- ಸೇವಾ ಗುಣಮಟ್ಟ ಹಾಗೂ ನಿರ್ಧಿಷ್ಟ ಪ್ರಮಾಣಗಳಿಗೆ ಸಂಬಂಧಿಸಿದಂತೆ ಖಾಸಗಿಯವರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
- ನಿರ್ವಾಹಕನು ಸೇವೆಯನ್ನು ತನ್ನ ವೆಚ್ಚ ಮತ್ತು ಹಾನಿ ಪರಿಗಣಿಸಿ ನೀಡುತ್ತಾನೆ.
- ಖರ್ಚಾಗುವ ಸೇವೆಯ ಪ್ರಮಾಣ ಮತ್ತು ನಿಗಧಿಪಡಿಸಿದ ಬೆಲೆಯನ್ನಾಧರಿಸಿ ಖಾಸಗಿಯವರು ಆದಾಯ ಪಡೆಯುತ್ತಾರೆ.
- ನಿರ್ವಹಣೆ ಮತ್ತು ವ್ಯವಸ್ಥಾಪನೆ ಖಾಸಗಿಯವರ ನಿಯಂತ್ರಣದಲ್ಲಿರುತ್ತದೆ.
- ಆದಾಯವು ನಿರ್ಧಿಷ್ಟ ಪಡಿಸಿದ ಬೆಲೆಯ ಆಧಾರ ಹಾಗೂ ಹಾನಿ ಸಾಧ್ಯ.
- 10 ರಿಂದ 20 ವರ್ಷಗಳ ಕಾಲಾವಧಿ.

**ನಿರ್ಮಾಣ–ನಿರ್ವಹಣೆ–ವರ್ಗಾವಣೆ (BOT) ಎಂದರೇನು?**

- ಮೂಲ ಬಂಡವಾಳವು ಖಾಸಗಿಯವರಿಂದ ಪೂರೈಸಲ್ಪಡುತ್ತದೆ.
- ಸುಸ್ಥಿರವಾದ ಯೋಜನೆಯಾಗಿದೆ.
- ಒಪ್ಪಂದದ ಅವಧಿಯವರೆಗೂ ಆಸ್ತಿಯ ಒಡೆತನ ಖಾಸಗಿಯವರದಾಗಿರುತ್ತದೆ.
- ನಿರ್ದಿಷ್ಟ ಗುಣಪಟ್ಟದ ಸೇವೆಯನ್ನು ಮತ್ತು ಉತ್ಪಾದನೆಯನ್ನು ಖಾಸಗಿಯವರಿಂದ ಪಡೆಯಲು ಸರ್ಕಾರ ಸಮ್ಮತಿಸಿರುತ್ತದೆ.

**ವಿನಾಯಿತಿ (Concession) ಎಂದರೇನು?**

- ನಿರ್ಧಿಷ್ಟಪಡಿಸಿದ ವಲಯಗಳ ಕಟ್ಟುವಿಕೆ, ನಿರ್ವಹಣೆ, ನಿರ್ಮಾಣ, ಸಂಗ್ರಹಣೆ, ವ್ಯವಸ್ಥಾಪನೆ ಮತ್ತು ದುರಸ್ಥಿಯು ಖಾಸಗಿಯವರದಾಗಿರುತ್ತದೆ.
- ಬಂಡವಾಳ ಹೂಡಿಕೆ ಖಾಸಗಿಯವರದಾಗಿರುತ್ತದೆ.
- ಕಂದಾಯವು ಬಳಕೆದಾರರ ಶುಲ್ಕ ಮತ್ತು ನಿರ್ಧಿಷ್ಟ ದರದಿಂದ ಬರುತ್ತದೆ.
- 25 ಕ್ಕಿಂತ ಹೆಚ್ಚು ವರ್ಷಗಳ ಒಪ್ಪಂದ.
- ರಾಜಕೀಯ ಸಂಕಷ್ಟಗಳು / ತೆರಿಗೆ ನವೀಕರಣ – ತೊಡಕುಗಳು.
- ಕಡಿಮೆ ಸ್ಪರ್ಧೆ.

**ಸಾ.ಖಾ.ಸ. ಅಭಿವೃದ್ಧಿಯಲ್ಲಿ ಅಡಗಿರುವ ಮುಖ್ಯ ಹಂತಗಳು :**

ಯೋಜನೆ ಗುರುತಿಸುವಿಕೆ

↓

ತಾಂತ್ರಿಕ ಸಾಮರ್ಥ್ಯದ ಮೌಲ್ಯಮಾಪನ

↓

ಹಣಕಾಸು ಸಾಧ್ಯತೆಗಳ ಪರಿಶೀಲನೆ

↓

ಯೋಜನಾ ರಚನೆಯಲ್ಲಿ ಮತ್ತು ಆಯ್ಕೆಯ ಮೌಲ್ಯಮಾಪನ

↓

ಯೋಜನೆ ಅನುಷ್ಠಾನ ಸಂಬಂಧಿಸಿದ ವಿಚಾರಗಳ ನಿರ್ಣಯ

↓

ಹರಾಜು ದಾಖಲೆ

↓

ಹರಾಜು ಪ್ರಕ್ರಿಯೆ

**ಸಾ.ಖಾ.ಸ. ಯೋಜನೆಯ ಆಯ್ಕೆಯಲ್ಲಿರುವ ಪ್ರಮುಖ ಆಧಾರಗಳು ಯಾವುವು?**

- ಖಾಸಗಿಯವರು ನಿರ್ವಹಿಸುವ ಕ್ಷೇತ್ರವಾಗಿರಬೇಕು.
- ಸಾರ್ವಜನಿಕ ಯೋಜನೆಯು ಖಾಸಗಿಯವರ ಬಂಡವಾಳದಿಂದ ನಿರ್ಮಾಣವಾಗುತ್ತದೆಯೆ ಹೊರತು ಖಾಸಗಿಯವರ ಯೋಜನೆಗೆ ಸಾರ್ವಜನಿಕ ಕ್ಷೇತ್ರದ ಪೂರಕ ಸಹಕಾರವಲ್ಲ.
  ಉದಾ: 1).ಬೆಂಗಳೂರಿನಲ್ಲಿ ಹೊಟೆಲ್ ಉದ್ಯಮ ಮತ್ತು ಹೊಟೆಲ್ ಇಲ್ಲದ ಸಾಂಸ್ಕೃತಿಕ ಪರಂಪರೆಯ ಸ್ಥಳದಲ್ಲಿ ಹೊಟೆಲ್.
  2) ವ್ಯಾಪಾರದ ಚಟುವಟಿಕೆಯ ಸಂಕೀರ್ಣ ಮತ್ತು ಸಮಗ್ರ ಸಾರ್ವಜನಿಕ ಸಾರಿಗೆಯ ಸಮುಚ್ಛಯ.



- ದೈನಂದಿನ/ಸಾಮಾನ್ಯ ಬಳಕೆಯ ಉದ್ದೇಶ ಹೊಂದಿರುತ್ತದೆ. ಉದಾ: ಖಾಸಗಿ ರೈಲ್ವೆ ಹಳಿ, ಬಂದರು ಅಥವಾ ಸಾಮಾನ್ಯ ಬಳಕೆಯ ಸಾರಿಗೆ ಸಮುಚ್ಛಯ.
- ಸ್ವಲ್ಪಮಟ್ಟಿನ ಹಣಕಾಸು ಹಾಗೂ ರಚನಾತ್ಮಕ ನೆರವನ್ನು ಒದಗಿಸಿದರೆ, ವಾಣಿಜ್ಯವಾಗಿ ಚಟುವಟಿಕೆ ಪ್ರಯೋಜನವಾಗಿರುತ್ತದೆ.

**ಯೋಜನೆಯನ್ನು ಗುರುತಿಸುವಲ್ಲಿರುವ ಪ್ರಮುಖ ಹಂತಗಳು ಯಾವುವು?**

- ಸಾ.ಖಾ.ಸ ಮಾದರಿಗೆ ಆಯ್ಕೆ ಪಟ್ಟಿಗಳಿಂದ ಸೂಕ್ತವಾದ ಯೋಜನೆ ಆಯ್ಕೆಮಾಡುವುದು.
- ಅವಕಾಶಗಳ ಪ್ರಾಥಮಿಕ ವಿಶ್ಲೇಷಣೆ.
- ಸಾಖಾಸ ಸಾಧ್ಯತೆಗಳ ಪ್ರಾಥಮಿಕ ವಿಶ್ಲೇಷಣೆ.
- ಜಮೀನು, ಜಮೀನು ಬಳಕೆ ಮತ್ತು ಮೂಲ ಒಪ್ಪಿಗೆಗೆ ಸಂಬಂಧಿಸಿದಂತೆ ಅವಶ್ಯಕ ಸಾಧನಗಳ ವಿಶ್ಲೇಷಣೆ.

**ಸಾಧ್ಯತೆಗಳ ವಿಶ್ಲೇಷಣೆಯಲ್ಲಿರುವ ಮುಖ್ಯಾಂಶಗಳು :**

- ಮಾರಾಟ ಅವಕಾಶಗಳ ವಿಶ್ಲೇಷಣೆ.
- ತಾಂತ್ರಿಕ ಮತ್ತು ಹಣಕಾಸು ಸಾಧ್ಯತೆಗಳ ಪರಿಶೀಲನೆ.
- ಹಣಕಾಸು ರೂಪುರೇಷೆ.
- ಸಂಕಷ್ಟಗಳನ್ನು ಹಂಚಿಕೊಳ್ಳುವ ಮಾದರಿಯಲ್ಲಿ ಸಾ.ಖಾ.ಸ. ರಚನೆ.

**ಖಾಸಗಿ ನಿರ್ವಾಹಕರ ಆಯ್ಕೆಯಲ್ಲಿ ಅಳವಡಿಸಿಕೊಳ್ಳಬೇಕಾದ ಅಂಶಗಳು ಯಾವುವು?**

- ಮುಕ್ತ ಮತ್ತು ಪಾರದರ್ಶಿಕ ಮಾದರಿಯಲ್ಲಿ ಖಾಸಗಿ ನಿರ್ವಾಹಕನ ಆಯ್ಕೆ.
- ತಾಂತ್ರಿಕ ಮತ್ತು ಹಣಕಾಸು ಸಾಮರ್ಥ್ಯ ಆಯ್ಕೆಗೆ ಮಾನದಂಡ.
- ಎಲ್ಲಾ ಹರಾಜುದಾರರಿಗು ಸಮಾನ ಮಾಹಿತಿ ಮತ್ತು ಸಹಕಾರ.
- ಒಪ್ಪಂದಕ್ಕೆ ಸಂಬಂಧಿಸಿದಂತೆ ಸ್ಪಷ್ಟತೆ ಹಾಗೂ ನಿಖರತೆ.
- ಕಾಲಮಿತಿ ಮತ್ತು ಉತ್ತಮ ನಿರ್ವಹಣಾ ಸಾಮಾರ್ಥ್ಯವನ್ನು ಹರಾಜಿನಲ್ಲಿ ಅಳವಡಿಸಿಕೊಳ್ಳುವುದು.

**ಯೋಜನೆಯಲ್ಲಿ ಎದುರಾಗುವ ತೊಡಕುಗಳು ಯಾವುವು:**



- ಅಭಿವೃದ್ಧಿಗೆ ಸಂಬಂದಿಸಿದ ತೊಡಕು.
- ಪ್ರಾಯೋಜಕತ್ವದ ತೊಡಕು.
- ಪ್ರತಿರೋಧದ ತೊಡಕು
- ಮುಕ್ತಾಯ ಅವಧಿಯ ತೊಡಕು
- ನಿರ್ವಹಣಾ ತೊಡಕು
- ಬೇಡಿಕೆ/ಮುಜರಾಯಿ/ಮಾರುಕಟ್ಟೆ ತೊಡಕು
- ಹಣಕಾಸು ತೊಡಕುಗಳು
- ಸಾಮಾಜಿಕ ಮತ್ತು ಪರಿಸರದ ತೊಡಕು
- ನೈಸರ್ಗಿಕ ಆಘಾತಗಳ ತೊಡಕು
- ಸರ್ಕಾರದ ಕ್ರಮ ಮತ್ತು ಸಾಮಾಜಿಕ ತೊಡಕು.
- ಕಾನೂನಾತ್ಮಕ ತೊಡಕುಗಳು
- ಎದುರಾಗುವ ಸಮಸ್ಯೆಗಳು.
- ಅಪ್ರಾಮುಖ್ಯತೆ ವಿಷಯಗಳಿಂದಾಗುವ ಸಮಸ್ಯೆಗಳು.

**ಹರಾಜು ಪ್ರಕ್ರಿಯೆಯು ಒಂದು ಅಥವಾ ಎರಡು ಹಂತಗಳಲ್ಲಿರಬೇಕೆ?**

ಹರಾಜು ಪ್ರಕ್ರಿಯೆಯು ಎರಡು (2) ಹಂತಗಳನ್ನೊಳಗೊಂಡಿದ್ದು, ಮೊದಲ ಹಂತದ ಹರಾಜಿನಲ್ಲಿ ಖಾಸಗಿಯವರ ತಾಂತ್ರಿಕ ಅರ್ಹತೆ ಹಣಕಾಸು ಪರಿಸ್ಥಿತಿ ಮತ್ತು ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಹರಾಜುದಾರರ ಯೋಗ್ಯಪಟ್ಟಿಯನ್ನು ಸಿದ್ದಪಡಿಸಲಾಗುತ್ತದೆ. ಈ ಹಂತವನ್ನು ಅರ್ಹತೆಯನ್ನು ಮಾಪನ ಮಾಡುವ ಹಂತವೆಂಬುದಾಗಿ ಕರೆಯುತ್ತಾರೆ. ಎರಡನೇ ಹಂತದಲ್ಲಿ ತಾಂತ್ರಿಕ ಸಾಮರ್ಥ್ಯ ಹಾಗೂ ಹಣಕಾಸಿನ ಮೂಲಗಳ ವಿವರಗಳೊಂದಿಗೆ ಯೋಜನೆಯ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಮಂಡಿಸಿರುತ್ತಾರೆ.

**ಹರಾಜಿಗೆ ಅಗತ್ಯವಿರುವ ದಾಖಲೆಗಳು ಯಾವುವು?**

1. ಯೋಜನೆಯ ಮಾಹಿತಿಯುಳ್ಳ ಒಡಂಬಡಿಕೆ ಪತ್ರ.
2. ಅರ್ಹತೆಗೆ ಮನವಿ
3. ಪ್ರಸ್ತಾವನೆಗೆ ಮನವಿ.
4. ಕರಡು ಕರಾರು ದಾಖಲೆ ವಿನಾಯಿತಿ ಒಪ್ಪಂದ

**ಅರ್ಹತೆಯೊಂದಿಗೆ ಸಲ್ಲಿಸುವ ಮನವಿ (RFQ) ಒಳಗೊಂಡಿರಬೇಕಾದ ಅಂಶಗಳು ಯಾವುವು?**

- ಯೋಜನೆಯ ಹಿನ್ನೆಲೆ
- ಹರಾಜು ಪ್ರಕ್ರಿಯೆಯ ವಿವರ.
- ಮನವಿ ಸಲ್ಲಿಸುವ ಸಂಸ್ಥೆಯ ಅರ್ಹತೆ, ವಿವರ, ಹಣಕಾಸು ಪರಿಸ್ಥಿತಿ, ಅನುಭವ, ಮುಖ್ಯ

ಸದಸ್ಯರು, ಭಾಗೀದಾರರು.

- ಅರ್ಹತೆಗಳ ಮಾನದಂಡದ ಮೇಲೆ ಮೌಲ್ಯಮಾಪನ.

**ಅರ್ಹತೆಯೊಂದಿಗೆ ಸಲ್ಲಿಸಿದ ಮನವಿ – ಆಯ್ಕೆಯ ವಿಧಾನ ಯಾವುವು?**

- ಪ್ರವೇಶಾವಕಾಶಕ್ಕೆ ಮಾನದಂಡ.
- ಅರ್ಹತೆಗಳ ಮಾನದಂಡ.
    - ಯೋಜನೆಗೆ ಸಂಬಂಧಿಸಿದ ಕ್ಷೇತ್ರದಲ್ಲಿನ ಹಿಂದಿನ ಅನುಭವ.
    - ಹಣಕಾಸು ಸ್ಥಿತಿಗತಿ.

**ಯೋಜನಾ ಪ್ರತಿ – ಒಳಗೊಂಡಿರಬೇಕಾದ ಅಂಶಗಳು ಯಾವುವು?**

- ಅರ್ಹ ಹರಾಜುದಾರರಿಗೆ ಮಾತ್ರ ಯೋಜನಾಪ್ರತಿ ನೀಡುವುದು.
- ಯೋಜನೆಯ ಹಿನ್ನೆಲೆ, ಹರಾಜು ಪ್ರಕ್ರಿಯೆ, ಸಲ್ಲಿಸಬೇಕಾದ ದಾಖಲಾತಿಗಳ ಪ್ರತಿಗಳ ಬಗ್ಗೆ ಹರಾಜುದಾರರಿಗೆ ಸೂಚನೆ ನೀಡುವುದು.
- ಬಿಡ್ಡಿಂಗ್‌ದಾರರಿಂದ ಬ್ಯಾಂಕಿಂಗ್ ಅಥವಾ ಡಿ.ಡಿ. ಭದ್ರತೆ ಪಡೆಯುವುದು.
- ಪರಿಶೀಲನಾ ಉದ್ದೇಶದಿಂದ ಯೋಜನಾ ಪ್ರತಿ ಸಿದ್ದಪಡಿಸುವ ಪೂರ್ವದಲ್ಲಿ ಸಭೆ ಕರೆಯುವುದು.
- ಮೌಲ್ಯಮಾಪನದ ಮಾನದಂಡಗಳು
    - ಒದಗಿಸಲು ಸಿದ್ದವಿರುವ ಸೌಲಭ್ಯಗಳ ವಿವರ
    - ಪೂರ್ವಾನುಭವದಿಂದ ಹರಾಜುದಾರರಲ್ಲಿ ವೃದ್ಧಿಸಿರುವ ಸಾಮರ್ಥ್ಯ
    - ಹಣಕಾಸು ಪರಿಸ್ಥಿತಿ.
- ಕೆಲಸ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಭದ್ರತೆ.

**ಹರಾಜು ಪ್ರಕ್ರಿಯೆ ನಡೆಸುವ ವಿಧಾನ ಯಾವುವು?**

- ಪಾರದರ್ಶಕ, ಮುಕ್ತ ಮತ್ತು ಸ್ಪರ್ಧಾತ್ಮಕ ವಿಧಾನದ ಅಳವಡಿಕೆ.
- ಉದ್ದೇಶಗಳನ್ನು ಸ್ಪಷ್ಟೀಕರಿಸುವುದು.
- ಸೂಕ್ತ ಮಾರ್ಗೋಪಾಯವನ್ನು ಯೋಜನೆಯ ಉದ್ದೇಶವನ್ನು ಸಾಕಾರಗೊಳಿಸಲು ಬಳಸುವುದು.
- ತಾಂತ್ರಿಕ, ಹಣಕಾಸು, ಕಾನೂನಾತ್ಮಕ ಹಾಗೂ ವಾಣಿಜ್ಯ ಚೌಕಟ್ಟನ್ನು ರಚಿಸುವುದು.
- ಅಗತ್ಯ ದಾಖಲಾತಿಗಳನ್ನು ಸಿದ್ದಪಡಿಸುವುದು.
- ಸೂಕ್ತ ಸಂಸ್ಥೆಯ ಆಯ್ಕೆಗಾಗಿ ಉತ್ತಮ ಮಾದರಿಯ ಅಳವಡಿಕೆ.
- ಅಂತಿಮ ಪರಿಶೀಲನೆ ಹಾಗೂ ಒಪ್ಪಂದ ಕರಾರುಗಳನ್ನು ನಿರ್ಣಯಗೊಳಿಸುವುದು.
- ಕೆಲಸ ನಿರ್ವಹಣೆ ಸಾಮರ್ಥ್ಯದ ಮೇಲ್ವಿಚಾರಣೆಗಾಗಿ ಚೌಕಟ್ಟನ್ನು ಅಳವಡಿಸುವುದು.

**ವಿನಾಯಿತಿ (Concession) ಒಪ್ಪಂದ ಎಂದರೇನು?**

ಸರ್ಕಾರಿ ಅಥವಾ ಸ್ಥಳಿಯ ಸಂಸ್ಥೆ ಮತ್ತು ಖಾಸಗಿ ಸಂಸ್ಥೆಯ ನಡುವೆ ಮೂಲಭೂತ ಸೌಕರ್ಯ ನಿರ್ಮಾಣದ ಸಲುವಾಗಿ ಏರ್ಪಡುವ ಒಪ್ಪಂದವನ್ನು "ವಿನಾಯಿತಿ ಒಪ್ಪಂದ" ಎನ್ನುತ್ತೇವೆ.

**ವಿನಾಯಿತಿ ಒಪ್ಪಂದದಲ್ಲಿರುವ ಅಂಶಗಳು :**

ವಿನಾಯಿತಿ ಒಪ್ಪಂದವು

- ಯೋಜನೆಯನ್ನು ಒಪ್ಪಿಕೊಳ್ಳಲು ಇರುವ ನಿಬಂಧನೆಗಳು.
- ಪಾಲುದಾರರ ಕರಾರಿನ ಇತಿಮಿತಿಗಳು ಜವಬ್ದಾರಿಗಳು.
- ಒಪ್ಪಂದದ ಕಾಲಾವಧಿ
- ಸಂಕಷ್ಟಗಳ ನಿರ್ವಹಣೆ ಮತ್ತು ಪರಿಹಾರಗಳು.
- ಪರ್ಯಾಯ ವಿಧಾನದ ಅಳವಡಿಕೆಗೆ ನಿವಾರಣಾ ಅವಕಾಶ
- ನೈಸರ್ಗಿಕ ಹಾನಿಕಾರಕ ಮಾಪನಕ್ಕೆ ಅವಕಾಶ ಮತ್ತು ಪರಿಹಾರ.
- ತಡೆ ಪ್ರಕ್ರಿಯೆ ಮತ್ತು ಪರಿಹಾರ ಧನ ನೀಡಿಕೆ.

**ರಾಜ್ಯ ಬೆಂಬಲಿತ ಒಪ್ಪಂದ**

- ಯೋಜನೆಯ ಜಾರಿಯಲ್ಲಿ ನೆರವು.
- ಸ್ಪರ್ಧೆ–ಸೌಲಭ್ಯಗಳಿಗೆ ಸಂಬಂಧಿಸಿದಂತೆ



**ಸಮಾಲೋಚಕರ –ನೇಮಕಾತಿಯ ಅವಶ್ಯಕತೆ ಇ**

ಸಾ.ಖಾ.ಸ. ಯೋಜನೆಯ ಪ್ರಕ್ರಿಯೆಯು ಸ ... ಸು ಮತ್ತು ತಾಂತ್ರಿಕ ಸಲಹೆಗಳಿಗಾಗಿ ಅನುಭವಿ ಸ ... ರ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳುವುದ ... ಪ್ರಕ್ರಿಯೆಯನ್ನು ದೃಡೀಕರಿಸಬಹುದು. ಯೋಜನೆಯ ಸಂಕೀರ್ಣತೆ ಆಧಾರದ ಮೇಲೆ ಕಾನೂನು, ಹಣಕಾಸು ಮತ್ತು ತಾಂತ್ರಿಕ ವಿಷಯಕ್ಕೆ ಪಾರದರ್ಶಕತೆ ಮತ್ತು ಸ್ವ ಆಸಕ್ತಿಯ ಹೊರತಾದ ಸಮಾಲೋಚಕರನ್ನು ನೇಮಿಸುವುದು ಸೂಕ್ತ.

ಹರಾಜು ಪ್ರಕ್ರಿಯೆಗೆ ಸಮರ್ಥ ಸಮಾಲೋಚಕರನ್ನು ನಿರ್ಧಿಷ್ಟಪಡಿಸಿದ ಕರಾರಿನಂತೆ ಅವರುಗಳ ಕೆಲಸದ ವಿಧಾನದ ಮೂಲಕ ಸಮಾಲೋಚಕರ ನೇಮಕಾತಿ ನಡೆಯಬೇಕಿದ್ದು, ಸಮಾಲೋಚಕರ ಸಾಮರ್ಥ್ಯವು ಸಂಸ್ಥೆಗಳು ಪಡೆದುಕೊಳ್ಳುತ್ತಿರುವ ಸೇವೆಯನ್ನಾಧರಿಸಿದೆ. ನೇಮಕವಾದ 14 ರಿಂದ 18 ವಾರಗಳೊಳಗಾಗಿ, ನಿಗಧಿತ ದಿನಗಳು ವೇತನ ಮತ್ತು ಕೆಲಸದ ಸಾಮರ್ಥ್ಯವನ್ನು ವರ್ಗಾಯಿಸುವ ಮಾದರಿಯನ್ನು ರಚಿಸಲು ಸಿದ್ದರಿರಬೇಕು. ಒಂದು ಅಥವಾ ಎರಡು ಹಂತದಲ್ಲಿ ಸಮಾಲೋಚಕರನ್ನು ಆಯ್ಕೆಮಾಡುವುದು ಸೂಕ್ತ. ನೇಮಕಾತಿಯು ಉತ್ತಮ ದಾಖಲೆಗಳನ್ನು ಒಳಗೊಂಡಿರುವ ಒಪ್ಪಂದವನ್ನು ರಚಿಸಿ ಸಹಿ ಮಾಡಬೇಕು.

ನೇಮಕಾತಿಯು ಸಮಾಲೋಚಕರ ಹಿಂದಿನ ಕಾರ್ಯದಕ್ಷತೆ, ಜೊತೆಗೆ ಕಾರ್ಯಾನುಭವವನ್ನಾಧರಿಸಿದೆ. ಯೋಜನೆಯ ಭಾಗೀದಾರರ ಅರ್ಹತೆಗಳು, ಕಾರ್ಯದಕ್ಷತೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ದಾಖಲಿಸಿರುವುದನ್ನು ಪರಿಶೀಲಿಸಿ, ಯೋಜನೆಯ ಜಾರಿಗೆ ಅಗತ್ಯವಿರುವ ಕಾಲಾವಧಿಯನ್ನು ಪಾಲುದಾರರು ಹರಾಜು ದಾಖಲಾತಿಯಲ್ಲಿ ನೋಂದಾಯಿಸಬೇಕು. ಒಂದು ಮಾದರಿ ಪಾರದರ್ಶಕತೆ ಕರಾರು ಪತ್ರದಲ್ಲಿ ಸಮಾಲೋಚಕರನ್ನು ಒಪ್ಪಂದ ಮಾಡಿಕೊಳ್ಳಬೇಕು.

ಒಪ್ಪಂದವು ಕೆಲಸದ ವ್ಯಾಪ್ತಿ, ಜವಾಬ್ದಾರಿಯುತ ವ್ಯಕ್ತಿಗಳು, ಜಗಳಗಳ ನಿವಾರಣೆ, ಒತ್ತಡದ ಮಾಪನ, ತೆಗೆದುಹಾಕುವಿಕೆ ಕರಾರು, ಯೋಜನಾ ಬೆಲೆ ಮತ್ತು ಪಾವತಿಯ ವಿವರಗಳನ್ನು ಸ್ಪಷ್ಟವಾಗಿ ಒಳಗೊಂಡಿರಬೇಕು. ಸಮಾಲೋಚನ ಸೇವೆಯನ್ನು ಸಾಧ್ಯ ತಾಂತ್ರಿಕ ಮತ್ತು ಹಣಕಾಸು ಹರಾಜಿನ ಪ್ರಾಸ್ತಾವಿಕೆಯನ್ನು ಎರಡು ಲಕೋಟೆಗಳಲ್ಲಿ ಪ್ರತ್ಯೇಕವಾಗಿ ಒಂದು ದೊಡ್ಡ ಲಕೋಟೆಯಲ್ಲಿ ಸಂಗ್ರಹಿಸಿಡುವ ಪ್ರಕ್ರಿಯೆಯಲ್ಲಿ ಸಮಾಲೋಚಕರು ನೆರವಾಗುತ್ತಾರೆ.

**ಸಾಧ್ಯತೆಗಳ ಅಧ್ಯಯನದ ಅಗತ್ಯವಿದೆಯೇ?**

ಅರ್ಹತೆಯೊಂದಿಗೆ ಮನವಿ ಮತ್ತು ಯೋಜನಾಪ್ರತಿಯೊಂದಿಗೆ ಮನವಿ ಸಲ್ಲಿಸುವ ಮುಂಚೆ ಸಾಧ್ಯತೆಗಳ ಅಧ್ಯಯನದ ಅಗತ್ಯವಿದೆ. ತಾಂತ್ರಿಕ ಜ್ಞಾನ, ಹಣಕಾಸು ಸ್ಥಿತಿಗತಿ, ಕಾನೂನಾತ್ಮಕ ಮತ್ತು ಆಡಳಿತಾತ್ಮಕ ವಿಷಯಗಳನ್ನು ಯೋಜನೆಯ ಪ್ರಾರಂಭದ ಹಂತದಲ್ಲಿಯೇ ಅಳವಡಿಸಲು ಅಧ್ಯಯನ ಸಹಕಾರಿಯಾಗಿದೆ. ಇದರಿಂದ ಭವಿಷ್ಯದ ಸಮಸ್ಯೆಗಳನ್ನು ಗುರುತಿಸುವ ಮತ್ತು ನಿಗ್ರಹಿಸುವ, ಆರ್ಥಿಕ ನೆರವಿಗಾಗಿ ಬ್ಯಾಂಕಿನ ಅಗತ್ಯತೆಗಳನ್ನು ಪೂರೈಸಲು ನೆರವಾಗುತ್ತದೆ. ಹಣಕಾಸು, ತಾಂತ್ರಿಕ ಮತ್ತು ಕಾನೂನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಾಧ್ಯತಾ ವರದಿ ಸಿದ್ದಪಡಿಸುವುದು ಉತ್ತಮವಾಗಿದೆ. ಸಾಧ್ಯತಾ ಪೂರ್ವ ಅಧ್ಯಯನವು ಆಂತರಿಕ ಪ್ರಕ್ರಿಯೆಯಾಗಿದ್ದು, ಸವಿಸ್ತಾರವಾದ ಪರಿಕಲ್ಪನಾ ಪ್ರತಿ ಸಿದ್ದಪಡಿಸಲು ಸಮಾಲೋಚಕರಿಗೆ ನೆರವಾಗುತ್ತದೆ.

**ಸಾಧ್ಯ ಸಾಧ್ಯತಾ ಅಧ್ಯಯನವು ಕೆಳಕಂಡ ಅಂಶಗಳನ್ನೊಳಗೊಂಡಿರಬೇಕು:**

- ಸಾಮಾನ್ಯ ಮತ್ತು ವಾಸ್ತುಶಿಲ್ಪ ವಿನ್ಯಾಸ.
- ಬೆಲೆಗಳ ಸಮೀಕ್ಷೆ ಮತ್ತು ಪ್ರಮಾಣ.
- ಯೋಜನೆ ಮತ್ತು ತೆರಿಗೆ ಅಧ್ಯಯನ
- ತಾಂತ್ರಿಕ ಸಾಧ್ಯತೆಯ ಅಧ್ಯಯನ ಮತ್ತು ವಿಶ್ಲೇಷಣೆ
- ಜೀವಿತಾವಧಿಯ ಲೆಕ್ಕ ಮತ್ತು ಅವಲೋಕನ
- ಯೋಜನೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆ.

*Note*

*Note*

*Note*

*Note*

*Note*

## 8.2 “ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ”– ತರಬೇತಿ ಕಾರ್ಯಕ್ರಮ

**ರಸಪ್ರಶ್ನೆ**

**(ಸೂಚನೆ : ಮುಖ್ಯಪದಗಳು ಮತ್ತು ವ್ಯಾಖ್ಯೆಗಳ ವಿವರಗಳನ್ನು ಗಮನಿಸಿರಿ)**

1. ನಗರ ಪ್ರದೇಶಗಳಲ್ಲಿ ಮೂಲ ಸೇವಾ ಸೌಕರ್ಯಗಳ ಸಾರ್ವತ್ರಿಕ ದೊರೆಯುವಿಕೆಯನ್ನು ನಗರ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಅಗತ್ಯವಿರುವುದು,
   (1) ಅಪಾರ ಬಂಡವಾಳ (2) ನಿರ್ವಹಣಾ ಕೌಶಲ್ಯ
   (3) ಸುಸ್ಥಿರತೆ (4) ಮೇಲಿನ ಎಲ್ಲವು
2. ಸಾರ್ವತ್ರಿಕ ಮತ್ತು ಸುಸ್ಥಿರ ಸೇವೆಗಳನ್ನು ಹೆಚ್ಚುತ್ತಿರುವ ಬೇಡಿಕೆಗಳನ್ನು ಒದಗಿಸುವ ಉದ್ದೇಶದಿಂದ ಸರ್ಕಾರವು ಸಾ.ಖಾ.ಸ. ಹೊರಗುತ್ತಿಗೆ ಅನುಷ್ಠಾನ ಮಾದರಿಯನ್ನು ಹೆಚ್ಚಾಗಿ ಉತ್ತೇಜಿಸುತ್ತಿದೆ.
   (1) ಹೌದು (2) ಇಲ್ಲ
   (3) ಸ್ವಲ್ಪಮಟ್ಟಿಗೆ (4) ಗೊತ್ತಿಲ್ಲ
3. ಖಾಸಗಿಯವರಿಂದ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸುವ ಉದ್ದೇಶದಿಂದ ಕೆಲವೊಂದು ನಿಬಂಧನೆಗೊಳಪಟ್ಟು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ನಡುವೆ ನಡೆದ ವ್ಯವಸ್ಥಿತ ಒಡಂಬಡಿಕೆಯೇ ಸಾ.ಖಾ.ಸ. ವಾಗಿದೆ.
   (1) ಹೌದು (2) ಇಲ್ಲ
   (3) ಸ್ವಲ್ಪಮಟ್ಟಿಗೆ (4) ಗೊತ್ತಿಲ್ಲ
4. ಜವಾಬ್ದಾರಿತನವು (Accountability) ಇವರ ಜವಾಬ್ದಾರಿಯಾಗಿದೆ.
   (1) ಖಾಸಗಿ ಸಂಸ್ಥೆ (2) ಸಾರ್ವಜನಿಕ ಸಂಸ್ಥೆ
   (3) ನ್ಯಾಯಾಲಯ (4) ಎಲ್ಲರ ಜವಾಬ್ದಾರಿ
5. ನಗರಾಡಳಿತದಲ್ಲಿ ಸಾ.ಖಾ.ಸ. ಮಾದರಿ ಅನಿವಾರ್ಯವಾಗಲು ಕಾರಣ
   (1) ಖಾಸಗಿಯವರನ್ನು ಸಾರ್ವಜನಿಕ ವಲಯಕ್ಕೆ ಆಕರ್ಷಿಸಲು
   (2) ಖಾಸಗಿಯವರ ನಿರ್ವಹಣಾ ಅನುಭವದ ಪ್ರಯೋಜನ ಪಡೆಯಲು
   (3) ಹೊಸ ತಂತ್ರಜ್ಞಾನದ ಅಳವಡಿಕೆ ಮತ್ತು ಹೂಡಿದ ಬಂಡವಾಳದ ವಾಪಸ್ಸು ಪಡೆಯಲು
   (4) ಎಲ್ಲಾ ಅಂಶಗಳು
6. ವಿಶೇಷ ಉದ್ದೇಶಿತ ವಾಹಕವೆಂದರೆ (SPV)
   (1) ಪ್ರತಿ ಹೊಸ ಯೋಜನೆಯನ್ನು ಜಾರಿ ಮಾಡಲು ರಚಿಸುವ ಸಂಸ್ಥೆ.
   (2) ಪ್ರಾಯೋಜಕತ್ವ ವಹಿಸುವ ಸಂಸ್ಥೆ
   (3) ಒಪ್ಪಂದಲ್ಲೇರ್ಪಡುವ ತಕರಾರುಗಳನ್ನು ನಿರ್ವಹಿಸುವ ಸಂಸ್ಥೆ.
   (4) ಮೇಲಿನ ಎಲ್ಲವು

7. ವಿನಾಯಿತಿ (**Concession**) ಎಂದರೆ

(1) ಅಸಮರ್ಥ್ಯ ನಿರ್ವಹಣಾ ತಕರಾರುಗಳ ಹಕ್ಕುಗಳನ್ನು ಅನುಭವಿಸಲು ಇರುವ ರಹದಾರಿ.

(2) ಹಕ್ಕುಗಳನ್ನು ಸಂಪಾದಿಸಿಕೊಳ್ಳುವ ಒಂದು ಅವಕಾಶ.

(3) ಆದಾಯ ಗಳಿಸುವ ಒಂದು ಪರ್ಯಾಯ ಮಾರ್ಗ.

(4) ಯಾವುದು ಅಲ್ಲ.

8. ಸೇವಾ ಒಪ್ಪಂದವೊಂದು

(1) ಕಡಿಮೆ ತೊಂದರೆಗಳೊಂದಿಗೆ ದಕ್ಷ ಸೇವಾ ಸಾಮರ್ಥ್ಯ ಪಡೆಯುವುದಾಗಿದೆ.

(2) ಲಾಭದಾಯಕತೆಯ ಮೊದಲ ಹಂತ.

(3) ಖಾಸಗಿ ಪಾಲುದಾರರಿಂದ ಯಾವುದೇ ನಬಂಧನೆಗಳಿರುವುದಿಲ್ಲ.

(4) ಮೇಲಿನ ಎಲ್ಲವು.

9. ನಿ.ನಿವ.ವ. ಎಂದರೆ (BOT)

(1) ನಿರ್ಮಾಣ, ನಿರ್ವಹಣೆ, ವರ್ಗಾವಣೆ–ಕನಿಷ್ಠ ಸೌಲಭ್ಯಗಳನ್ನು ಸರ್ಕಾರ ಖಾಸಗಿಯವರಿಂದ ಖರೀದಿಸುತ್ತದೆ.

(2) ಮೂಲ ಬಂಡವಾಳವನ್ನು ಖಾಸಗಿ ಸಂಸ್ಥೆ ಭರಿಸುತ್ತದೆ.

(3) ಆಸ್ತಿಯ ಒಡೆತನ ಒಪ್ಪಂದದ ಅವಧಿಯವರೆಗೂ ಖಾಸಗಿಯವರ ಬಳಿಯಿರುತ್ತದೆ.

(4) ಮೇಲಿನ ಎಲ್ಲವೂ

10. ವಿನಾಯಿತಿ (Concession) ಮಾದರಿಯ ಲಕ್ಷಣಗಳೆಂದರೆ

(1) ಸೇವೆಯ ಎಲ್ಲಾ ಜವಾಬ್ದಾರಿಯ ವರ್ಗಾವಣೆ ಮತ್ತು 25ಕ್ಕೂ ಧೀರ್ಘಾವಧಿಯ ಒಪ್ಪಂದ.

(2) ಖಾಸಗಿ ಪಾಲುದಾರನ ಸಂಪೂರ್ಣ (ನಿಯಂತ್ರಣ) ನಿರ್ವಹಣೆ.

(3) ಬಳಕೆದಾರರ ಶುಲ್ಕದಿಂದ ಕಂದಾಯ/ತೆರಿಗೆ ಸಂಗ್ರಹ.

(4) ಮೇಲಿನ ಎಲ್ಲವೂ.

11. ಖಾಸಾಸ ಅನುಷ್ಠಾನದ ಯಾವುದಾದರೂ ಒಂದು ಯೋಜನೆಯನ್ನು ಗುರುತಿಸಿ.

(1) ಬೆಂಗಳೂರು ವಿಮಾನ ನಲ್ದಾಣ. (2) ಕೊಂಕಣ ರೈಲ್ವೆ ಮಾರ್ಗ.

(3) ಕರ್ನಾಟಕ ನಗರದಲ್ಲಿ ಮೇಲು ಸೇತುವೆ ನಿರ್ಮಾಣ (4) ತುಮಕೂರಿನ ಘನತ್ಯಾಜ್ಯ.

12. ಖಾಸಾಸ – ಖಾಸಗೀಕರಣಕ್ಕೂ ಇರುವ ಒಂದು ವ್ಯತ್ಯಾಸ ಗುರುತಿಸಿರಿ.

(1) ನಿಭಂದನೆಯ ಪಾಲುದಾರಿಕೆ. (2) ಸಂಪೂರ್ಣವಾಗಿ ಖಾಸಗಿ ಒಡೆತನ.

(3) ಸರ್ಕಾರದ ಸಂಪೂರ್ಣ ಹಿಡಿತ (4) ಸಾರ್ವಜನಿಕ ಹಿಡಿತ.

13. ಸರಿಯಾದ ವಾಕ್ಯಗಳನ್ನು ಗುರುತಿಸಿ.

(1) ಖಾಸಾಸ ಅನುಷ್ಠಾನ ದಶಕಗಳ ಅನುಭವ, ಇತಿಹಾಸ ಇದೆ.

(2) ಜನರ ವಿರೋದಗಳಿಂದ ಖಾಸಾಸ ಯೋಜನೆಗಳಿಗೆ ತೊಡಕಿದೆ.

(3) ಸಣ್ಣ ಪಟ್ಟಣಗಳಲ್ಲಿ ಖಾಸಾಸ ಯೋಜನೆಗಳಿಗೆ ಸಾಧ್ಯತೆ ಕಡಿಮೆ.

(4) ಕರ್ನಾಟಕದಲ್ಲಿ ಖಾಸಾಸ ಯೋಜನೆಗಳಿಗೆ ಅವಕಾಶ ಕಡಿಮೆ.

14. ಕರ್ನಾಟಕದಲ್ಲಿ ಹೊಸ ಮೂಲಭೂತ ಸೌಕರ್ಯ ನೀತಿಯನ್ನು .ರಲ್ಲಿ ಜಾರಿಗೆ ಬಂದಿತು.

(1) 1997 (2) 2007 (3) 2008 (4) 1992

15. ಕರ್ನಾಟಕದಲ್ಲಿ ಬರುವ ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ನಗರಪ್ರದೇಶಗಳಲ್ಲಿ 17 ಯೋಜನೆಗಳಲ್ಲಿ 42 ಸಾವಿರ ಕೋಟಿ ರೂಪಾಯಿ ಯೋಜನೆಗಳ ಪ್ರಸ್ತಾವನೆಯಿದೆ.

(1) ಸರಿ (2) ತಪ್ಪು (3) ಗೊತ್ತಿಲ್ಲ (4) .

16. ಶಾಖಾಸ ಅನ್ನು ಅನುಷ್ಠಾನದಲ್ಲಿ ನಿಮ್ಮ ಸ್ಥಳೀಯ ಸಂಸ್ಥೆಯಲ್ಲಿರುವ ಮೂರು ಪೂರಕ ವಿಷಯಗಳಾವುವು

(1)

(2)

(3)

17. ಸಾಖಾಸ ಹೂ. ಅನು ಮಾದರಿಗಳನ್ನು ಯಾವ ಅಭಿವೃದ್ಧಿಯೋಜನೆಗೆ ನಿಮ್ಮ ಸ್ಥಳೀಯ ಸಂಸ್ಥೆಯಲ್ಲಿ ಅನುಷಾನಗೊಳಿಸಲು ಸಾಧ್ಯ.

(1) (2) (3)

18. ಸ್ಥಳೀಯ ಸಂಸ್ಥೆಗಳಲ್ಲಿ ಸಾಖಾಸ ರೂ. ಅನು ದುರ್ಬಳಕೆಯಾಗದಿರಲು ಯಾವ ಕ್ರಮಗಳು ಅಗತ್ಯ

(1) (2) (3)

19. ನಿಮ್ಮ ವ್ಯಕ್ತಿ ಪಳಕೆಯಲ್ಲಿ ಸಾಖಾಸ ಹೂಅನು ಮಾದರಿಗಳನ್ನು ಉಪಯೋಗಿಸಲು ನಿಮಗೆ ಯಾವಾ ಬಗೆಯ ನೈಪುಣ್ಯತೆ ಅಗತ್ಯವಿದೆ.

(1) (2) (3)

20. ನಿಮಗೆ ಇಷ್ಟವಾದ ಸಾಖಾಸ ರೂ. ಅನು ಉದಾಹರಣೆಗಳು

(1) (2) (3)

# ರಾಜ್ಯ ನಗರಾಭಿವೃದ್ಧಿ ಸಂಸ್ಥೆ

**ಆಡಳಿತ ತರಬೇತಿ ಸಂಸ್ಥೆಯ ಅವರಣ, ಲಲಿತ ಮಹಲ್ ರಸ್ತೆ, ಮೈಸೂರು–11.**

**Phone: 0821-2520116  Fax: 0821-2520164**

---

---

**ತರಬೇತಿಗೆ ಹಾಜರಾಗುವ ಪ್ರಶಿಕ್ಷಣಾರ್ಥಿಗಳ ವಿವರ**

ಅ. ತರಬೇತಿಯ ಹೆಸರು :

ಆ. ತರಬೇತಿಯ ಸ್ಥಳ :

ಇ. ತರಬೇತಿಯ ದಿನಾಂಕ : ______________________________

1. ಹೆಸರು :

2. ವಯಸ್ಸು :

3. ವಿದ್ಯಾರ್ಹತೆ :

4. ಸಂಪರ್ಕ ವಿವರಗಳು :

ವಿಳಾಸ :

ದೂರವಾಣಿ/ಮೊಬೈಲ್: ...........................................................................................

5. ಜನಪ್ರತಿನಿಧಿಯಾಗಿ ಸಾರ್ವಜನಕ ಬದುಕಿನಲ್ಲಿನ ನಮ್ಮ ಅನುಭವ: ವರ್ಷ:______ತಿಂಗಳು:______

6. ನಮ್ಮ ಅನಸಿಕೆಯಲ್ಲಿ ನಗರಾಡಳಿತದಲ್ಲಿನ 3 ಸಮಸ್ಯೆಗಳು:

6.1.

6.2.

6.3.

7. ನಮ್ಮ ಅನಿಸಿಕೆಯಲ್ಲಿ ನಗರಾಡಳಿತದ ಸಮಸ್ಯೆಗಳಿಗೆ ಪರಿಹಾರಗಳು:

7.1.

7.2.

7.3.

8. ನಮ್ಮ ಅಭಿಪ್ರಾಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿನ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಗಳಿಗೆ ಮೂರು ಕಾರಣಗಳು:

8.1.

8.2.

8.3.

9. ಈ ತರಬೇತಿಯಲ್ಲಿ ನಮ್ಮ ನಿರೀಕ್ಷೆ ಏನು?

9.1.

9.2.

9.3.

10. ಹೆಸರು: ಸಹಿ: ದಿನಾಂಕ:

# ರಾಜ್ಯ ನಗರಾಭಿವೃದ್ಧಿ ಸಂಸ್ಥೆ,

ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು–11

## “ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ”

**ದಿನಾಂಕ: ........................ ರಿಂದ ........................ ಸ್ಥಳ: ..............................................**

## Expectations

### ತರಬೇತಿಯ ನಿರೀಕ್ಷೆಗಳು

- ➢
- ➢
- ➢
- ➢
- ➢
- ➢

ವಿ. ಸೂ. : ವ್ಯಕ್ತಿ, ಸಮುದಾಯ ಹಾಗೂ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಸಾಖಾಸ ಹೂ. ಅನು ಮಾದರಿಗಳನ್ನು ಉಪಯುಕ್ತವಾಗಿ ತಿಳಿದು ಬಳಸುವ ಪ್ರಕ್ರಿಯೆಯಲ್ಲಿ ತರಬೇತಿಯಿಂದ ನಿಮ್ಮ ನಿರೀಕ್ಷೆವನು

**ರಾಜ್ಯ ನಗರಾಭಿವೃದ್ಧಿ ಸಂಸ್ಥೆ,**
ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು–11
ದೂರವಾಣಿ: 0821–2520116 ಫ್ಯಾಕ್ಸ್: 0821–2520164
e-mail: directorsiud@yahoo.co.in web:www.siudmysore.gov.in

## ಸಾಮಾರ್ಥ್ಯ, ದೌರ್ಬಲ್ಯ ಮತ್ತು ಅವಕಾಶ ಮತ್ತು ಬೆದರಿಕೆ ವಿಶ್ಲೇಷಣೆ

(SWOT Analysis)

**“ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಟಾನ”**

**ತರಬೇತಿ ಸಮನ್ವಯಾಧಿಕಾರಿ: ಪ್ರೊ॥ ವಿ. ಜಗನ್ನಾಥ, ಹುಡ್ಕೊ ಪೀಠ ಮತ್ತು ಬೋಧಕರು, ರಾ.ನ.ಸಂ. ಮೈಸೂರು.**

| ಸಾಮರ್ಥ್ಯ<br>**<u>Strength</u>** | ದೌರ್ಬಲ್ಯ<br>**<u>Weakness</u>** |
|---|---|
| ಅವಕಾಶಗಳು<br>**<u>Opportunities</u>** | ಬೆದರಿಕೆ<br>**<u>Threats</u>** |

ದಿನಾಂಕ:
**Date :**

ಹೆಸರು:
**Name :**

ಸ್ಥಳ:
**Place:**

ವಿ. ಸೂ. : ಸಾಮರ್ಥ್ಯ ಮತ್ತು ದೌರ್ಬಲ್ಯ ಯಾವುದೇ ಸ್ಥಳೀಯ ಸಂಸ್ಥೆಯ ಒಳ ಮುಖದ ಚಿತ್ರ ಹಾಗೂ ಅವಶೇಷಗಳು ಹಾಗೂ ಬೆದರಿಕೆ ಬಾಹ್ಯ ಸ್ವರೂಪದ್ದು. ವಸ್ತುನಿಷ್ಠವಾಗಿ ಸ್ಥಳೀಯ ಸಂಸ್ಥೆಯಲ್ಲಿನ ಪರಿಸ್ಥಿತಿಯನ್ನು ಸಾಖಾಸ ಮಾದರಿಗಳನ್ನು ಬಳಸುವಲ್ಲಿರುವ ಅಂಶಗಳನ್ನು ಪಟ್ಟಿ ಮಾಡುವುದು.

ರಾಜ್ಯ ನಗರಾಭಿವೃದ್ಧಿ ಸಂಸ್ಥೆ,
ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-11
ದೂರವಾಣಿ: 0821-2520116 ಫ್ಯಾಕ್ಸ್: 0821-2520164
e-mail: directorsiud@yahoo.co.in web:www.siudmysore.gov.in

## "ಸಾರ್ವಜನಿಕ ಖಾಸಗಿ ಸಹಭಾಗಿತ್ವ-ಹೊರಗುತ್ತಿಗೆ ಮತ್ತು ಅನುಷ್ಠಾನ"

ದಿನಾಂಕ: ........................ರಿಂದ ..................................
ಸ್ಥಳ:

### Delfi - Test
ಡೆಲ್ಫಿ - ಪರೀಕ್ಷೆ ಮೌಲ್ಯಮಾಪನ

1. ಮೂರು ಸಕಾರಾತ್ಮಕವಾದ ವಿಷಯಗಳು:
**Three Positive Aspects Subjects:**

(ಅ)

(ಆ)

(ಇ)

2. ಮೂರು ನಕಾರಾತ್ಮಕ ವಿಷ0ಯಗಳು:

**Three Negetive Aspects Subjects:**

(ಅ)

(ಆ)

(ಇ)

3. **ಮೂರು ಸಲಹೆಗಳು:**

**Three Suggestions:**

(ಅ)

(ಆ)

(ಇ)

**ಹೆಸರು:**

---

ವಿ. ಸೂ. : ಪ್ರತಿವರ್ಷ ಪ್ರಶಿಕ್ಷಣಾರ್ಥಿಯು ಮೂರು ಸಕಾರಾತ್ಮಕ, ೩ ನಕಾರಾತ್ಮಕ ಹಾಗೂ ಮೂರು ಸಲಹೆಗಳನ್ನು ಪಟ್ಟಿ ಮಾಡುವರು.

ಪ್ರತಿಯೊಂದರ ಅಭಿಪ್ರಾಯವನ್ನು ಇನ್ನುಳಿದವರು ಬಾಕ್ಸ್‌ನಲ್ಲಿ ಸಹಮತವಿದ್ದರೆ ಚಿಹ್ನೆಯನ್ನು ಸಹಮತವಿಲ್ಲದಿದ್ದರೆ ಯಾವುದೇ ಗುರುತನ್ನು ಮಾಡುವುದಿಲ್ಲ.

ಸಂಗ್ರಹಣೆಯಾದ ಸಹಮತದ ಅಭಿಪ್ರಾಯಗಳ ಗರಿಷ್ಠ ಅಂಶಗಳ ಬಗ್ಗೆ ಚರ್ಚಿಸಲಾಗುವುದು.

ರಾಜ್ಯ ನಗರಾಭಿವೃದ್ಧಿ ಸಂಸ್ಥೆ,
ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತಮಹಲ್ ರಸ್ತೆ, ಮೈಸೂರು–570 011
ಫೋನ್: 0821–2520116, ಫ್ಯಾಕ್ಸ್ : 0821–2520164
Website: www.siudmysore.gov.in, E-mail: directorsiud@yahoo.co.in

"ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ"

ದಿನಾಂಕ: ........................ರಿಂದ ..............................
ಸ್ಥಳ:

## ಮೌಲ್ಯಮಾಪನ
## ಅಧಿವೇಶನ 1.2 (ಅ)

1. ತರಬೇತಿ ಕಾರ್ಯಕ್ರಮದ ಉದ್ದೇಶಗಳು ಫಲಕಾರಿಯಾಗಿವೆ0ಯೇ?

| ಹೌದು– | ಇಲ್ಲ– | ಸ್ವಲ್ಪ ಮಟ್ಟಿಗೆ– |
|---|---|---|

ಟೀಕೆಗಳು :

2. ಈ ತರಬೇತಿ ಕಾರ್ಯಕ್ರಮವು ತಮ್ಮ ವೃತ್ತಿಗೆ ಸಂಬಂಧಪಟ್ಟಿರುತ್ತದೆಯೆ? ಮತ್ತು ಈ ಕಾರ್ಯಕ್ರಮದ ನಂತರ ತಾವು ಯಾವ ರೀತಿ ಕಾರ್ಯಪ್ರವೃತ್ತರಾಗಬಹುದು ಎಂಬ ನಿಮ್ಮ ಅಭಿಪ್ರಾಯ?

3. ತಮಗೆ ಕೊಟ್ಟಿರುವ ಓದುವ ಸಾಮಾಗ್ರಿಯ ಪ್ರಾಮುಖ್ಯತೆ?

| ಉತ್ತಮ– | ಸಾಧಾರಣ– | ಕಡಿಮೆ– |
|---|---|---|

ಟೀಕೆಗಳು :

4. ತರಬೇತಿ ಕಾರ್ಯಕ್ರಮದಲ್ಲಿ ಅಳವಡಿಸಲಾಗಿರುವ ವಿಷಯಗಳು:

| ಉತ್ತಮ– | ಸಾಧಾರಣ– | ಕಡಿಮೆ– |
|---|---|---|

ಟೀಕೆಗಳು :

5. ತರಬೇತಿ ಕಾರ್ಯಕ್ರಮದಲ್ಲಿ ಇನ್ನಾವುದಾದರೂ ವಿಷಯ ಸೇರಿಸಬೇಕಾದಲ್ಲಿ ಸಲಹೆಗಳೇನು?

6. ಈ ಕೆಳಗಿನ ಪ್ರತಿಯೊಂದು ಉಪನ್ಯಾಸಗಳಿಗೆ ಸಂಬಂಧಪಟ್ಟಂತೆ ತಮ್ಮ ಅಭಿಪ್ರಾಯವನ್ನು (√) ತಿಳಿಸುವುದು.

| ದಿನ/ ದಿನಾಂಕ | ವಿಷಯ | ಸಂಪನ್ಮೂಲ ವ್ಯಕ್ತಿಗಳು | ಅತ್ಯುತ್ತಮ | ಉತ್ತಮ | ತೃಪ್ತಿಕರ | ಸಾಧಾರಣ |
|---|---|---|---|---|---|---|
| 1 | ಉದ್ಘಾಟನೆ<br>ತರಬೇತಿಯ ಪರಿಚಯ<br>ಪ್ರಶಿಕ್ಷಣಾರ್ಥಿಗಳ ಪರಿಚಯ | | | | | |
| | ನಗರಾಭಿವೃದ್ಧಿಯಲ್ಲಿ ಸಾಖಾಸ-ಹೊ.ಅ. ಮುಖ್ಯ ವಿಷಯಗಳು | | | | | |
| | ಸಹ್ಯ ನಗರಾಭಿವೃದ್ಧಿ | | | | | |
| | ಮೂಲಭೂತ ಸೌಕರ್ಯ ಅಭಿವೃದ್ಧಿ | | | | | |
| | ಸಾ.ಖಾ.ಸ.-ಹೊ.ಅ.- ಪರಿಕಲ್ಪನೆ | | | | | |
| | ಸಾ.ಖಾ.ಸ.-ಹೊ.ಅ.- ಯೋಜನೆ ಅಭಿವೃದ್ಧಿ | | | | | |
| 2 | ಯೋಜನಾ ಆರ್ಥಿಕ ನಿರ್ವಹಣೆ | | | | | |
| | ಹರಾಜು ಮತ್ತು ಒಪ್ಪಂದ ಪ್ರಕ್ರಿಯೆ | | | | | |
| | ಕರಾರು ಮತ್ತು ಹಾನಿ ನಿವಾರಣೆ | | | | | |
| | ಉದಾಹರಣೆಗಳ ವಿಶ್ಲೇಷಣೆ | | | | | |
| 3 | ಅಭ್ಯಾಸಗಳು-ಯಶೋಗಾಥೆಗಳ ವಿಶ್ಲೇಷಣೆ | | | | | |
| | ವ್ಯಕ್ತಿ ಮತ್ತು ಗುಂಪುಗಳ ವಿಶ್ಲೇಷಣೆ ಮತ್ತು ವಿಷಯ ಮಂಡನೆ | | | | | |
| | ಮೌಲ್ಯಮಾಪನ<br>ಡೆಲ್ಫಿ ಪರೀಕ್ಷೆ ಮತ್ತು ಸ್ವಾಟ್ ವಿಶ್ಲೇಷಣೆ | | | | | |
| | ಸಮಾರೋಪ<br>ಪ್ರಮಾಣ ಪತ್ರ ವಿತರಣೆ | | | | | |

ಹೆಸರು :
ಹುದ್ದೆ:

| ಸಂ. | ಹೆಸರು ಪದನಾಮ | ಸಂಸ್ಥೆ | ಸಂಪರ್ಕ ದೂರವಾಣಿ |
|---|---|---|---|
| 1 | ಶ್ರೀ ಜಿ. ಎಂ. ಗೋಪಾಲಗೌಡ<br>ಸಹಾಯಕ ಕಾರ್ಯಪಾಲಕ | ಮಂಗಳೂರು ಮಹಾನಗರ ಪಾಲಿಕೆ | (O) 0824-2450290 |
| 2. | ಶ್ರೀ ಕೆ. ಪಿ. ಜಯರಾಮ<br>ಕಾರ್ಯಪಾಲಕ ಇಂಜಿನಿಯರ್<br>ಕರ್ನಾಟಕ ಜಲಮಂಡಳಿ, ಹುಬ್ಬಳಿ | | |
| 3. | ಶ್ರೀ ಹೆಚ್. ಹೊನ್ನೇಗೌಡ<br>ಕಾರ್ಯಪಾಲಕ ಇಂಜಿನಿಯರ್<br>ಕರ್ನಾಟಕ ನೀರು ಮತಉತ ಒಳ ಚರಂಡಿ, ಮಂಡ್ಯ | ಮಂಡ್ಯ | (R) 080 - 23616991<br>9448193779 |
| 4. | ಶ್ರೀ ರಾಘುವೇಂದ್ರ ಒ ಎಸ್.<br>ಪರಿಸರ ಇಂಜಿನಿಯರ್<br>ನಗರಸಭೆ, ಕುಂದಾಪುರ | ಕುಂದಾಪುರ | (M) 09448507244<br>08254- 230410 |
| 5. | ಶ್ರೀ ಆರ್. ನಾಯರಂ<br>ಕಾರ್ಯಪಾಲಕ ಇಂಜಿನಿಯರ್, | ಬೆಳಗಾಂ<br>ಬೆಳಗಾಂ | 0831- 2405308<br>2405310<br>(M) 9448102297 |
| 6. | ಶ್ರೀ ಡಿ. ಎನ್. ಮರೋಟ<br>ಸೂಪರಿಟೆಂಡಂಟ್ ಇಂಜಿನಿಯರ್<br>ಹುಬ್ಬಳ್ಳಿ | ಹುಬ್ಬಳ್ಳಿ ಮಹಾನಗರ ಪಾಲಿಕೆ | 08362213830<br>08362373736<br>(M) 9945220979 |
| 7. | ಶ್ರೀ ಆರ್. ಎಸ್. ಅರಕೇರಿ<br>ಸಹಾಯಕ ಕಾರ್ಯಪಾಲಕ ಇಂಜಿನಿಯರ್ಬೆಳಗಾಂ<br>ಬೆಳಗಾಂ | | (O) 0831- 2462933<br>0831- 2480810<br>(M) 9448110800 |
| 8. | ಶ್ರೀ ಎನ್. ಕೆ. ದೇಶಪಾಡೆ<br>3ಸಹಾಯಕ ಕಾರ್ಯಪಾಲಕ | | (O) 08472 - 260125<br>(R) 08472-270602<br>(M) 9448435570 |
| 9. | ಶ್ರೀ ಎಂ. ಕೆ. ಮನಗೊಂಡ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಧಾರವಾಡ | KUWASIS | (O) 0836 - 2434705<br>(R) 0836 - 2232061<br>(M) 9448630940 |
| 10. | ಶ್ರೀ ಎಸ್. ಪೂರ್ಣಚಂದ್ರ<br>ಕಾರ್ಯಪಾಲಕ ಅಭಿಯಂತರ<br>ಬೆಂಗಳೂರು | KUDDFC | (O) 080 - 22232021<br>(F) 080- 22232157 |
| 11. | ಶ್ರೀ ಜೆ. ಸಿ. ಸಂಗವಿಮಠ<br>ಸಹಾಯಕ ಕಾರ್ಯಪಾಲಕ<br>KUIDFC ಹುಬ್ಬಳ್ಳಿ | KUDPC | (O) 0836- 2255437<br>M- 9886520239 |
| 12, | ಡಾ|| ಸೈಯದ್ ಅಯ್ ಭಾಷಾ | | (O) 0821- 2443264 |

ಹಿರಿಯ ಬೋಧಕರು (M) 9845363947
ಆಡಳಿತ ತರಬೇತಿ ಸಂಸ್ಥೆ, ಮೈಸೂರು

13. ಪ್ರೊ. ವಿ. ಜಗನ್ನಾಥ್ ರಾಜ್ಯ ನಗರಾಭಿವೃದ್ಧಿ ಸಂಸ್ಥೆ (O) 0821- 2520116
ಹುಡ್ಕೋ ಪೀಠ, ಬೋಧಕರು
ರಾಜ್ಯ ನಗರಾಭಿವೃದ್ಧಿ ಸಂಸ್ಥೆ
ಮೈಸೂರು (M) 9448050595

14. ಶ್ರೀ ಹನುಮಂತಮ್ಮ ಬಿ. ಬೆಳ್ಳಿಕೆರೆ ಕಮೀಶನ್, ಕೊಪ್ಪಳ
15. ಶ್ರೀಪದ್ಮಕಾಂತ ಜೆ. ಸಿಂಧೂರ, ಸಹಾಯಕ ಇಂಜಿನಿಯರ್, DUDC, ದಾವಣಗೆರೆ
16. ಶ್ರೀ ರಾಮಚಂದ್ರ ಮುನಿಯಪ್ಪ, ಕಮೀಷನರ್, ರಾಯಚೂರು ಮುನಿಸಿಪಾಲಿಟಿ
17. ಶ್ರೀ ರಾಜಶೇಖರ ಶೆಟ್ಟಿ, ಸಹಾಯಕ ಇಂಜಿನಿಯರ್, DUDC< ಚಿತ್ರದುರ್ಗ
18. ಶ್ರೀ ಮುನೀರ್ ಮಹಮದ್, ಚೀಫ್ ಆಫೀಸರ್, ಸಂಡೂರು ಮುನಿಸಿಪಲ್ ಕೌನ್ಸಿಲ್
19. ಶ್ರೀ ಜಿ. ರಾಮದಾಸ್, ಕಮೀಷನರ್, ಕೋಲಾರ ಮುನ್ಸಿಪಲ್ ಕೌನ್ಸಿಲ್
20. ಶ್ರೀ ಜಯಮಾಲ ಪಿ. ಮುನ್ಸಿಪಲ್ ಕಮೀಷನರ್, ಖಜಫುಅಇಣಷ ಬೆಂಗಳೂರು
21. ಪ್ರೊ. ವಿ. ಜಗನ್ನಾಥ್
22 ಶ್ರೀಅಬ್ದುಲ್ ಕಯೂಮ್, ಪ್ರಾಜೆಕ್ಟ್, ಡೈರೆಕ್ಟರಂ, DUDC, ಕಾರವಾರ
23. ವಿ.ಬಿ. ವಿಜಯ, ಇಂಜಿನಿಯರ್, ಶ್ರೀರಂಗಪಟ್ಟಣ, ಮುನ್ಸಿಪಾಲಿಟಿ.
24. ಶ್ರೀ ಎಂ. ಕೆ. ಸುಬ್ರಹ್ಮಣ್ಯ, ಇಂಜಿನಿಯರಂ, ಉಡುಪಿ ಮಹಾನಗರಪಾಲಿಕೆ.

## ರಾಜ್ಯ ನಗರಾಭಿವೃದ್ಧಿ ಸಂಸ್ಥೆ

# ಸಾರ್ವಜನಿಕ ಖಾಸಗಿ ಸಹಭಾಗಿತ್ವ
# ಹೊರಗುತ್ತಿಗೆ ಮತ್ತು ಅನುಷ್ಠಾನ


**ರಾಜ್ಯ ನಗರಾಭಿವೃದ್ಧಿ ಸಂಸ್ಥೆ**

ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತಮಹಲ್ ರಸ್ತೆ, ಮೈಸೂರು - 570 011

ಫೋನ್ : 0821 - 2520116 ಫ್ಯಾಕ್ಸ್ : 0821 - 2520164

Website : www.siudmysore.gov.in, E-mail : directorsiud@yahoo.co.in

# ಕೈಪಿಡಿ ಸಿದ್ಧಪಡಿಸಿದ ತಂಡ

**ಡಾ|| ಶ್ರೀಮತಿ ಅಮಿತಾ ಪ್ರಸಾದ್,** ಭಾ. ಆ.ಸೇ. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು

**ಶ್ರೀ ಪ್ರಾಣಲಿಂಗ ಶಿವಸಾಲಿ,** ಕೆ.ಎಂ.ಎ.ಎಸ್., ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

**ಪ್ರೊ|| ವಿ. ಜಗನ್ನಾಥ,** ಹುಡ್ಕೋ ಪೀಠ, ಬೋಧಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

***ಸಹಾಯ:***

**ಶ್ರೀ ಕಲೀಮುಲ್ಲಾ ಎ,** ಸಂಶೋಧನಾ ಸಹಾಯಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

***ಪ್ರಕಟಣೆಗೆ ಪೂರಕ ಮಾಹಿತಿ ಒದಗಿಸಿದವರು :***

**ಶ್ರೀ ಟಿ. ಬಿ. ರೇಣುಕಾ ಪ್ರಸಾದ್,** ಯೋಜನಾ ಸಮನ್ವಯಾಧಿಕಾರಿ, ಬಿ.ಎಂ.ಐ.ಸಿ.ಪಿ., ಬೆಂಗಳೂರು

**ಶ್ರೀ ಮಂಜುನಾಥ್ ಸಿ. ಶೇಖರ್,** ಅಸೋಸಿಯೇಟ್, ಐಡೆಕ್, ಕರ್ನಾಟಕ ಸರ್ಕಾರ

**ಪ್ರೊ|| ಕೃಷ್ಣಮೂರ್ತಿ ಎಸ್.,** ಬೋಧಕರು, ಐ.ಐ.ಎಂ., ಬೆಂಗಳೂರು

**ಶ್ರೀ ಪೂರ್ಣಚಂದ್ರ ಎಸ್.,** ಬೋಧಕರು, ಐ.ಐ.ಎಂ., ಬೆಂಗಳೂರು

**ಡಾ|| ಸೈಯದ್ ಅಜ್ಮಲ್ ಪಾಶ,** ಬೋಧಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು

ಅಂತರ್ಜಾಲ : www.idd.kar.nic.in, www.yashada.org., www.asci.org


ಪ್ರಕಟಣೆ :

**ರಾಜ್ಯ ನಗರಾಭಿವೃದ್ಧಿ ಸಂಸ್ಥೆ,** ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತ್ ಮಹಲ್ ರಸ್ತೆ, ಮೈಸೂರು - 570 011
ದೂರವಾಣಿ : 0821-2520116, ಫ್ಯಾಕ್ಸ್ : 0821-2520164
Web : www.siudmysore.gov.in, e-mail : directorsiud@yahoo.co.in

ಪುಟಗಳು : VIII + 84

ಪ್ರಥಮ ಮುದ್ರಣ : 2010

ಪ್ರತಿಗಳು : 1000

ಮುದ್ರಕರು :
**ವಿಘ್ನೇಶ್ ಗ್ರಾಫಿಕ್ಸ್,** ಮೈಸೂರು
ದೂರವಾಣಿ : 98442 66994

**ಪ್ರಕಟಣೆಯ ಪ್ರಾಯೋಜಕರು :**
ಕರ್ನಾಟಕ ಪೌರಾಡಳಿತ ಸುಧಾರಣೆ ಯೋಜನೆ, ಕೆ.ಯು.ಐ.ಡಿ. & ಎಫ್.ಸಿ., ಬೆಂಗಳೂರು

ಡಾ|| (ಶ್ರೀಮತಿ) ಅಮಿತಾ ಪ್ರಸಾದ್,
ಭಾ.ಆ.ಸೇ.,
ಮಹಾ ನಿರ್ದೇಶಕರು

**Dr. (Smt) AMITA PRASAD,**
I.A.S.,
**Director General**

ಕರ್ನಾಟಕ ಸರ್ಕಾರ
Government of Karnataka

ಆಡಳಿತ ತರಬೇತಿ ಸಂಸ್ಥೆ
ಲಲಿತ್‌ಮಹಲ್‌ರಸ್ತೆ, ಮೈಸೂರು - 570 011

ADMINISTRATIVE TRAINING INSTITUTE
LALITHA MAHAL ROAD, MYSORE - 570 011

08/06/2010

## ಮುನ್ನುಡಿ

ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು, ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸಾಮಾರ್ಥ್ಯಾಭಿವೃದ್ಧಿ ಬಲಪಡಿಸುವ ನಿಟ್ಟಿನಲ್ಲಿ, ರಾಜ್ಯದ ನಗರ ಸ್ಥಳಿಯ ಸಂಸ್ಥೆಗಳ ಅಧ್ಯಕ್ಷರು, ಉಪಾದ್ಯಕ್ಷರು, ಯೋಜನಾ ನಿರ್ದೇಶಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಪರಿಸರ ಅಭಿಯಂತರರುಗಳಿಗೆ ಮೂರು ದಿನಗಳ ವಸತಿಸಹಿತ ತರಬೇತಿಯನ್ನು ರಾಜ್ಯದ ಮೈಸೂರು ಮತ್ತು ಬೆಳಗಾವಿಯಲ್ಲಿ ಜಿಲ್ಲಾಡಳಿತದ ಸಹಕಾರದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ತಾಂತ್ರಿಕ ಸಿಬ್ಬಂದಿಯವರಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನದ ಕುರಿತು ಅರಿವು ಮೂಡಿಸಲು ಈ ಕೈಪಿಡಿಯು ಉಪಯುಕ್ತ ಮಾಹಿತಿ ಒದಗಿಸುತ್ತದೆ. ಸ್ಥಳಿಯ ಅಗತ್ಯಗಳಿಗೆ ಅನುಗುಣವಾಗಿ, ಭಾಗವಹಿಸುವಿಕೆಯ ಮೂಲಕ ಕಾರ್ಯಕ್ರಮಗಳನ್ನು ರೂಪಿಸಲು ಮಾರ್ಗದರ್ಶನ ನೀಡುತ್ತದೆ. ಸ್ಥಳಿಯ ಸಂಸ್ಥೆಗಳು ತಮ್ಮದೇ ಆದ ಅಗತ್ಯ ಸಾಖಾಸ ಯೋಜನೆಗಳನ್ನು ಅಭಿವೃದ್ಧಿಪಡಿಸಿಪಡಿಸಿ ಕಾರ್ಯೋನ್ಮುಖವಾಗುವ ಅಗತ್ಯವಿದೆ. ಇದಕ್ಕೆ ಬೇಕಾಗುವ ಅರಿವು, ಮಾಹಿತಿ ಮತ್ತು ಸಾಮಾರ್ಥ್ಯ ಹೆಚ್ಚಿಸಿಕೊಳ್ಳಲು ಈ ತರಬೇತಿ ಸಹಾಯಕ. 'ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ'ದ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಮಾಹಿತಿಯನ್ನು ತರಬೇತಿ ಮುಖಾಂತರ ನೀಡಲು ಪ್ರಯತ್ನಿಸಲಾಗಿದೆ. ಈ ಕೈಪಿಡಿಗಳ ತಯಾರಿಕೆಯಲ್ಲಿ ವಿವಿಧ ಸಂಪನ್ಮೂಲ ವ್ಯಕ್ತಿಗಳ ಪೂರಕ ಮಾಹಿತಿಗಳು ಹಾಗೂ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಬೋಧಕರುಗಳು ಮತ್ತು ಸಿಬ್ಬಂದಿಗಳು ಸಾಕಷ್ಟು ಶ್ರಮ ವಹಿಸಿದ್ದು ಅವರು ಪ್ರಶಂಸಾರ್ಹರು.

ಸ್ಥಳಿಯ ಸಂಸ್ಥೆಗಳ ಜನಪ್ರತಿನಿಧಿಗಳು/ಅಧಿಕಾರಿಗಳು/ತಾಂತ್ರಿಕ ಸಿಬ್ಬಂದಿ ವರ್ಗದವರು ತರಬೇತಿಯ ಲಾಭ ಪಡೆದು ಉತ್ತಮವಾಗಿ ಸಾರ್ವಜನಿಕರಿಗೆ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಪ್ರಯತ್ನಶೀಲರಾಗುವುದು. ಈ ಮೂಲಕ ತಮ್ಮ ಕರ್ತವ್ಯದಲ್ಲಿ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

(ಡಾ|| ಅಮಿತಾ ಪ್ರಸಾದ್)

0821-2443264, 2443863, 2443831, 2522142 Fax : (0821) 25233899 e-mail : dgatim@yahoo.com, dgatimysore-kamy@nic.in
Website : atimysore.gov.in

ಪ್ರಾಣಲಿಂಗ ಶಿವಸಾಲಿ ಕೆ.ಎಂ.ಎ.ಎಸ್.
ನಿರ್ದೇಶಕರು

PRANALINGA SIVASALI K.M.A.S.
Director

ಕರ್ನಾಟಕ ಸರ್ಕಾರ
Government of Karnataka

ರಾಜ್ಯ ನಗರಾಭಿವೃದ್ಧಿ ಸಂಸ್ಥೆ
ಆಡಳಿತ ತರಬೇತಿ ಸಂಸ್ಥೆ ಆವರಣ,
ಲಲಿತ ಮಹಲ್ ರಸ್ತೆ, ಮೈಸೂರು – 570 011

State Institute for Urban Development
ATI Campus, Lalitha Mahal Road, Mysore - 570 011

08/06/2010

**–:ಮೊದಲ ಮಾತು:–**

ಭಾರತವು 5161 ನಗರ ಮತ್ತು ಪಟ್ಟಣಗಳನ್ನು ಹೊಂದಿದ್ದು, 31 ಕೋಟಿ ಜನ ಸಂಖ್ಯೆಯೊಂದಿಗೆ, ವಿಶ್ವದ ಎರಡನೇ ಅತಿದೊಡ್ಡ ನಗರೀಕರಣಗೊಂಡ ದೇಶವಾಗಿದೆ. ತೀವ್ರ ನಗರಾಭಿವೃದ್ಧಿ ಅದರಲ್ಲೂ ಮಹಾನಗರ ಪಾಲಿಕೆಗಳಲ್ಲಿ 'ಧಾರಣಾ ಶಕ್ತಿ' ದಾಟಿದ ಕಾರಣದಿಂದ ಮೂಲಭೂತ ಸೌಕರ್ಯ ಹಾಗೂ ಸೇವೆಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಜಾಗತಿಕವಾದ ನಗರೀಕರಣ ರಾಷ್ಟ್ರಗಳ ಆರ್ಥಿಕ ಭವಿಷ್ಯವನ್ನು ನಿರ್ಧರಿಸಿದರೂ, ಬಡತನದ ನಗರೀಕರಣ ಸವಾಲನ್ನು ಎದುರಿಸುತ್ತಿವೆ. ಆರ್ಥಿಕ ಉದಾರೀಕರಣ ನಗರಗಳ ನಡುವೆ ಅಪಾರ ಸ್ಪರ್ಧೆಯನ್ನು ಸೃಷ್ಟಿಸುತ್ತಿದೆ. ಜನಸಂಖ್ಯೆ ಮತ್ತು ಆರ್ಥಿಕ ಒತ್ತಡದಿಂದಾಗಿ ಪರಿಸರ, ಸಮಾನತೆ, ಜೀವನ ಗುಣಮಟ್ಟ ಮತ್ತು ಸಹ್ಯತೆ ವಿಷಯ ಆತಂಕಕಾರಿಯಾಗುತ್ತಿದೆ.

ನಗರೀಕರಣ ತೀವ್ರವಾಗಿ ಮೂಲಭೂತ ಸೌಕರ್ಯ ಮತ್ತು ಸೇವೆಗಳ ಪೂರೈಕೆಯ ಬೇಡಿಕೆ ಹೆಚ್ಚುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಸಾಖಾಸ) ಯೋಜನೆಗಳ ವಿವಿಧ ಮಾದರಿಗಳು ಈಗಾಗಲೇ ಅಪಾರವಾದ ಅನುಭವವನ್ನು ಪಡೆದಿವೆ. ಜನರ ಜೀವನ ಮಟ್ಟ ಮತ್ತು ಪರಿಸರ ಸಂರಕ್ಷಣೆಗೆ ಪೂರಕವಾದ ರೀತಿಯಲ್ಲಿ ಸಾಖಾಸ ಮಾದರಿ ಬಳಕೆ ಸ್ಥಳೀಯ ಸಂಸ್ಥೆಗಳ ನಿರ್ವಹಣೆಯಲ್ಲಿ ತೊಡಗಿರುವವರಿಗೆ ಸವಾಲಾಗಿದೆ. ಸಾಖಾಸ ವಿಧಾನವು ಅಪಾರವಾದ ಸಾಮರ್ಥ್ಯವನ್ನು ಹೊಂದಿದ್ದರು ಸಾರ್ವಜನಿಕರ ತಪ್ಪುಗ್ರಹಿಕೆ, ಗೊಂದಲಗಳು ಮತ್ತು ಪ್ರತಿರೋಧಗಳು ಕಂಡುಬರುತ್ತಿವೆ.

ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ರೂಪಿಸಲು ನಮಗೆ ಮಾರ್ಗದರ್ಶನ ನೀಡಿದ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಡಾ॥ ಶ್ರೀಮತಿ ಅಮಿತಾ ಪ್ರಸಾದ್, ಭಾ.ಆ.ಸೇ. ರವರಿಗೆ ಧನ್ಯವಾದಗಳು. ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಪೌರಾಡಳಿತ ಸುಧಾರಣೆ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲು ಹಣಕಾಸಿನ ನೆರವನ್ನು ನೀಡಿದ ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರವಿಂದ ಶ್ರೀವಾತ್ಸವ, ಭಾ.ಆ.ಸೇ. ರವರಿಗೆ ಧನ್ಯವಾದಗಳು. ತರಬೇತಿ ಕಾರ್ಯಕ್ರಮವನ್ನು ರೂಪಿಸುವಲ್ಲಿ ಪ್ರತಿ ಹಂತದಲ್ಲಿ ಸಲಹೆ–ಸಹಕಾರ, ಪ್ರೋತ್ಸಾಹ ನೀಡಿದ ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ನಾನು ಕೃತಜ್ಞನಾಗಿದ್ದೇನೆ.

ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊತ್ತಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಬೋಧಕರಾದ ಪ್ರೊ॥ ವಿ. ಜಗನ್ನಾಥ ರವರಿಗೆ ಧನ್ಯವಾದಗಳು.

ನಿರ್ದೇಶಕರು

Phone : 0821-2520116 Fax : 0821-2520164 E-mail : sivasalip@yahoo.co.in, directorsiud@yahoo.co.in
Website : www.siudmysore.gov.in

# ಸಾರ್ವಜನಿಕ ಖಾಸಗಿ ಸಹಭಾಗಿತ್ವ–ಹೊರಗುತ್ತಿಗೆ ಮತ್ತು ಅನುಷ್ಠಾನ
# ಮೂರು ದಿನಗಳ ತರಬೇತಿ

**ಅಡಕ**


**1.** ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ – ಆಶಯ ನುಡಿ

2. ನಿರ್ದೇಶಕರು ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು–ಕರ್ನಾಟಕ ಪೌರಾಡಳಿತ ಸುಧಾರಣಾ ಯೋಜನಾ ಕುರಿತು

3. ತರಬೇತಿ ಸಂಯೋಜಕರು ಪೀಠಿಕೆ– ತರಬೇತಿ ಕುರಿತು

4. ಪಠ್ಯಕ್ರಮ ಮತ್ತು ತರಬೇತಿ ಉದ್ದೇಶಗಳು

5. ಅಧಿವೇಶನಗಳ ಹಿನ್ನೆಲೆ ಸಾಹಿತ್ಯ

   5.1. ಅಧಿವೇಶನ 1.2 ಮತ್ತು 1.3 – ಸಹ್ಯ ನಗರಾಭಿವೃದ್ಧಿಯಲ್ಲಿ ಸಾಖಾಸ

   5.2. ಅಧಿವೇಶನ 1.4, 1.5 ಮತ್ತು 1.6 – ಸಾಖಾಸಪರಿಕಲ್ಪನೆ ಮತ್ತು ಮಾದರಿಗಳ ಅಭಿವೃದ್ಧಿಗೆ ಆಧಾರಗಳು

   5.3. ಅಧಿವೇಶನ 2.1 ಮತ್ತು 2.2 – ಯೋಜನಾ ಆರ್ಥಿಕ ನಿರ್ವಹಣೆ

   5.4. ಅಧಿವೇಶನ 2.3 ಮತ್ತು 2.4 – ಯೋಜನಾ ಕರಾರು, ಒಪ್ಪಂದ ಮತ್ತು ಬೆದರಿಕೆ ನಿರ್ವಹಣೆ

   5.5. ಅಧಿವೇಶನ 2.5 ಮತ್ತು 2.6 – ನಿದರ್ಶನಗಳು ಹಾಗೂ ಅಭ್ಯಾಸಗಳು

      5.5.1. ಸಾಲ್ಟ್ ಲೇಕ್: ಕೊಲ್ಕತ್ತಾ: ನೀರು ಸರಬರಾಜು ಮತ್ತು ಕೊಳಚೆ ನಿರ್ವಹಣೆ

      5.5.2. ಲಾಥೂರ್ ನಗರ: ಮಹಾರಾಷ್ಟ್ರ: ನೀರಿನ ಸಮಗ್ರ ನಿರ್ವಹಣೆ.

      5.5.3. ಹಲ್ದಿಯಾ: ಪಶ್ಚಿಮಾ ಬಂಗಾಳ: ನೀರು ಪೂರೈಕೆ ಮತ್ತು ನಿರ್ವಹಣೆ.

      5.5.4. ಆಲಂದೂರು: ತಮಿಳುನಾಡು: ಒಳಚರಂಡಿ ನಿರ್ಮಾಣ ಹಾಗೂ ನಿರ್ವಹಣೆ.

6.0. ಅಧಿವೇಶನ 3.1 ಮತ್ತು 3.2

   6.1. ಕ್ರಿಯಾ ಯೋಜನೆ ಹಾಗೂ ಸಾಖಾಸದ ಉತ್ತಮ ಯೋಜನೆಗಳ ದಾಖಲೀಕರಣದ ಮಾರ್ಗದರ್ಶಿಗಳು

   6.2. ಉತ್ತಮ ಆಡಳಿತದ ಮೂಲ ಮಂತ್ರಗಳು

7.0. ಅಧಿವೇಶನ 3.3 ಮತ್ತು 3.4–ನಗರ ಮೂಲಭೂತ ಸೌಕರ್ಯ ಯೋಜನೆಗಳ ಅಭಿವೃದ್ಧಿಗಾಗಿ ಸ್ಥಳಿಯ ಸಂಸ್ಥೆಗೆ ಮಾರ್ಗಸೂಚಿ

8. ಸಾಖಾಸ–ಮುಖ್ಯ ಪದಗಳು ಮತ್ತು ವ್ಯಾಖ್ಯಾನಗಳು